ಬುಧವಾರ, ಫೆಬ್ರುವರಿ 9, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 40 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ತಂತ್ರಜ್ಞಾನ**
ಶೈಲಿ, ಸ್ವರದ ಏರಿಳಿತ, ಬಾಡಿ ಲ್ಯಾಂಗ್ವೇಜ್ ಇವೆಲ್ಲವನ್ನೂ ಇಮೋಜಿಗಳು ಮಾಡುತ್ತವೆ ಎಂಬ ಕಾರಣಕ್ಕೆ ಅವುಗಳಿಗೆ ಅಷ್ಟೊಂದು ಪ್ರಸಿದ್ಧಿ ಸಿಕ್ಕಿರಬೇಕು.



ಆಳ-ಅಗಲ
ಬಾಹ್ಯಾಕಾಶ: ತ್ಯಾಜ್ಯದ ಗೋಜಲು

ಉತ್ತರ ಪ್ರದೇಶ: ಪ್ರಚಾರದ ಕೇಂದ್ರಕ್ಕೆ ಮಹಿಳೆ 6

‘ಲವ್ ಜಿಹಾದ್’ಗೆ ಕನಿಷ್ಠ 10 ವರ್ಷ ಸಜೆ’ 6

| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 57,808 ▲ | 17,266 ▲ | 74.74 ▼ |

ಕೋಮು ರಾಜಕೀಯ– 22 ಮಂದಿಗೆ ಗಾಯ • ಕುಶಾಲನಗರದಲ್ಲಿ ವಿದ್ಯಾರ್ಥಿಗೆ ಚೂರಿ ಇರಿತ

# ಹಿಜಾಬ್–ಕೇಸರಿ ಶಾಲು ಸಂಘರ್ಷ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹಿಜಾಬ್-ಕೇಸರಿ ಶಾಲಿನ ‘ವಸ್ತ್ರ ರಾಜಕೀಯ’ ವಿವಾದ ಮಂಗಳವಾರ ರಾಜ್ಯದ ಉದ್ದಗಲಕ್ಕೆ ವ್ಯಾಪಿಸಿದ್ದು, ಸಂಘರ್ಷಕ್ಕೆ ತಿರುಗಿದೆ. ಬಹುತೇಕ ಜಿಲ್ಲೆಗಳಲ್ಲಿ ಎರಡೂ ಗುಂಪುಗಳು ಪ್ರತಿಭಟನೆಗೆ ಇಳಿದಿದ್ದರಿಂದ ರಾಜ್ಯ ಅನೇಕ ಕಡೆಯ ಶಾಲಾ–ಕಾಲೇಜು ಆವರಣದಲ್ಲಿ ಉದ್ವಿಗ್ನ ವಾತಾವರಣ ಮನೆ ಮಾಡಿತ್ತು.

ಉಡುಪಿ ಜಿಲ್ಲೆಯ ಕೆಲವೇ ಕಾಲೇಜುಗಳಿಗೆ ಸೀಮಿತವಾಗಿದ್ದ ವಿವಾದ ವಾರ ಕಳೆಯುವಷ್ಟರಲ್ಲಿ, ರಾಜ್ಯದ ಹಲವು ಜಿಲ್ಲೆಗಳಿಗೆ ಹಬ್ಬಿದೆ. ಶಿವಮೊಗ್ಗ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಕಲ್ಲು ತೂರಾಟದಿಂದ 22 ವಿದ್ಯಾರ್ಥಿಗಳು, ಒಬ್ಬ ಪ್ರಾಂಶುಪಾಲ ಮತ್ತು ಒಬ್ಬ ಅತಿಥಿ ಉಪನ್ಯಾಸಕರು ಗಾಯಗೊಂಡಿದ್ದಾರೆ. ಶಿವಮೊಗ್ಗ ನಗರದಲ್ಲಿ ಎರಡು ದಿನಗಳ ಕಾಲ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಹಿಜಾಬ್ ಧರಿಸಿ ತರಗತಿ ಪ್ರವೇಶಿಸದಂತೆ ಶಿಕ್ಷಣ ಸಂಸ್ಥೆಗಳು ಹಾಗೂ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶಗಳನ್ನು ಪ್ರಶ್ನಿಸಿ ಮುಸ್ಲಿಂ ವಿದ್ಯಾರ್ಥಿನಿಯರು ಸಲ್ಲಿಸಿರುವ ಅರ್ಜಿಗಳ ವಿಚಾರಣೆಯೂ ಹೈಕೋರ್ಟ್‌ನಲ್ಲಿ ಮಂಗಳವಾರ ಆರಂಭವಾಗಿದೆ. ಎರಡೂ ಕಡೆಯ ವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿದೆ. ನ್ಯಾಯಾಲಯದಿಂದ ಮಧ್ಯಂತರ ಆದೇಶ ಪಡೆಯುವ ಪ್ರಯತ್ನ ಫಲಿಸದೇ ಇದ್ದುದರಿಂದ ತಾತ್ಕಾಲಿಕ ಕ್ರಮವಾಗಿ ಶಾಲೆ, ಕಾಲೇಜುಗಳನ್ನು ಬಂದ್ ಮಾಡುವ ನಿರ್ಧಾರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ದೆಹಲಿಯಿಂದಲೇ ಪ್ರಕಟಿಸಿದರು.

ಹಿಜಾಬ್ ಧರಿಸಿ ತರಗತಿ ಪ್ರವೇಶಿಸಲು ಅವಕಾಶ ನೀಡುವಂತೆ ಆಗ್ರಹಿಸಿ ಕೆಲವು ಜಿಲ್ಲೆಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರ ಪೋಷಕರು ಮತ್ತು ಕೆಲವು ‘ಸಂಘಟನೆ’ಗಳು ಪ್ರತಿಭಟನೆ ನಡೆಸಿವೆ. ಹಿಜಾಬ್ ನಿಷೇಧಿಸಬೇಕೆಂದು ಪ್ರತಿಭಟನೆಗೆ ಇಳಿದಿದ್ದವರಿಗೆ ಕೆಲವರು ಬಂಡಲುಗಟ್ಟಲೇ ಕೇಸರಿ ಶಾಲುಗಳನ್ನು ವಾಹನಗಳಲ್ಲಿ ತುಂಬಿಕೊಂಡು ಬಂದು ಪೂರೈಸಿದ ಘಟನೆಗಳು ವರದಿಯಾಗಿದೆ.

**ಬಿಗುವಿನ ವಾತಾವರಣ:** ಶಿವಮೊಗ್ಗ, ಸಾಗರ, ಶಿಕಾರಿಪುರ, ಹರಿಹರ, ಹೊಸದುರ್ಗ, ತಿಪಟೂರು, ಇಂಡಿ, ರಬಕವಿ–ಬನಹಟ್ಟಿ ಸೇರಿದಂತೆ ಹಲವು ಕಡೆಗಳಲ್ಲಿ ಕಾಲೇಜುಗಳಲ್ಲಿ ಮಂಗಳವಾರ ಸಂಘರ್ಷದ ವಾತಾವರಣ ನಿರ್ಮಾಣವಾಯಿತು. ಹಿಜಾಬ್ ಮತ್ತು ಕೇಸರಿ ಶಾಲು ಧರಿಸಿ ಬಂದವರನ್ನು ಕಾಲೇಜು ಸಿಬ್ಬಂದಿ ಪ್ರವೇಶ ದ್ವಾರದಲ್ಲೇ ತಡೆದರು. ಎರಡೂ ಕಡೆಯವರು ಅಲ್ಲಿಯೇ ನಿಂತು ಪ್ರತಿಭಟನೆ ನಡೆಸಿದರು. ಕೆಲವಡೆ ಪರಸ್ಪರ ಕೈ ಮಿಲಾಯಿಸುವ ಹಂತವನ್ನೂ ತಲುಪಿದ್ದರು.

ಶಿವಮೊಗ್ಗದ ಬಾಪೂಜಿನಗರದ ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿನ ಧ್ವಜಸ್ತಂಭ ಏರಿದ ವಿದ್ಯಾರ್ಥಿ ಅಲ್ಲಿ ಕೇಸರಿ ಬಾವುಟ ಹಾರಿಸಿದ್ದನು. ಪೊಲೀಸರು ಅದನ್ನು ತೆರವುಗೊಳಿಸಿದರು.

ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಎರಡೂ ಗುಂಪಿನ ನಡುವೆ ಸಂಘರ್ಷದ ವಾತಾವರಣ ನಿರ್ಮಾಣವಾಗಿತ್ತು.

ಮಂಡ್ಯದಲ್ಲಿ ಬುರ್ಖಾ ಧರಿಸಿ ದ್ವಿಚಕ್ರ ವಾಹನದಲ್ಲಿ ಬಂದ ವಿದ್ಯಾರ್ಥಿನಿಯೊಬ್ಬರನ್ನು ನೋಡಿದ ಕೇಸರಿ ಶಾಲು ಹೊದ್ದಿದ್ದ ವಿದ್ಯಾರ್ಥಿಗಳು, ಜೈಶ್ರೀರಾಮ್ ಘೋಷಣೆ ಕೂಗಿದರು. ಅದಕ್ಕೆ ಪ್ರತಿಯಾಗಿ, ಅಲ್ಲಾ ಹು ಅಕ್ಬರ್ ಎಂದು ವಿದ್ಯಾರ್ಥಿನಿ ಘೋಷಣೆ ಕೂಗಿದರು. ಘೋಷಣೆ ಪೈಪೋಟಿ ತಾರಕಕ್ಕೇರಿದಾಗ, ಪರಿಸ್ಥಿತಿ ಉದ್ವಿಗ್ನತೆ ತಿರುಗಿತ್ತು.



ಶಿವಮೊಗ್ಗ ಬಾಪೂಜಿನಗರ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಮಂಗಳವಾರ ಹಿಜಾಬ್ ವಿರೋಧಿಸಿ ನಡೆದ ಪ್ರತಿಭಟನೆ ವೇಳೆ ವಿದ್ಯಾರ್ಥಿಯೊಬ್ಬ ಧ್ವಜಸ್ತಂಭದಲ್ಲಿ ಕೇಸರಿ ಬಾವುಟ ಹಾರಿಸಿದನು –ಪ್ರಜಾವಾಣಿ ಚಿತ್ರ

## ಪ್ರೌಢಶಾಲೆ, ಕಾಲೇಜುಗಳಿಗೆ 3 ದಿನ ರಜೆ

**ಬೆಂಗಳೂರು:** ವಿದ್ಯಾರ್ಥಿಗಳು ನಡೆಸುತ್ತಿರುವ ಪ್ರತಿಭಟನೆಗೆ ಘರ್ಷಣೆಯ ಹಾದಿ ಹಿಡಿಯುತ್ತಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ರಾಜ್ಯದಾದ್ಯಂತ ಒಂಬತ್ತನೇ ತರಗತಿಯಿಂದ ಸ್ನಾತಕೋತ್ತರ ಪದವಿ ತರಗತಿಗಳ ವರೆಗೆ ಬುಧವಾರದಿಂದ ಮೂರು ದಿನಗಳ ಕಾಲ ರಜೆ ಘೋಷಿಸಲಾಗಿದೆ.

ಶಾಲೆ, ಕಾಲೇಜುಗಳಿಗೆ ರಜೆ ಘೋಷಿಸಿ ಆನ್‌ಲೈನ್ ತರಗತಿ ನಡೆಸುವಂತೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದ್ದರು. ನವದೆಹಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪ್ರೌಢಶಾಲೆ ಮತ್ತು ಕಾಲೇಜುಗಳಿಗೆ ರಜೆ ನೀಡುವ ನಿರ್ಧಾರವನ್ನು ಮಂಗಳವಾರ ಸಂಜೆ ಅಲ್ಲಿಂದಲೇ ಪ್ರಕಟಿಸಿದರು.

’ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ಸೌಹಾರ್ದ ಮತ್ತು ತಾಳ್ಮೆಯಿಂದ ವರ್ತಿಸಬೇಕು. ವಸ್ತ್ರಸಂಹಿತೆ ವಿಚಾರದಲ್ಲಿ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದು, ತೀರ್ಪು ಬರಲಿದೆ. ಎಲ್ಲ ವಿದ್ಯಾರ್ಥಿಗಳು ಒಟ್ಟಿಗೆ ಕುಳಿತು ಕಲಿಯುವಂತಾಗಬೇಕು. ಶಾಂತಿ, ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಎಲ್ಲರೂ ನಡೆದುಕೊಳ್ಳಬೇಕು’ ಎಂದು ಬೊಮ್ಮಾಯಿ ಮನವಿ ಮಾಡಿದರು.

ಈ ವಿಚಾರ ಇತ್ಯರ್ಥವಾಗುವವರೆಗೂ ಯಾರೂ ಶಾಂತಿ ಕದಡಲು ಯತ್ನಿಸಬಾರದು. ಶಾಂತಿ, ಸುವ್ಯವಸ್ಥೆ ಕಾಪಾಡಲು ಪೊಲೀಸರಿಗೂ ನಿರ್ದೇಶನ ನೀಡಲಾಗಿದೆ. ನ್ಯಾಯಾಲಯದ ತೀರ್ಪಿಗೆ ಸರ್ಕಾರ ಬದ್ಧವಾಗಿರಲಿದೆ ಎಂದರು.

‘ವಿಡಿಯೊ’ ನೋಡಲು ಕೋಡ್ ಸ್ಕ್ಯಾನ್ ಮಾಡಿ....
ಪ್ರಜಾವಾಣಿ ನೋಡಿಯೊ

## ಲೋಕಸಭೆಯಲ್ಲಿ ಸಭಾತ್ಯಾಗ

**ನವದೆಹಲಿ:** ಕರ್ನಾಟಕದಲ್ಲಿ ಭುಗಿಲೆದ್ದಿರುವ ‘ಹಿಜಾಬ್’ ವಿಷಯದ ಮೇಲಿನ ಚರ್ಚೆಗೆ ಅವಕಾಶ ನೀಡುವಂತೆ ಲೋಕಸಭೆಯಲ್ಲಿ ಆಗ್ರಹಿಸಿದ ಕಾಂಗ್ರೆಸ್, ಡಿಎಂಕೆ, ಸಿಪಿಐ (ಎಂ), ಸಿಪಿಐ, ವಿಸಿಕೆ, ಎಂಡಿಎಂಕೆ, ಮುಸ್ಲಿಂ ಲೀಗ್ ಮತ್ತು ಜೆಎಂಎಂ ಪಕ್ಷಗಳ ಸದಸ್ಯರು, ಚರ್ಚೆಗೆ ಅವಕಾಶ ಸಿಗದ ಕಾರಣ ಮಂಗಳವಾರ ಸಭಾತ್ಯಾಗ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

‘ಹಿಜಾಬ್ ಧರಿಸುವುದು ಅಪರಾಧವಲ್ಲ. ಈ ಕುರಿತು ಕೇಂದ್ರ ಸರ್ಕಾರ ಪ್ರತಿಕ್ರಿಯಿಸಬೇಕು’ ಎಂದು ವಿರೋಧ ಪಕ್ಷಗಳ ಸದಸ್ಯರು ಒತ್ತಾಯಿಸಿದರು.

ಇನ್ನಷ್ಟು ಸುದ್ದಿಗಳು 2, 5

## ಪರಿಸ್ಥಿತಿ ನಿಭಾಯಿಸಿ: ಹೈಕೋರ್ಟ್ ತಾಕೀತು

**ಬೆಂಗಳೂರು:** ‘ಹಿಜಾಬ್ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಾದ್ಯಂತ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಅಶಾಂತಿ ಸೃಷ್ಟಿಗೆ ಮುಂದಾಗಬಾರದು. ಈ ರಾಜ್ಯದ ಜನರು ಮತ್ತು ವಿದ್ಯಾರ್ಥಿಗಳು ಒಳ್ಳೆಯವರಿದ್ದಾರೆ. ಆದರೆ, ಕೆಲವೇ ಕೆಲವು ದುರುಳರಿಂದ ಅಶಾಂತಿ ಸೃಷ್ಟಿಸುವ ಪ್ರಯತ್ನ ನಡೆಯುತ್ತಿದೆ. ಆದ್ದರಿಂದ, ರಾಜ್ಯ ಸರ್ಕಾರ ಶಾಂತಿ ಮತ್ತು ಕಾನೂನು ಪಾಲನೆ ಹೊಣೆಯನ್ನು ಸಮರ್ಥವಾಗಿ ನಿಭಾಯಿಸುವ ಅಗತ್ಯವಿದೆ’ ಎಂದು ಹೈಕೋರ್ಟ್ ಪ್ರತಿಪಾದಿಸಿದೆ.

‘ಹಿಜಾಬ್ ಧರಿಸಿ ಕಾಲೇಜು ತರಗತಿ ಪ್ರವೇಶಿಸಬಾರದು‘ ಎಂದು ಉಡುಪಿಯ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಆಡಳಿತ ಮಂಡಳಿ ಹೇರಿರುವ ನಿರ್ಬಂಧ ಹಾಗೂ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಇದೇ 5ರಂದು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶ ಪ್ರಶ್ನಿಸಿದಂತೆ ಸಲ್ಲಿಸಲಾಗಿರುವ ಹಲವು ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.



**ಎಷ್ಟೇ ಸಂಖ್ಯೆಯ ಅರ್ಜಿಗಳು ದಾಖಲಾದರೂ ಎಲ್ಲವುಗಳ ಮನವಿ ಒಂದೇ ಆಗಿರುತ್ತದೆ ಮತ್ತು ತೀರ್ಪು ಹಿಜಾಬ್‌ಗೆ ಸಂಬಂಧಿಸಿದ್ದೇ ಆಗಿರುತ್ತದೆ. ಆದ್ದರಿಂದ ಈ ಎಲ್ಲ ಅರ್ಜಿಗಳ ವಿಚಾರಣೆಯನ್ನು ಒಂದು ವಾರದಲ್ಲಿ ಮುಗಿಸಿ ತೀರ್ಪು ನೀಡಲು ಪ್ರಯತ್ನಿಸುತ್ತೇನೆ**
**ಕೃಷ್ಣ ಎಸ್.ದೀಕ್ಷಿತ್**
ನ್ಯಾಯಮೂರ್ತಿ

ದಿನದ ಕಲಾಪದ ಅಂತ್ಯಕ್ಕೆ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ, ‘ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಹಿಜಾಬ್‌ಗೆ ಸಂಬಂಧಿಸಿದಂತೆ ಯಾವುದೇ ಪ್ರತಿಭಟನೆ ನಡೆಸದಂತೆ ಆದೇಶ ನೀಡಬೇಕು‘ ಎಂದು ಕೋರಿದರು. ಈ ಕೋರಿಕೆಯನ್ನು ಸಾರಾಸಗಟಾಗಿ ನಿರಾಕರಿಸಿದ ನ್ಯಾಯಪೀಠ, ‘ರಸ್ತೆಗಳಲ್ಲಿ ಪ್ರತಿಭಟನೆ ನಡೆಸುತ್ತಿರುವವರು ಅರ್ಜಿದಾರರಲ್ಲ. ಸರ್ಕಾರವು ಕಾನೂನು ಮತ್ತು ಶಾಂತಿ ಪಾಲನೆಯ ತನ್ನ ಜವಾಬ್ದಾರಿಯನ್ನು ಗಂಭೀರವಾಗಿ ನಿಭಾಯಿಸಬೇಕು‘ ಎಂದು ತಾಕೀತು ಮಾಡಿತು.



6ನೇ ಪುಟ ನೋಡಿ

## ಶಾಸಕ ಹಾಲಪ್ಪ ಎದುರೇ ವಿದ್ಯಾರ್ಥಿಗೆ ಹಲ್ಲೆ

- ಶಿವಮೊಗ್ಗದ ಸಹ್ಯಾದ್ರಿ ಕಾಲೇಜು ಮತ್ತು ಬಾಪೂಜಿನಗರ ಕಾಲೇಜಿನಲ್ಲಿ ಕಲ್ಲು ತೂರಾಟ–ಆರು ವಿದ್ಯಾರ್ಥಿಗಳಿಗೆ ಗಾಯ
- ಸಾಗರದಲ್ಲಿ ಬಿಜೆಪಿ ಶಾಸಕ ಹರತಾಳು ಹಾಲಪ್ಪ ಎದುರಿನಲ್ಲೇ ವಿದ್ಯಾರ್ಥಿಯೊಬ್ಬನ ಮೇಲೆ ಹಲ್ಲೆ
- ಕೊಡಗು ಜಿಲ್ಲೆ ಕುಶಾಲನಗರದಲ್ಲಿ ಬಿ.ಎ ವಿದ್ಯಾರ್ಥಿ ಬೈಲುಕುಪ್ಪೆಯ ಸಂದೀಪ್‌ಗೆ ಚೂರಿಯಿಂದ ಇರಿತ
- ಸಾಗರದಲ್ಲಿ ಕಲ್ಲು ತೂರಾಟ–ಇಬ್ಬರು ವಿದ್ಯಾರ್ಥಿಗಳಿಗೆ ತೀವ್ರ ಗಾಯ ಮತ್ತು 12 ಮಂದಿಗೆ ಸಣ್ಣಪುಟ್ಟ ಗಾಯ
- ಶಿಕಾರಿಪುರದಲ್ಲಿ ಬಸ್‌ಗೆ ಕಲ್ಲು ತೂರಾಟ; ಪೊಲೀಸರಿಂದ ಲಾಠಿ ಪ್ರಹಾರ
- ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಘರ್ಷಣೆ–ಪ್ರಾಂಶುಪಾಲ ಮತ್ತು ಅತಿಥಿ ಉಪನ್ಯಾಸಕರ ಮೇಲೆ ಹಲ್ಲೆ
- ದಾವಣಗೆರೆ ಜಿಲ್ಲೆ ಹರಿಹರದಲ್ಲಿ ಲಾಠಿ ಪ್ರಹಾರ, ಅಶ್ರುವಾಯು ಪ್ರಯೋಗ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದಲ್ಲಿ ಲಾಠಿ ಪ್ರಹಾರ

## ‘ಕಾಂಗ್ರೆಸ್ ಇಲ್ಲದಿರುತ್ತಿದ್ದರೆ ತುರ್ತುಸ್ಥಿತಿಯೇ ಇರುತ್ತಿರಲಿಲ್ಲ’



**ನವದೆಹಲಿ (ಪಿಟಿಐ):** ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಬೇಕು ಎಂದು ಮಹಾತ್ಮ ಗಾಂಧಿ ಅವರೇ ಬಯಸಿದ್ದರು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಸಭೆಯಲ್ಲಿ ಮಂಗಳವಾರ ಹೇಳಿದ್ದಾರೆ. ಕಾಂಗ್ರೆಸ್ ಪಕ್ಷವು ಇಲ್ಲದಿರುತ್ತಿದ್ದರೆ ತುರ್ತುಪರಿಸ್ಥಿತಿ, ಸಿಖ್ಖರ ಹತ್ಯಾಕಾಂಡ, ಜಾತಿ ರಾಜಕಾರಣ, ಕಾಶ್ಮೀರಿ ಪಂಡಿತರ ವಲಸೆ ಯಾವುದೂ ಇರುತ್ತಿರಲಿಲ್ಲ ಎಂದು ಅವರು ಹೇಳಿದ್ದಾರೆ. ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಜಂಟಿ ಅಧಿವೇಶನ ಉದ್ದೇಶಿಸಿ ಮಾಡಿದ್ದ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಪ್ರಧಾನಿ ಉತ್ತರಿಸಿದರು.

‘ದುರ್ಬಲವಾಗಿರುವ ಕಾಂಗ್ರೆಸ್ ಪಕ್ಷವು ಒಂದು ರೀತಿಯಲ್ಲಿ ನಗರ ನಕ್ಸಲರ ಹಿಡಿತದಲ್ಲಿದೆ. ಹಾಗಾಗಿಯೇ ಆ ಪಕ್ಷದ ಯೋಚನೆಯು ನಕಾರಾತ್ಮಕವಾಗಿದೆ’ ಎಂದು ಮೋದಿ ಆಪಾದಿಸಿದರು.

ಸಂವಿಧಾನದಲ್ಲಿ ‘ಭಾರತವು ದೇಶ ಎಂಬುದರ ಬದಲಿಗೆ ರಾಜ್ಯಗಳ ಒಕ್ಕೂಟ’ ಎಂಬ ಉಲ್ಲೇಖ ಇದೆ ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಲೋಕಸಭೆಯಲ್ಲಿ ಹೇಳಿದ್ದಕ್ಕೆ ಪ್ರಧಾನಿ ಪ್ರತಿಕ್ರಿಯೆ ನೀಡಿದರು. ‘ದೇಶ ಎಂಬ ಪರಿಕಲ್ಪನೆಯು ಅಸಾಂವಿಧಾನಿಕ ಎಂದು ಕಾಂಗ್ರೆಸ್ ಭಾವಿಸಿದ್ದರೆ ತನ್ನ ಹೆಸರನ್ನು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಎಂಬುದರ ಬದಲು ಫೆಡರೇಷನ್ ಆಫ್ ಕಾಂಗ್ರೆಸ್ ಎಂದು ಬದಲಿಸಿಕೊಳ್ಳಲಿ’ ಎಂದರು.

‘ಮಹಾತ್ಮ ಗಾಂಧಿ ಅವರ ಆಕಾಂಕ್ಷೆಯಂತೆ ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಿದ್ದರೆ ಪ್ರಜಾಪ್ರಭುತ್ವವು ವಂಶಾಡಳಿತದಿಂದ ಮುಕ್ತವಾಗುತ್ತಿತ್ತು. ಭ್ರಷ್ಟಾಚಾರವು ಸಾಂಸ್ಥಿಕಗೊಳ್ಳುತ್ತಿರಲಿಲ್ಲ. ಜಾತೀಯತೆ ಮತ್ತು ಪ್ರಾದೇಶಿಕವಾದವು ಇಷ್ಟೊಂದು ಆಳವಾಗಿ ಬೇರೂರುತ್ತಿರಲಿಲ್ಲ’ ಎಂದು ಮೋದಿ ಟೀಕಿಸಿದರು. 90 ನಿಮಿಷದ ಭಾಷಣದ ಉದ್ದಕ್ಕೂ ಅವರು ಕಾಂಗ್ರೆಸ್ ಪಕ್ಷವನ್ನು ಟೀಕಿಸಿದರು.

### ‘ಗಾಂಧೀಜಿ ಹಂತಕರ ಆರಾಧಕರಿಗೆ ಕಾಂಗ್ರೆಸ್ ವಿಸರ್ಜನೆ ಹಂಬಲ’



ಪ್ರಧಾನಿಯವರು ಕಾಂಗ್ರೆಸ್ ಪಕ್ಷವನ್ನು ಟೀಕಿಸುತ್ತಿದ್ದಾರೆಯೇ ವಿನಾ ರಾಷ್ಟ್ರಪತಿಯವರ ಭಾಷಣದ ಬಗ್ಗೆ ಏನನ್ನೂ ಹೇಳಿಲ್ಲ ಎಂದು ಟೀಕಿಸಿ, ಕಾಂಗ್ರೆಸ್ ಸಂಸದರು ರಾಜ್ಯಸಭೆಯಿಂದ ಸಭಾತ್ಯಾಗ ಮಾಡಿದರು. ‘ಸರ್ಕಾರದ ಯೋಜನೆಗಳು ಮತ್ತು ಸದಸ್ಯರು ಚರ್ಚೆಯ ಸಂದರ್ಭದಲ್ಲಿ ವ್ಯಕ್ತಪಡಿಸಿದ ಕಳವಳಗಳ ಬಗ್ಗೆ ಮಾತನಾಡುವುದು ಬಿಟ್ಟು ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಮಹಾತ್ಮ ಗಾಂಧಿಯ ಹಂತಕರನ್ನು ಆರಾಧಿಸುವವರು ಈಗ ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಬೇಕು ಎನ್ನುತ್ತಿದ್ದಾರೆ’ ಎಂದು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಇನ್ನಷ್ಟು ಸುದ್ದಿಗಳು 6

## ‘ಪತ್ರಕರ್ತರು ಪೂರ್ವಗ್ರಹಪೀಡಿತರಾಗಿ ವರ್ತಿಸಿದರೆ ಮಾನ್ಯತೆ ರದ್ದು’

**ನವದೆಹಲಿ (ಪಿಟಿಐ):** ‘ರಾಷ್ಟ್ರದ ಭದ್ರತೆ, ಸಾರ್ವಭೌಮತೆ ಹಾಗೂ ಏಕತೆ ಅಲ್ಲದೇ, ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ವಿಷಯದಲ್ಲಿ ಪತ್ರಕರ್ತರು ಪೂರ್ವಗ್ರಹಪೀಡಿತರಂತೆ ನಡೆದುಕೊಂಡಲ್ಲಿ, ಸರ್ಕಾರ ನೀಡಿರುವ ಮಾನ್ಯತೆಯನ್ನು ಅವರು ಕಳೆದುಕೊಳ್ಳಬೇಕಾಗುತ್ತದೆ’ ಎಂದು ವಾರ್ತಾ ಮತ್ತು ಪ್ರಸಾರ ಸಚಿವಾಲಯ ತಿಳಿಸಿದೆ.

ಸಚಿವಾಲಯ ಸೋಮವಾರ ಬಿಡುಗಡೆ ಮಾಡಿರುವ ‘ಕೇಂದ್ರೀಯ ಮಾಧ್ಯಮ ಮಾನ್ಯತೆ ಮಾರ್ಗಸೂಚಿಗಳು -2022’ರಲ್ಲಿ ಉಲ್ಲೇಖಿಸಿರುವ ನೂತನ ಮಾರ್ಗಸೂಚಿಗಳಲ್ಲಿ ಈ ವಿಷಯ ತಿಳಿಸಲಾಗಿದೆ.

‘ಮಿತ್ರ ರಾಷ್ಟ್ರಗಳೊಂದಿಗಿನ ಸಂಬಂಧಗಳ ಮೇಲೆ ಪರಿಣಾಮ ಬೀರುವುದು, ನ್ಯಾಯಾಂಗ ನಿಂದನೆ, ಮಾನನಷ್ಟ ಅಥವಾ ಅಪರಾಧಕ್ಕೆ ಪ್ರಚೋದಿಸುವಂತಹ ವಿಷಯಗಳಿಗೆ ಸಂಬಂಧಿಸಿದಂತೆಯೂ ಪತ್ರಕರ್ತರು ಪೂರ್ವಗ್ರಹಪೀಡಿತರಂತೆ ವರ್ತಿಸಬಾರದು. ಇಂಥ ವರ್ತನೆ ಕಂಡುಬಂದಲ್ಲಿ ಅವರಿಗೆ ನೀಡಿರುವ ಮಾನ್ಯತೆಯನ್ನು ರದ್ದುಗೊಳಿಸಬಹುದಾಗಿದೆ’ ಎಂದು ಈ ನೂತನ ನೀತಿಯಲ್ಲಿ ತಿಳಿಸಲಾಗಿದೆ.

ಆನ್‌ಲೈನ್ ಸುದ್ದಿ ವೇದಿಕೆಗಳಲ್ಲಿ ಕಾರ್ಯ ನಿರ್ವಹಿಸುವ ಪತ್ರಕರ್ತರಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಸಹ ಬಿಡುಗಡೆ ಮಾಡಲಾಗಿದೆ. ಸುದ್ದಿಗಳನ್ನು ಸಂಗ್ರಹಿಸಿ, ಜನರಿಗೆ ಒದಗಿಸುವ ಕಾರ್ಯದಲ್ಲಿ ನಿರತರಾದವರನ್ನು (ಅಗ್ರಿಗೇಟರ್) ಮಾನ್ಯತೆಗಾಗಿ ಪರಿಗಣಿಸುವುದಿಲ್ಲ’ ಎಂದೂ ಸಚಿವಾಲಯ ತಿಳಿಸಿದೆ.

## ಏ.16 ರಿಂದ ಮೇ 6ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ

**ಬೆಂಗಳೂರು:** ಪ್ರಸಕ್ತ ಸಾಲಿನ (2021–22) ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಏಪ್ರಿಲ್ 16ರಿಂದ ಮೇ 6ರವರೆಗೆ ನಡೆಯಲಿದೆ. ಪರೀಕ್ಷೆಯ ಅಂತಿಮ ವೇಳಾಪಟ್ಟಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆ ಮಂಗಳವಾರ ಪ್ರಕಟಿಸಿದೆ.

ವೇಳಾಪಟ್ಟಿಯ ಪ್ರಕಾರ, ಏಪ್ರಿಲ್ 16ರಂದು ಗಣಿತ, 18ರಂದು ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ, 20ರಂದು ಇತಿಹಾಸ, ಭೌತವಿಜ್ಞಾನ, 21ರಂದು ಸಂಸ್ಕೃತ, 22ರಂದು ವ್ಯವಹಾರ ಅಧ್ಯಯನ, 23ರಂದು ರಸಾಯನವಿಜ್ಞಾನ, 25ರಂದು ಅರ್ಥಶಾಸ್ತ್ರ, 26ರಂದು ಹಿಂದಿ, 28ರಂದು ಕನ್ನಡ, 30ರಂದು ಸಮಾಜಶಾಸ್ತ್ರ, ಮೇ 2ರಂದು ಜೀವವಿಜ್ಞಾನ, ಭೂಗೋಳ ವಿಜ್ಞಾನ, ಮೇ 4ರಂದು ಇಂಗ್ಲಿಷ್, ಮೇ 6ರಂದು ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭ ವಿಜ್ಞಾನ ಪರೀಕ್ಷೆಗಳು ನಡೆಯಲಿವೆ.

ಆರ್‌.ಆರ್‌. ನಗರದಲ್ಲಿ ಕಾಮಗಾರಿ ನಿರ್ವಹಿಸದೆ ಬಿಲ್ ಪಾವತಿ

## ನಕಲಿ ಬಿಲ್: ₹ 118.26 ಕೋಟಿ ಅಕ್ರಮ

• ರಾಜೇಶ್ ರೈ ಚಟ್ಲ

**ಬೆಂಗಳೂರು:** ರಾಜರಾಜೇಶ್ವರಿನಗರ (ಆರ್.ಆರ್. ನಗರ) ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿಯ ನವ ನಗರೋತ್ಥಾನ ಯೋಜನೆಯಡಿ ಮಂಜೂರಾದ ಕಾಮಗಾರಿಗಳನ್ನು ನಿರ್ವಹಿಸದೆ, ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ನಕಲಿ ಬಿಲ್ ಪಾವತಿಸಿ ರಾಜ್ಯದ ಬೊಕ್ಕಸಕ್ಕೆ ₹ 118.26 ಕೋಟಿ ನಷ್ಟ ಉಂಟು ಮಾಡಿರುವುದು ಲೋಕಾಯುಕ್ತ ತನಿಖೆಯಿಂದ ಬಹಿರಂಗವಾಗಿದೆ.

‘ಆರ್.ಆರ್. ನಗರ ಕ್ಷೇತ್ರದಲ್ಲಿ 2020ರ ಜನವರಿಯಲ್ಲಿ 126 ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸದೆ ₹ 250 ಕೋಟಿ ಲಪಟಾಯಿಸಿ ಭ್ರಷ್ಟಾಚಾರ ಎಸಗಲಾಗಿದೆ’ ಎಂದು ಆರೋಪಿಸಿದ್ದ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಅವರು, ದಾಖಲೆಗಳ ಸಹಿತ 2020ರ ಸೆಪ್ಟೆಂಬರ್‌ನಲ್ಲಿ ಲೋಕಾಯುಕ್ತರಿಗೆ ದೂರು ನೀಡಿದ್ದರು. 'ಈ ಪ್ರಕರಣದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ತಪ್ಪಿತಸ್ಥ ಎಂಜಿನಿಯರ್‌ಗಳನ್ನು ಬಂಧಿಸಿ ವಿಚಾರಣೆ ನಡೆಸಬೇಕು' ಎಂದು ವಿನಂತಿಸಿದ್ದರು.

ಈ ಬಗ್ಗೆ ತನಿಖೆ ನಡೆಸಿದ್ದ ಲೋಕಾಯುಕ್ತ ನ್ಯಾಯಮೂರ್ತಿ ಪಿ.ವಿಶ್ವನಾಥ ಶೆಟ್ಟಿ (ಜ.27ರಂದು ನಿವೃತ್ತರಾಗಿದ್ದಾರೆ), 60 ಪುಟಗಳ ವರದಿಯನ್ನು ಜ.24ರಂದು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ವರದಿ ಪ್ರತಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

### ಆಪಾದಿತರು ಯಾರೆಲ್ಲ?

- ದೊಡ್ಡಯ್ಯ, ಮುಖ್ಯ ಎಂಜಿನಿಯರ್, ತಾಂತ್ರಿಕ ಮತ್ತು ಜಾಗೃತ ಕೋಶ (ಟಿವಿಸಿಸಿ), ಬಿಬಿಎಂಪಿ ಮುಖ್ಯ ಕಚೇರಿ
- ಸತೀಶ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಟಿವಿಸಿಸಿ, ಬಿಬಿಎಂಪಿ
- ಬಸವರಾಜ್, ಕಾರ್ಯಪಾಲಕ ಎಂಜಿನಿಯರ್ (ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪ್ರಭಾರ), ಆರ್‌ಆರ್ ನಗರ ಉಪ ವಿಭಾಗ
- ಸಿದ್ದರಾಮಯ್ಯ, ಸಹಾಯಕ ಎಂಜಿನಿಯರ್, ವಾರ್ಡ್ ನಂ 129 ಮತ್ತು 160, ಆರ್‌ಆರ್ ನಗರ ಉಪ ವಿಭಾಗ
- ಉಮೇಶ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಸಹಾಯಕ ಎಂಜಿನಿಯರ್ ಪ್ರಭಾರ, ವಾರ್ಡ್ ನಂಬರ್ 73, ಲಗ್ಗೆರೆ ಉಪ ವಿಭಾಗ)
- ಚಂದ್ರನಾಥ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಕೆಆರ್‌ಐಡಿಎಲ್
- ಶ್ರೀನಿವಾಸ್, ಕಾರ್ಯಪಾಲಕ ಎಂಜಿನಿಯರ್, ಕೆಆರ್‌ಐಡಿಎಲ್
- ವೆಂಕಟಲಕ್ಷ್ಮಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಟಿವಿಸಿಸಿ, ಬಿಬಿಎಂಪಿ
- ಶ್ರೀತೇಜ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಟಿವಿಸಿಸಿ, ಬಿಬಿಎಂಪಿ

6ನೇ ಪುಟ ನೋಡಿ

ಭಟ್ಕಳ: ಬಡ ಕುಟುಂಬಗಳ ಮಕ್ಕಳ ನೆರವಿಗೆ ವ್ಯವಸ್ಥೆ ರೂಪಿಸಿದ ಶಿಕ್ಷಕ

## ವಿದ್ಯಾರ್ಥಿನಿಯರ ನೆರವಿಗೆ ‘ಸ್ವಾವಲಂಬಿ ಗುಂಪು’

• ಮೋಹನ ನಾಯ್ಕ

**ಭಟ್ಕಳ:** ಸ್ವ–ಸಹಾಯ ಸಂಘಗಳ ಮೂಲಕ ಮಹಿಳೆಯರು ಸ್ವಾವಲಂಬಿ ಜೀವನ ನಡೆಸುವ ಮಾದರಿಯಲ್ಲೇ ಶಿಕ್ಷಕರೊಬ್ಬರು ವಿದ್ಯಾರ್ಥಿನಿಯರ ಸಲುವಾಗಿ ಗುಂಪು ರಚಿಸಿದ್ದಾರೆ. ಅವರ ಶೈಕ್ಷಣಿಕ ಅನುಕೂಲಕ್ಕೆ ಸಹಕಾರಿಯಾಗುವಂತೆ ಹಣಕಾಸು ವ್ಯವಸ್ಥೆ ರೂಪಿಸಿದ್ದಾರೆ.

ತಾಲ್ಲೂಕಿನ ಕೊಡಸೂಳು ಶಾಲೆಯ ಶಿಕ್ಷಕ ಪರಮೇಶ್ವರ ನಾಯ್ಕ ಇದರ ರೂವಾರಿ. ಅವರ ಪ್ರೇರಣೆಯಿಂದ 100ಕ್ಕೂ ಅಧಿಕ ವಿದ್ಯಾರ್ಥಿನಿಯರು ಸ್ವ–ಸಹಾಯ ಗುಂಪಿನ ಮೂಲಕ ತಮ್ಮ ಶುಚಿತ್ವ ಹಾಗೂ ಶಿಕ್ಷಣದ ವೆಚ್ಚ ಭರಿಸುತ್ತಿದ್ದಾರೆ. ಈಗ ಏಳು ಗುಂಪುಗಳ ರಚನೆಯಾಗಿದ್ದು, ತಮ್ಮ ವಂತಿಗೆಯ ಹಣವನ್ನು ಅಗತ್ಯವಿದ್ದಾಗ ಪಡೆಯುತ್ತಿದ್ದಾರೆ. ಜೊತೆಗೇ ಸಹಪಾಠಿಯ ಶಿಕ್ಷಣಕ್ಕೂ ನೆರವಾಗುತ್ತಿದ್ದಾರೆ.

ಪರಮೇಶ್ವರ ನಾಯ್ಕ ಅವರು ಮಕ್ಕಳಿಗೆ ಕಲಿಯಲು ಪ್ರೇರಣೆ ನೀಡುವ ಉದ್ದೇಶದಿಂದ 2016ರಲ್ಲಿ 13 ವಿದ್ಯಾರ್ಥಿನಿಯರ ಒಂದು ಗುಂಪನ್ನು ರಚಿಸಿದರು. ಅವರಿಂದ ಪ್ರತಿವಾರ ತಲಾ ₹ 5 ವಂತಿಗೆ ಮೊತ್ತ ಹಾಕಿಸಿದರು. ವಿದ್ಯಾರ್ಥಿನಿಯರು ಪ್ರತಿ ವಾರ ಸಭೆ ಸೇರಿ ತಮ್ಮ ಪಾಲಕರಿಂದ ಹಣ ಪಡೆದು ವಂತಿಗೆ ನೀಡುತ್ತಿದ್ದರು. ಆ ಮೊತ್ತವು ₹ 1,000 ಆದಾಗ ಶಿಕ್ಷಣಕ್ಕೆ ಅಗತ್ಯ ಇರುವ ವಿದ್ಯಾರ್ಥಿನಿಗೆ ನೀಡಲಾಗುತ್ತಿತ್ತು. ಬಸ್ ಪಾಸ್, ಶಾಲಾ ಶುಲ್ಕ, ಸಮವಸ್ತ್ರ ಸೇರಿದಂತೆ ಅವರ ಅಗತ್ಯಕ್ಕೆ ಈ ಹಣ ಉಪಯೋಗವಾಗುತ್ತಿತ್ತು. ವಿದ್ಯಾರ್ಥಿನಿ ತನಗೆ ಹಣದ ಅನುಕೂಲ ಆದಾಗ ತೆಗೆದುಕೊಂಡ ಹಣಕ್ಕೆ ಒಂದಿಷ್ಟು ಹೆಚ್ಚಿನ ಮೊತ್ತ ಸೇರಿಸಿ ವಾಪಸ್ ನೀಡುತ್ತಿದ್ದಳು. ಈ ಗುಂಪಿನ ವಂತಿಗೆ ಹಣದಿಂದಲೇ ಕೆಲವು ವಿದ್ಯಾರ್ಥಿನಿಯರು ಶಿಕ್ಷಣ ಮುಗಿಸಿ ಉದ್ಯೋಗಕ್ಕೆ ಸೇರಿದ್ದಾರೆ.



ಕೊಡಸೂಳು ಶಾಲೆಯ ವಿದ್ಯಾರ್ಥಿನಿಯರ ಕೂಟ ರಚಿಸಿದ ಶಿಕ್ಷಕ ಪರಮೇಶ್ವರ ನಾಯ್ಕ, ಅವರಿಗೆ ತರಬೇತಿ ನೀಡುತ್ತಿರುವುದು

ಪ್ರಜಾವಾಣಿ ವಿಶೇಷ

ಸ್ವಾವಲಂಬಿ ಸಂಘಟನೆಯ ವಂತಿಗೆ ಹಣದಿಂದ ಪದವಿ ಶಿಕ್ಷಣ ಮುಗಿಸಿ ಉದ್ಯೋಗಕ್ಕೆ ಸೇರಿದ್ದೇನೆ
**ತನುಜಾ ಮಂಜುನಾಥ ನಾಯ್ಕ**, ಮಾವಳ್ಳಿ, ಭಟ್ಕಳ

### ‘ಶಿಕ್ಷಣದಿಂದ ವಂಚಿತರಾಗಬಾರದು’

‘ನಾನು ತೀರಾ ಬಡತನದಲ್ಲಿ ಶಿಕ್ಷಣ ಪೂರೈಸಿ ಉದ್ಯೋಗ ಪಡೆದೆ. ನನ್ನ ಕುಟುಂಬದ ಮಕ್ಕಳು ಶಿಕ್ಷಣಕ್ಕಾಗಿ ತೊಂದರೆ ಅನುಭವಿಸಬಾರದು ಎನ್ನುವ ಉದ್ದೇಶದಿಂದ ಈ ಸಂಘಟನೆ ಮಾಡಿದೆ. ಇದರಲ್ಲಿ ಯಶಸ್ಸು ಕಂಡ ಮೇಲೆ ಈ ಮಾದರಿಯನ್ನು ಇತರರಿಗೂ ಹೇಳಿಕೊಡುತ್ತಿದ್ದೇನೆ. ಮಕ್ಕಳು ಹಣಕಾಸಿನ ತೊಂದರೆಯಿಂದ ಶಿಕ್ಷಣದಿಂದ ವಂಚಿತರಾಗಬಾರದು’ ಎಂದು ಶಿಕ್ಷಕ ಪರಮೇಶ್ವರ ನಾಯ್ಕ ಹೇಳುತ್ತಾರೆ.

### ಒಳ ಪುಟಗಳು



‘ಉತ್ತರ ಪ್ರದೇಶದಲ್ಲಿ ಈ ಬಾರಿ ಎಸ್‌ಪಿ ಸರ್ಕಾರ’ 6

ಕಾಶ್ಮೀರ ಕುರಿತ ಟ್ವೀಟ್: ಹುಂಡೈ ವಿಷಾದ 10

## ಪ್ರಿಯಾಂಕ್ ಪತ್ನಿಯ ಮೊಬೈಲ್ ಕಳವು

**ಬೆಂಗಳೂರು:** ಶಾಸಕ ಪ್ರಿಯಾಂಕ್ ಖರ್ಗೆ ಪತ್ನಿ ಶ್ರುತಿ ಅವರನ್ನು ಹಿಂಬಾಲಿಸಿದ್ದ ದುಷ್ಕರ್ಮಿಯೊಬ್ಬ ಮೊಬೈಲ್ ಕಸಿದುಕೊಂಡು ಪರಾರಿಯಾಗಿದ್ದು, ಈ ಬಗ್ಗೆ ಸದಾಶಿವನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಶ್ರುತಿ ಅವರು ಭಾನುವಾರ ಬೆಳಿಗ್ಗೆ ವಾಯುವಿಹಾರಕ್ಕೆ ಹೋಗಿದ್ದಾಗ ಘಟನೆ ನಡೆದಿದೆ. ಪ್ರಿಯಾಂಕ್ ಅವರ ಆಪ್ತ ಸಹಾಯಕ ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ. ಘಟನಾ ಸ್ಥಳ ಹಾಗೂ ಸುತ್ತಮುತ್ತಲ ಸಿಸಿಟಿವಿ ಕ್ಯಾಮೆರಾದ ದೃಶ್ಯ ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

# 'ಕರಗ, ಜಾತ್ರೆಗೆ ಅವಕಾಶ ನೀಡಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಇಳಿಮುಖವಾಗಿರುವುದರಿಂದ ರಾಜ್ಯದಲ್ಲಿ ಕರಗ ಉತ್ಸವ ಮತ್ತು ಜಾತ್ರೆಗಳನ್ನು ಪೂರ್ಣ ಪ್ರಮಾಣದಲ್ಲಿ ನಡೆಸಲು ಅವಕಾಶ ನೀಡುವಂತೆ ಒತ್ತಾಯಿಸಿ ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್ ಅವರು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾಗಿರುವ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರಿಗೆ ಪತ್ರ ಬರೆದಿದ್ದಾರೆ.



ಪಿ.ಆರ್. ರಮೇಶ್

ರಾಜ್ಯದ 140ಕ್ಕೂ ಹೆಚ್ಚು ಧರ್ಮರಾಯಸ್ವಾಮಿ ಮತ್ತು ದ್ರೌಪದಮ್ಮ ದೇವಸ್ಥಾನಗಳಲ್ಲಿ ಪ್ರತಿ ವರ್ಷವೂ ಕರಗ ಆಚರಿಸಲಾಗುತ್ತಿತ್ತು. ಅದೇ ರೀತಿ ಇತರ ದೇವಸ್ಥಾನಗಳಲ್ಲಿ ಜಾತ್ರೆ, ಉತ್ಸವ ನಡೆಸಲಾಗುತ್ತಿತ್ತು. ಕೋವಿಡ್ ಕಾರಣದಿಂದ ಎರಡು ವರ್ಷದಿಂದ ಜಾತ್ರೆ, ಕರಗ, ಉತ್ಸವ ನಡೆದಿಲ್ಲ.

ಈಗ ಇತರ ಚಟುವಟಿಕೆಗಳಿಗೆ ಪೂರ್ಣ ಪ್ರಮಾಣದಲ್ಲಿ ಅವಕಾಶ ನೀಡಲಾಗಿದೆ. ಅದೇ ರೀತಿ ಕರಗ, ಜಾತ್ರೆಗಳ ಮೇಲಿನ ನಿರ್ಬಂಧವನ್ನೂ ರದ್ದು ಮಾಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಬೆಂಗಳೂರಿನಲ್ಲಿ ಎರಡು ವರ್ಷಗಳಿಂದ ಕೋವಿಡ್ ನಿಯಂತ್ರಣ ಮಾರ್ಗಸೂಚಿ ಅಡಿಯಲ್ಲಿ ಸೀಮಿತವಾಗಿ ಕರಗ ಆಚರಿಸಲಾಗಿದೆ. ಈ ವರ್ಷ ಪೂರ್ಣ ಪ್ರಮಾಣದಲ್ಲಿ ಜನರು ಭಾಗವಹಿಸಲು ಅವಕಾಶ ನೀಡಬೇಕು ಎಂದು ಪಿ.ಆರ್. ರಮೇಶ್ ಅವರು ಪತ್ರದಲ್ಲಿ ಕೋರಿದ್ದಾರೆ.

### ವಿದ್ಯಾರ್ಥಿಗಳು ಅದನ್ನು ಪಾಲಿಸಬೇಕು –ಗೃಹ ಸಚಿವ ಆರಗ ಜ್ಞಾನೇಂದ್ರ

# ಸಮವಸ್ತ್ರ ಸುತ್ತೋಲೆಗೆ ಬದ್ಧ

ಪ್ರಜಾವಾಣಿ ವಾರ್ತೆ



ಆರಗ ಜ್ಞಾನೇಂದ್ರ

**ಬೆಂಗಳೂರು:** 'ಸಮವಸ್ತ್ರ ಬಗ್ಗೆ ಈಗಾಗಲೇ ಸುತ್ತೋಲೆ ಹೊರಡಿಸಲಾಗಿದೆ. ನಾವು ಅದಕ್ಕೆ ಬದ್ಧರಾಗಿದ್ದೇವೆ. ಮಕ್ಕಳು ಪಾಲಿಸಬೇಕು. ಸದ್ಯ ವಿವಾದ ಕೋರ್ಟ್‌ನಲ್ಲಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಸ್ಪಷ್ಟಪಡಿಸಿದರು.

ಹಿಜಾಬ್ ವಿವಾದ ಕುರಿತಂತೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಜೊತೆ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಅವರು ಮಾತನಾಡಿದರು.

'ಕೋವಿಡ್ ಕಾರಣ 2 ವರ್ಷ ತರಗತಿ ಸರಿಯಾಗಿ ನಡೆದಿಲ್ಲ. ನಾವು ಭಾರತ ಮಾತೆಯ ಮಕ್ಕಳು ಎಂಬ ಭಾವನೆ ಶಾಲೆ, ಕಾಲೇಜುಗಳಿಂದ ಹೊರಡಬೇಕು. ಶಾಂತಿಯುತವಾಗಿ ಶಾಲೆಗೆ ಹೋಗಲು ಮಕ್ಕಳಿಗೆ ಪೋಷಕರೂ ಸೂಚಿಸಬೇಕು' ಎಂದು ಸಲಹೆ ನೀಡಿದರು.

'ರಾಜ್ಯದಲ್ಲಿ ನಡೆದ ಘಟನೆಗಳ ಬಗ್ಗೆ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಶಿವಮೊಗ್ಗದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಆರೇಳು ಜನರನ್ನು ವಶಕ್ಕೆ ಪಡೆಯಲಾಗಿದೆ. ಯಾರೋ ಹೊರಗಡೆಯಿಂದ ಕಲ್ಲು ಹೊಡೆದಿದ್ದಾರೆ. ಶಾಲೆ ಕಾಲೇಜು ಆವರಣದಲ್ಲಿ ಅಶಾಂತಿ ಸೃಷ್ಟಿ ಆಗಬಾರದೆಂದು ರಜೆ ಘೋಷಿಸಿದ್ದೇವೆ' ಎಂದರು.

ಧ್ವಜಸ್ತಂಭದಲ್ಲಿ ಕೇಸರಿ ಧ್ವಜ ಕಟ್ಟಿದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಡಿ.ಕೆ. ಶಿವಕುಮಾರ್ ಅಂಥವರು ಇಂಥ ವಿಷಯದಲ್ಲಿ ಸರಿಯಾಗಿ ತಿಳಿದುಕೊಂಡು ಮಾತನಾಡಬೇಕು. ಪ್ರಚೋದನಕಾರಿ ಹೇಳಿಕೆಯನ್ನು ನೀಡಬಾರದು. ಜಿಲ್ಲಾಧಿಕಾರಿ ಕಚೇರಿ, ಪಂಚಾಯಿತಿ ಕಚೇರಿ ಮುಂದೆ ಮಾತ್ರ ಧ್ವಜಸ್ತಂಭದಲ್ಲಿ ಮಾತ್ರ ರಾಷ್ಟ್ರಧ್ವಜ ಹಾರಿಸುತ್ತಾರೆ. ಕಾಲೇಜು ಆವರಣದಲ್ಲಿದ್ದ ಧ್ವಜಸ್ತಂಭದಲ್ಲಿ ರಾಷ್ಟ್ರಧ್ವಜ ಇರಲಿಲ್ಲ. ಆ ಕಂಬಕ್ಕೆ ಕೆಲವರು ಕೇಸರಿ ಬಾವುಟ ಕಟ್ಟಿದ್ದಾರೆ. ರಾಷ್ಟ್ರ ಧ್ವಜ ಇಳಿಸಿ ಕಟ್ಟಿದ್ದಾರೆ ಎನ್ನುವುದು ತಪ್ಪು ಮಾಹಿತಿ' ಎಂದರು.

ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, 'ಈ ವಿಷಯದಲ್ಲಿ ಸರ್ಕಾರ ಮೈಮರೆತಿಲ್ಲ. ಕೆಲವರು ಪೈಪೋಟಿಗೆ ನಿಂತ ಕಾರಣ ವಿವಾದ ಬೆಳೆದಿದೆ. ಅಹಿತಕರ ಘಟನೆ ನಡೆಯ ಬಾರದೆಂದು ರಜಾ ಘೋಷಿಸಿದ್ದೇವೆ. ಕೋರ್ಟ್ ಆದೇಶಕ್ಕೆ ಕಾಯುತ್ತಿದ್ದೇವೆ' ಎಂದರು.

## ಕೆಲವು ವಿದ್ಯಾರ್ಥಿಗಳು ನಮಾಜ್‌ಗೂ ಅವಕಾಶ ಕೇಳುತ್ತಿದ್ದಾರೆ – ಬಿ.ಸಿ. ನಾಗೇಶ್

**ಬೆಂಗಳೂರು:** 'ಕೆಲವು ವಿದ್ಯಾರ್ಥಿಗಳು ಹಿಜಾಬ್‌ಗೆ ಮಾತ್ರ ಬೇಡಿಕೆ ಇಟ್ಟಿಲ್ಲ. ಅವರಿಗೆ ಶಿಕ್ಷಣಕ್ಕಿಂತ ಧರ್ಮವೇ ಮುಖ್ಯವಾಗಿದೆ. ಶಾಲೆಗಳಲ್ಲಿ ಐದು ಬಾರಿ ನಮಾಜ್ ಮಾಡಲು ಅವಕಾಶ ಕೇಳುತ್ತಿದ್ದಾರೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮಂಗಳವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಯಾವುದನ್ನೂ ಸರ್ಕಾರ ಒಪ್ಪಿಕೊಂಡಿಲ್ಲ. ಕೆಲವು ರಾಜಕೀಯ ನಾಯಕರು ಈ ಘಟನೆಗೆ ತುಪ್ಪ ಸುರಿದು ಶಕ್ತಿ ತುಂಬಿದರು. ಹೀಗಾಗಿ, ಈ ವಿವಾದ ಎಲ್ಲ ಕಡೆ ಹರಡಿದೆ' ಎಂದರು.

'ಈ ಷಡ್ಯಂತ್ರದ ಹಿಂದೆ ಯಾರ್ಯಾರು ಇದ್ದಾರೆ ಎಂಬುದು ತನಿಖೆಯಾಗಬೇಕು. ಈ ಬಗ್ಗೆ ಗೃಹ ಸಚಿವರ ಜೊತೆ ಮಾತನಾಡಿದ್ದೇನೆ. ಘಟನೆಯ ಹಿಂದೆ ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಇದೆಯೇ ಎಂಬ ಅನುಮಾನ ಇದೆ. ಎಸ್‌ಡಿಪಿಐ ಸಂಘಟನೆ ಕೆಲಸ ಮಾಡಿದೆ ಎಂದೂ ಹೇಳಲಾಗುತ್ತಿದೆ' ಎಂದರು.

## ಪ್ರಚೋದನೆ ಆರೋಪ

'ಹಿಜಾಬ್– ಶಾಲು ವಿವಾದದಲ್ಲಿ ವಿದ್ಯಾರ್ಥಿಗಳಿಗೆ ಪ್ರಚೋದನೆ ನೀಡಲಾಗುತ್ತಿದೆ' ಎಂದು ರಾಜ್ಯ ದಲಿತ ಸಂಘರ್ಷ ಸಮಿತಿ ಸಂಚಾಲಕ ಲಕ್ಷ್ಮೀನಾರಾಯಣ ನಾಗವಾರ ಆರೋಪಿಸಿದ್ದಾರೆ.

'ಅಲ್ಪಸಂಖ್ಯಾತರ ಮೇಲೆ ಸಂಘ ಪರಿವಾರದವರ ದೌರ್ಜನ್ಯ ಮಿತಿ ಮೀರಿದೆ. ಇದರ ವಿರುದ್ಧ ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಗಳು ಸೇರಿ ಪ್ರತಿಭಟನೆ ಮಾಡಬೇಕಾಗುತ್ತದೆ' ಎಂದು ಎಚ್ಚರಿಸಿದ್ದಾರೆ.



## ₹3.48 ಕೋಟಿ ಮೌಲ್ಯದ ಅಂಬರ್ ಗ್ರೀಸ್ ವಶ

**ಮಂಗಳೂರು:** ಬಂಟ್ವಾಳ ತಾಲ್ಲೂಕಿನ ಬಾಳೆಪುಣಿಯಲ್ಲಿ ₹3.48 ಕೋಟಿ ಮೌಲ್ಯದ ಅಂಬರ್ ಗ್ರೀಸ್ ವಶಪಡಿಸಿಕೊಂಡಿರುವ ಪೊಲೀಸರು, ಆರು ಮಂದಿಯನ್ನು ಬಂಧಿಸಿದ್ದಾರೆ.

'ಇದನ್ನು ತಮಿಳುನಾಡಿನ ಮೀನುಗಾರ ಸೇದು ಮಾಣಿಜ್ಯ ಎಂಬಾತ ನೀಡಿದ್ದಾಗಿ ಆರೋಪಿಗಳು ತಿಳಿಸಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

# ತ್ಯಾಜ್ಯ ಸಂಗ್ರಹಣಾ ಶುಲ್ಕ, ವಿದ್ಯುತ್ ಬಿಲ್‌ಗೆ ಸೇರ್ಪಡೆಗೆ ವಿರೋಧ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ತ್ಯಾಜ್ಯ ಸಂಗ್ರಹಣಾ ಶುಲ್ಕವನ್ನು ವಿದ್ಯುತ್ ಬಿಲ್‌ಗೆ ಸೇರಿಸಲು ಬಿಬಿಎಂಪಿ ಮುಂದಾಗಿದೆ. ಇದು, ಜಾರಿಗೆ ತಂದರೆ ಪ್ರತಿಭಟನೆ ನಡೆಸಲಾಗುತ್ತದೆ' ಎಂದು ಬೆಂಗಳೂರು ನವ ನಿರ್ಮಾಣ ಪಕ್ಷ ಎಚ್ಚರಿಸಿದೆ.

'ಬಿಬಿಎಂಪಿ ಪಾರದರ್ಶಕತೆ ಇಲ್ಲದೆ ತ್ಯಾಜ್ಯ ಸಂಗ್ರಹಣೆ ಶುಲ್ಕ ಸಂಗ್ರಹಿಸುತ್ತಿದೆ. ಇದಕ್ಕಾಗಿ ನಗರಾಭಿವೃದ್ಧಿ ಇಲಾಖೆಯಿಂದ ಅನುಮತಿ ಕೋರಿರುವ ಕ್ರಮ ಖಂಡನಾರ್ಹ' ಎಂದು ಪಕ್ಷದ ಯುವ ಘಟಕದ ಮುಖ್ಯಸ್ಥ ರಿಷಿ ರಾಘವನ್ ಟೀಕಿಸಿದ್ದಾರೆ.

ಪಕ್ಷದ ಸಂಸ್ಥಾಪಕ ಹಾಗೂ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನರಸಿಂಹನ್, 'ತ್ಯಾಜ್ಯ ಸಂಗ್ರಹಣಾ ಶುಲ್ಕವನ್ನು ವಿದ್ಯುತ್ ಬಿಲ್‌ಗೆ ಜೋಡಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ವಿದ್ಯುತ್‌ಗೂ ತ್ಯಾಜ್ಯಕ್ಕೂ ಏನು ಸಂಬಂಧ. ಇದು ಬುದ್ಧಿಹೀನ ಆಲೋಚನೆ. ನಾಗರಿಕರ ಮೇಲೆ ಅನವಶ್ಯಕವಾಗಿ ತೆರಿಗೆ ಹೇರುವುದು ಸರಿಯಲ್ಲ' ಎಂದು ತಿಳಿಸಿದ್ದಾರೆ.









# ವಿಮರ್ಶಕಿ ಸುಮಿತ್ರಾಬಾಯಿಗೆ ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಬಿ.ಎನ್. ಸುಮಿತ್ರಾಬಾಯಿ

**ಬೆಂಗಳೂರು:** ಬಿಎಂಶ್ರೀ ಪ್ರತಿಷ್ಠಾನ ನೀಡುವ 2022ನೇ ಸಾಲಿನ 'ಪ್ರೊ. ಎಲ್.ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ'ಗೆ ವಿಮರ್ಶಕಿ ಬಿ.ಎನ್. ಸುಮಿತ್ರಾಬಾಯಿ ಆಯ್ಕೆಯಾಗಿದ್ದಾರೆ.

ಸುಮಿತ್ರಾಬಾಯಿ ಅವರು ಸಂಸ್ಕೃತ ಪ್ರಾಧ್ಯಾಪಕರಾಗಿ 36 ವರ್ಷ ಸೇವೆ ಸಲ್ಲಿಸಿದ್ದಾರೆ.

ಸಾರ್ವತ್ರಿಕದೆಡೆಗೆ, ಅಕ್ಕ ಮಹಾದೇವಿ, ಸರಹದ್ದುಗಳ ಆಚೆ ಈಚೆ, ಸ್ತ್ರೀವಾದಿ ಪ್ರವೇಶಿಕೆ ಸೇರಿ 25 ಪುಸ್ತಕ ಬರೆದಿದ್ದಾರೆ.

'ಶೇಷಗಿರಿರಾವ್ ಆಶಯದಂತೆ ಕನ್ನಡ ವಿಮರ್ಶಾ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಿದ ಹಾಗೂ ಜ್ಞಾನಪೀಠ, ಸರಸ್ವತಿ ಸಮ್ಮಾನ್, ನೃಪತುಂಗ, ಪಂಪ, ಕುವೆಂಪು ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳಿಗೆ ಆಯ್ಕೆಯಾಗದವರನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಡಾ.ಟಿ.ವೆಂಕಟೇಶಮೂರ್ತಿ, ಬೆಳಕೆರೆ ಲಿಂಗರಾಜಯ್ಯ ಅವರಿದ್ದ ಸಮಿತಿಯು ಸರ್ವಾನುಮತದಿಂದ ಆಯ್ಕೆ ಮಾಡಿದೆ' ಎಂದು ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಅವರು ತಿಳಿಸಿದ್ದಾರೆ.

'ಪ್ರಶಸ್ತಿ ₹10 ಸಾವಿರ ನಗದು, ಸ್ಮರಣಿಕೆ, ಅಭಿನಂದನಾ ಪತ್ರ ಒಳಗೊಂಡಿರಲಿದೆ. ಈ ತಿಂಗಳ ಕೊನೆಯ ವಾರ ಬಿಎಂಶ್ರೀ ಕಲಾಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ' ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

## ಆಸ್ಕರ್: 'ರೈಟಿಂಗ್ ವಿಥ್ ಫೈರ್' ನಾಮನಿರ್ದೇಶನ

ನವದೆಹಲಿ (ಪಿಟಿಐ): ಭಾರತದ 'ರೈಟಿಂಗ್ ವಿಥ್ ಫೈರ್' ಸಾಕ್ಷ್ಯ ಚಿತ್ರವು ಆಸ್ಕರ್ ಪ್ರಶಸ್ತಿಯ 'ಅತ್ಯುತ್ತಮ ಸಾಕ್ಷ್ಯಚಿತ್ರ' ವಿಭಾಗಕ್ಕೆ ನಾಮನಿರ್ದೇಶನವಾಗಿದೆ.

ಜೆನ್ ಕ್ಯಾಂಪಿಯನ್ ನಿರ್ದೇಶನದ 'ದಿ ಪವರ್ ಆಫ್ ಡಾಗ್' ಅತ್ಯುತ್ತಮ ಚಿತ್ರ ವಿಭಾಗದಲ್ಲಿ ಮುಂದಿದೆ.

ರಿಂಟು ಥಾಮಸ್ ಮತ್ತು ಸುಶ್ಮಿತ್ ಘೋಷ್ ಅವರು ನಿರ್ದೇಶಿಸಿದ 'ರೈಟಿಂಗ್ ವಿಥ್ ಫೈರ್' ಚಿತ್ರವು ಭಾರತದ ದಲಿತ ಮಹಿಳೆಯರು ಪ್ರಕಟಿಸುತ್ತಿರುವ 'ಖಬರ್ ಲಹರಿಯಾ' ನಿಯತಕಾಲಿಕಕ್ಕೆ ಸಂಬಂಧಿಸಿದ್ದಾಗಿದೆ.

'ಸಾಕ್ಷ್ಯಚಿತ್ರ ನಾಮ ನಿರ್ದೇಶನಗೊಂಡಿರುವುದು ಸಂತಸ ತಂದಿದೆ. ಇದು ನಮಗೆ, ಭಾರತೀಯ ಚಿತ್ರರಂಗಕ್ಕೆ ಮಹತ್ವದ ಕ್ಷಣ. ಇದು ನಿರ್ಭೀತ ದಲಿತ ಮಹಿಳಾ ಪತ್ರಕರ್ತೆಯರ ಕುರಿತದ್ದಾಗಿದೆ' ಎಂದು ಸಹ ನಿರ್ದೇಶಕ ಸುಶ್ಮಿತ್ ಘೋಷ್ ತಿಳಿಸಿದ್ದಾರೆ.

**ಮಾರ್ಚ್ 27ರಂದು ಪ್ರಶಸ್ತಿ ಘೋಷಣೆ:** 'ಅಸೆನ್ಶನ್', 'ಅಟಿಕಾ', 'ಫ್ಲೀ', ಮತ್ತು 'ಸಮ್ಮರ್ ಆಫ್ ಸೋಲ್' ಸಾಕ್ಷ್ಯಚಿತ್ರಗಳೂ ಈ ವಿಭಾಗದಲ್ಲಿ ನಾಮನಿರ್ದೇಶನಗೊಂಡಿರುವ ಇತರ ಚಿತ್ರಗಳಾಗಿವೆ. ಮಾರ್ಚ್ 27ರಂದು ಪ್ರಶಸ್ತಿ ಘೋಷಣೆಯಾಗಲಿದೆ.

ಆಸ್ಕರ್‌ನ ಅತ್ಯುತ್ತಮ ಚಿತ್ರ ವಿಭಾಗದಲ್ಲಿ 'ದಿ ಪವರ್ ಆಫ್ ದಿ ಡಾಗ್' ಜೊತೆಗೆ 'ಬೆಲ್‌ಫಾಸ್ಟ್', 'ಕೊಡ', 'ಡೋಂಟ್ ಲುಕ್ ಅಪ್', 'ಡ್ರೈವ್ ಮೈ ಕಾರ್', 'ಡುನ್', 'ಕಿಂಗ್ ರಿಚರ್ಡ್', 'ಲೈಕೋರೈಸ್ ಪಿಜ್ಜಾ', 'ನೈಟ್‌ಮೇರ್ ಅಲಿ', ಮತ್ತು 'ವೆಸ್ಟ್ ಸೈಡ್ ಸ್ಟೋರಿ' ಚಿತ್ರಗಳು ನಾಮನಿರ್ದೇಶನಗೊಂಡಿವೆ ಎಂದು ಮೂಲಗಳು ತಿಳಿಸಿವೆ.

## ನಗರದಲ್ಲಿ ಇಂದು

**ಶಾಲಾ ಶಿಕ್ಷಣದ ಸಮಗ್ರ ಅಭಿವೃದ್ಧಿಗಾಗಿ ಖಾಸಗಿ ಸಂಸ್ಥೆಗಳೊಂದಿಗೆ ಸಂವಾದ:** ಭಾಗವಹಿಸುವವರು– ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವ ಕುಮಾರ್, ಆಯೋಜನೆ– ಸಾರ್ವಜನಿಕ ಶಿಕ್ಷಣ ಇಲಾಖೆ, ಸ್ಥಳ–ದಿ ಹೋಟೆಲ್ ಕ್ಯಾಪಿಟಲ್, ರಾಜಭವನ ರಸ್ತೆ, ವಸಂತ ನಗರ, ಬೆಳಿಗ್ಗೆ 10.30

**'ವೆಲ್‌ಕಮ್, ಜಾನಕಿ ಜಿಂಗಾನಿಯಾ!' ನಾಟಕ ಪ್ರದರ್ಶನ:** ನಿರ್ದೇಶನ– ಸುರೇಶ ಆನಗಳ್ಳಿ, ಪ್ರಸ್ತುತಿ–ಅನೇಕಾ, ರಂಗಶಂಕರ, ಜೆ.ಪಿ.ನಗರ, ಸಂಜೆ 7.30

## ನಿಧನ ವಾರ್ತೆ

### ಎಚ್. ಗುರಪ್ಪ



**ಬೆಂಗಳೂರು:** 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ ಮುದ್ರಣ ವಿಭಾಗದ ನಿವೃತ್ತ ಮೇಲ್ವಿಚಾರಕ ಗುರಪ್ಪ (74) ಅವರು ಅನಾರೋಗ್ಯದಿಂದಾಗಿ ನಗರದ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಶಿರಾ ತಾಲ್ಲೂಕಿನ ವೀರಾಪುರದಲ್ಲಿ ಬುಧವಾರ (ಫೆ. 9) ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆ ನಡೆಸಲಾಗುವುದೆಂದು ಕುಟುಂಬದವರು ತಿಳಿಸಿದ್ದಾರೆ.

### ಯಲ್ಲಮ್ಮ



**ಬೆಂಗಳೂರು:** ಇಂದಿರಾನಗರದ ಮೈಕಲ್ ಪಾಳ್ಯ ನಿವಾಸಿ ಯಲ್ಲಮ್ಮ (93) ಸೋಮವಾರ ನಿಧನರಾದರು. ಅವರಿಗೆ ಆರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ವಿಲ್ಸನ್ ಗಾರ್ಡನ್ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಅಭಿವೃದ್ಧಿ ಕಾಮಗಾರಿ: ಬಿಬಿಎಂಪಿ ಕಾರ್ಯವೈಖರಿಗೆ ಹೈಕೋರ್ಟ್ ತರಾಟೆ


# ಪದೇ ಪದೇ ಛೀಮಾರಿ ಏಕೆ?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಸ್ತೆಗಳ ಗುಂಡಿ ಮುಚ್ಚುವುದು, ಡಾಂಬರೀಕರಣ, ರಾಜಕಾಲುವೆಗಳ ಒತ್ತುವರಿ ತೆರವು ಸೇರಿದಂತೆ ಯಾವ ಕೆಲಸವೇ ಇದ್ದರೂ ಹೈಕೋರ್ಟ್ ಮಧ್ಯ ಪ್ರವೇಶಿಸಿ ಛೀಮಾರಿ ಹಾಕುವವರೆಗೂ ಬಿಬಿಎಂಪಿ ಅಧಿಕಾರಿಗಳು ಎಚ್ಚೆತ್ತುಕೊಳ್ಳುವುದಿಲ್ಲ ಎಂಬುದು ಪದೇ ಪದೇ ಸಾಬೀತಾಗುತ್ತಿದೆ. ಚುನಾಯಿತ ಪ್ರತಿನಿಧಿಗಳ ಅನುಪಸ್ಥಿತಿಯಲ್ಲಿ ಸಂಪೂರ್ಣ ಜವಾಬ್ದಾರಿ ಹೊಂದಿರುವ ಅಧಿಕಾರಿಗಳು ಹೀಗೇಕೆ ಮಾಡುತ್ತಾರೆ ಎಂಬುದು ಈಗ ಚರ್ಚೆಯ ವಿಷಯವಾಗಿದೆ.

ರಸ್ತೆ ಗುಂಡಿ ಮುಚ್ಚುವ ವಿಚಾರದಲ್ಲಿ ಪಾಲಿಕೆ ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್ ಅವರಿಗೆ ಹೈಕೋರ್ಟ್ ಸೋಮವಾರ ಛೀಮಾರಿ ಹಾಕಿದೆ. ನಗರದ ಸಮಗ್ರ ಅಭಿವೃದ್ಧಿಯ ಹೊಣೆ ಹೊತ್ತಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ಎಡವುತ್ತಿರುವುದೆಲ್ಲಿ? ಎಂಬುದರ ಕುರಿತು ಪಾಲಿಕೆ ಮಾಜಿ ಮೇಯರ್‌ಗಳು ಈ ವಾರದ 'ರಾಜಧಾನಿಯ ಒಡಲ ದನಿ'ಯಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾರೆ.

## 'ನಾವೇ ರಾಜರು ಎಂಬ ಭಾವನೆ ತೊಲಗಬೇಕು'



ಚುನಾಯಿತ ಕೌನ್ಸಿಲ್ ಇಲ್ಲದ ಕಾರಣದಿಂದ ಪಾಲಿಕೆ ಅಧಿಕಾರಿಗಳು 'ನಾವೇ ರಾಜರು' ಎಂಬ ಭಾವನೆಯಲ್ಲಿದ್ದಾರೆ. ಜನರು ಸಮಸ್ಯೆ ಹೇಳಿಕೊಂಡು ಹೋದರೂ ತಕ್ಷಣಕ್ಕೆ ಸ್ಪಂದಿಸುವವರೇ ಕಡಿಮೆ. ಕಾಮಗಾರಿಗಳಲ್ಲಿ ಗುಣಮಟ್ಟ ನಿಯಂತ್ರಣಕ್ಕೆ ಆದ್ಯತೆ ಇಲ್ಲ. ಗುತ್ತಿಗೆದಾರರು ಮಾಡಿದ್ದೇ ಕೆಲಸ ಎಂಬ ಸ್ಥಿತಿ ನಿರ್ಮಿಸಿದ್ದಾರೆ. ಇದರಿಂದಾಗಿಯೇ ಪಾಲಿಕೆಯ ಮಾನ ಪದೇ ಪದೇ ಹರಾಜಾಗುತ್ತಿದೆ.

ಪಾಲಿಕೆ ವ್ಯಾಪ್ತಿಯ ರಸ್ತೆಗಳಲ್ಲಿ ಗುಂಡಿ ಬಿದ್ದರೆ ಗುತ್ತಿಗೆದಾರರು ಜೆಲ್ಲಿ ಮತ್ತು ಕಲ್ಲುಪುಡಿಯ ಮಿಶ್ರಣ ಸುರಿದುಹೋಗುತ್ತಾರೆ. ಅಲ್ಲಿ ಡಾಂಬರು ಹಾಕಿಸುವ ಬಗ್ಗೆ ಅಧಿಕಾರಿಗಳು ಯೋಚಿಸುವುದೇ ಇಲ್ಲ. ರಾತ್ರೋರಾತ್ರಿ ರಸ್ತೆ ಅಗೆದರೂ ಕೇಳುವವವರೇ ಇಲ್ಲ ಎನ್ನುವ ಸ್ಥಿತಿ ಇದೆ. ವಾರ್ಡ್ ಹಂತದ ಅಧಿಕಾರಿಗಳು ವಾರಕ್ಕೆ ಒಮ್ಮೆಯಾದರೂ ತಮ್ಮ ವ್ಯಾಪ್ತಿಯಲ್ಲಿ ಸಂಚರಿಸಿದರೆ ಸಮಸ್ಯೆಗಳ ಅರಿವಾಗುತ್ತದೆ. ಆದರೆ, ಅದಕ್ಕೂ ಜನರು ಒತ್ತಾಯಿಸಬೇಕಾದ ಸ್ಥಿತಿಗೆ ಆಡಳಿತ ತಲುಪಿದೆ.

ಕಾಮಗಾರಿ ನಿರ್ವಹಿಸುವ ಗುತ್ತಿಗೆದಾರರ ಮೇಲೆ ಅಧಿಕಾರಿಗಳಿಗೆ ನಿಯಂತ್ರಣವೇ ಇಲ್ಲ. ಇದು ಸಮಸ್ಯೆಯ ಮೂಲ. ತಮ್ಮನ್ನು ಪ್ರಶ್ನಿಸಲು ಯಾರೂ ಇಲ್ಲ ಎಂಬ ಧೋರಣೆಯನ್ನು ಅಧಿಕಾರಿಗಳು ಬಿಡಬೇಕು. ಆಗ ಮಾತ್ರ ನಗರದ ಸಮಸ್ಯೆಗಳಿಗೆ ತಕ್ಷಣ ಪರಿಹಾರ ದೊರಕಿಸಲು ಸಾಧ್ಯ.

**ಕಟ್ಟೆ ಸತ್ಯನಾರಾಯಣ,** ಮಾಜಿ ಮೇಯರ್

ರಾಜಧಾನಿ ಒಡಲದನಿ

## 'ಸ್ವಂತ ಲಾಭವೇ ಸಮಸ್ಯೆಯ ಮೂಲ'

ಪಾಲಿಕೆಯಲ್ಲಿ ಒಂದೂವರೆ ವರ್ಷದಿಂದ ಚುನಾಯಿತ ಸದಸ್ಯರಿಲ್ಲ. ಅಧಿಕಾರಿಗಳೇ ಆಡಳಿತದ ಹೊಣೆ ಹೊತ್ತಿದ್ದಾರೆ.



ರಸ್ತೆ ಗುಂಡಿ ಮುಚ್ಚುವುದು ಸೇರಿದಂತೆ ಎಲ್ಲ ಸಮಸ್ಯೆಗಳನ್ನೂ ಗುರುತಿಸಿ, ಪರಿಹರಿಸುವ ಹೊಣೆಅವರದ್ದು. ಆದರೆ-,ಅಧಿಕಾರಿಗಳು ಸ್ವಂತಲಾಭಕ್ಕೆ ಆದ್ಯತೆ ಕೊಟ್ಟು, ಜನಹಿತ ಮರೆಯುತ್ತಿದ್ದಾರೆ.

ಚುನಾಯಿತ ಸದಸ್ಯರಿದ್ದಾ ವಾರ್ಡ್ ಹಂತದ ಅಧಿಕಾರಿಗಳು ಬೆಳಿಗ್ಗೆಯೇ ಕೆಲಸಕ್ಕೆ ಹಾಜರಾಗುತ್ತಿದ್ದರು. ಈಗ ಮಧ್ಯಾಹ್ನ ಬರುವವರೇ ಹೆಚ್ಚು. ಪಾಲಿಕೆ ಮುಖ್ಯ ಆಯುಕ್ತರು, ಆಡಳಿತಾಧಿಕಾರಿ ಕಣ್ಣಿಗೂ ಮಣ್ಣೆರಚಿ ತಪ್ಪಿಸಿಕೊಳ್ಳುತ್ತಾರೆ. ಕೆಳಹಂತದ ಅಧಿಕಾರಿಗಳ ಮೇಲೆ ಬಿಗಿ ಹಿಡಿತ ಇಲ್ಲದ ಕಾರಣ ಹಿರಿಯ ಅಧಿಕಾರಿಗಳು ನ್ಯಾಯಾಲಯದಲ್ಲಿ ಛೀಮಾರಿ ಹಾಕಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ.

ಅಧಿಕಾರಿಗಳು ರಸ್ತೆ ಗುಂಡಿ, ಕಾಲುವೆ ಸಮಸ್ಯೆ ಪರಿಹಾರಕ್ಕೆ ತಕ್ಷಣ ಬರುವುದಿಲ್ಲ. ಕಟ್ಟಡ ನಿರ್ಮಿಸುವವರು, ನಕ್ಷೆ ಮಂಜೂರಾತಿ ಕೋರಿದವರ ಬಳಿ ಹೋಗುತ್ತಾರೆ. ರಾತ್ರಿ ವೇಳೆ ಗುತ್ತಿಗೆದಾರರು ಡಾಂಬರು ಹಾಕಿಹೋಗುತ್ತಾರೆ. ಅಧಿಕಾರಿ ನೋಡುವುದಿಲ್ಲ. ಕಮಿಷನ್ ಮತ್ತು ಸ್ವಂತ ಲಾಭದ ಆಸೆಯಿಂದ ಅಧಿಕಾರಿಗಳು ಹೊರ ಬರದೇ ಇದ್ದರೆ ಈ ಸ್ಥಿತಿ ಹಾಗೆಯೇ ಇರುತ್ತದೆ.

**ಜೆ. ಹುಚ್ಚಪ್ಪ,** ಮಾಜಿ ಮೇಯರ್

## 'ಪಾಲಿಕೆ ಆಡಳಿತ ವ್ಯವಸ್ಥೆ ಜಡ್ಡುಗಟ್ಟಿದೆ'

ಚುನಾವಣೆ ನಡೆದು ಹೊಸ ಸದಸ್ಯರು ಆಯ್ಕೆಯಾಗದೇ ಇರುವುದರಿಂದ ಬಿಬಿಎಂಪಿ ಆಡಳಿತ ಜಡ್ಡುಗಟ್ಟಿ ಹೋಗಿದೆ. ಅಧಿಕಾರಿಗಳು ಜನರಿಗೆ ಸ್ಪಂದಿಸುವುದನ್ನೇ ಮರೆತಿದ್ದಾರೆ. ಯಾವ ಕೆಲಸವನ್ನು ಆದ್ಯತೆ ಮೇರೆಗೆ ಮಾಡಬೇಕೆಂಬುದನ್ನೂ ಅವರು ಯೋಚಿಸುತ್ತಿಲ್ಲ. ಇದರಿಂದಾಗಿ ರಸ್ತೆ ಗುಂಡಿ ವಿಚಾರವನ್ನೂ ಹೈಕೋರ್ಟ್‌ನಲ್ಲಿ ಪ್ರಶ್ನಿಸಬೇಕಾದ ದುಸ್ಥಿತಿ ನಗರದ ನಾಗರಿಕರಿಗೆ ಬಂದಿದೆ.



ಈಗ ಇರುವ ಎಲ್ಲ ಸಮಸ್ಯೆಗಳೂ ಚುನಾಯಿತ ಸದಸ್ಯರಿದ್ದಾಗಲೂ ಇರುತ್ತಿದ್ದವು. ಆದರೆ, ಪಾಲಿಕೆ ಸದಸ್ಯರು ನಿತ್ಯವೂ ತಮ್ಮ ವಾರ್ಡ್‌ಗಳಲ್ಲಿ ಸಂಚರಿಸುತ್ತಿದ್ದರು. ಸ್ಥಳೀಯರು ಕೂಡ ಸಮಸ್ಯೆಗಳ ಕುರಿತು ಮಾಹಿತಿ ನೀಡುತ್ತಿದ್ದರು. ಎಲ್ಲ ಸದಸ್ಯರೂ ತಮ್ಮ ವಾರ್ಡ್ ವ್ಯಾಪ್ತಿಯಲ್ಲಿನ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುತ್ತಿದ್ದರು. ಪಟ್ಟುಬಿಡದೆ ಅಧಿಕಾರಿಗಳನ್ನು ಕರೆತಂದು ಕೆಲಸ ಮಾಡಿಸುತ್ತಿದ್ದರು.

ಈಗ ಅಧಿಕಾರಿಗಳಿಗೆ ಸಮಸ್ಯೆ ಕುರಿತು ಹೇಳಿದರೂ ಕಿವಿ ಮೇಲೆ ಬೀಳದವರಂತೆ ವರ್ತಿಸುತ್ತಾರೆ. ಅರ್ಧಕ್ಕಿಂತ ಹೆಚ್ಚು ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಧೋರಣೆಯವರೇ ಇದ್ದಾರೆ. ಕೆಳಹಂತದ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಿದರೆ ಪಾಲಿಕೆ ವ್ಯಾಪ್ತಿಯಲ್ಲಿ ಸಮಸ್ಯೆಗಳೇ ಇರುವುದಿಲ್ಲ.

**ಗಂಗಾಂಬಿಕೆ ಮಲ್ಲಿಕಾರ್ಜುನ,** ಮಾಜಿ ಮೇಯರ್

# ನಿಗದಿತ ಅವಧಿಯಲ್ಲಿ ರಸ್ತೆ ಅಭಿವೃದ್ಧಿ: ಗೌರವ್ ಗುಪ್ತ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** 'ಹೈಕೋರ್ಟ್ ನಿಗದಿತ ಸಮಯದೊಳಗೆ ರಸ್ತೆಗಳ ಗುಂಡಿಗಳ ಮುಚ್ಚಿ ಸರಿಪಡಿಸಲು ಸಂಬಂಧಪಟ್ಟ ಎಲ್ಲ ಎಂಜಿನಿಯರ್‌ಗಳಿಗೆ ಸೂಚನೆ ನೀಡಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಪಾಲಿಕೆ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿ, 'ನಗರದ ಒಳಗಿನ ಸ್ಥಿತಿ ಬೇರೆ ಇದೆ, ಹೊರ ವಲಯದ ಸ್ಥಿತಿ ಬೇರೆ ಇದೆ. ಹೊರ ವಲಯದಲ್ಲಿ ಜಲ ಮಂಡಳಿಯಿಂದ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಇನ್ನೂ ಪೂರ್ಣಗೊಳ್ಳಬೇಕಿದೆ. ಅನಗತ್ಯವಾಗಿ ವಿಳಂಬ ಮಾಡದೆ ಕಾಮಗಾರಿ ಪೂರ್ಣಗೊಳಿಸಲು ಸಮಯ ನಿಗದಿಸಬೇಕು. ಅಷ್ಟರಲ್ಲಿ ಪೂರ್ಣಗೊಳಿಸದಿದ್ದರೆ ನೋಟೀಸ್ ನೀಡಲು ಎಂಜಿನಿಯರ್‌ಗಳಿಗೆ ತಿಳಿಸಲಾಗಿದೆ' ಎಂದರು.

'ಉಳಿದಂತೆ ಹಾಳಾದ ರಸ್ತೆಗಳನ್ನು ಸರಿಪಡಿಸಲು ಅವಕಾಶ ಇರುವ ಕಡೆ ವಿಳಂಬ ಮಾಡಬಾರದು. ಈ ಸಂಬಂಧ ಎಂಜಿನಿಯರ್‌ಗಳಿಗೆ ಜವಾಬ್ದಾರಿ ನಿಗದಿ ಮಾಡಲಾಗಿದೆ. ವಿಳಂಬವಾದರೆ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದ್ದೇನೆ. ಅನುಮತಿ ಇಲ್ಲದೆ ರಸ್ತೆ ಅಗೆದು ಗುಂಡಿ ಮಾಡಿದರೆ ಮುಲಾಜಿಲ್ಲದೆ ಎಫ್‌ಐಆರ್ ದಾಖಲಿಸಲು ಸೂಚಿಸಿದ್ದೇನೆ' ಎಂದರು.


'ಹಲವು ಕೆರೆಗಳು ತನ್ನ ಸ್ವರೂಪ ಕಳೆದುಕೊಂಡಿವೆ. ಕೆಲವು ಕೆರೆಗಳಲ್ಲಿ ಹೂಳು ತುಂಬಿದೆ. ಹಲವೆಡೆ ನೀರು ಹರಿದು ಬರಲು ಜಾಗವೇ ಇಲ್ಲದಂತಾಗಿದೆ. ಅಂತಹ ಕೆರೆಗಳ ಒತ್ತುವರಿ ಪ್ರಯತ್ನಗಳು ನಡೆದಿವೆ. ಒತ್ತುವರಿ ತೆರವಿಗೆ ಸೂಚನೆ ನೀಡಿದ್ದೇನೆ. ಕೆರೆಗಳ ಜಾಗದಲ್ಲಿ ಉದ್ಯಾನ ಅಭಿವೃದ್ಧಿಪಡಿಸುವ ಯೋಜನೆ ಪಾಲಿಕೆ ಮುಂದೆ ಇಲ್ಲ' ಎಂದು ಅವರು ಸ್ಪಷ್ಟಪಡಿಸಿದರು.



## ಅವೈಜ್ಞಾನಿಕ ರಸ್ತೆ ಉಬ್ಬು ಸರಿಪಡಿಸಿದ ಬಿಬಿಎಂಪಿ

**ಬೆಂಗಳೂರು:** ಮಲ್ಲೇಶ್ವರದ ಮಾರ್ಗೋಸಾ ರಸ್ತೆಯ ವೀಣಾ ಸ್ಟೋರ್ ಜಂಕ್ಷನ್‌ನಲ್ಲಿ ಅವೈಜ್ಞಾನಕವಾಗಿ ನಿರ್ಮಿಸಿದ್ದ ರಸ್ತೆ ಉಬ್ಬನ್ನು ಬಿಬಿಎಂಪಿ ಸಿಬ್ಬಂದಿ ಸೋಮವಾರ ತಡ ರಾತ್ರಿಯೇ ಸರಿಪಡಿಸಿದ್ದಾರೆ.

ವಾಹನ ಸವಾರರಿಗೆ ಸ್ಪಷ್ಟವಾಗಿ ಕಾಣಿಸುವಂತೆ ಬಿಳಿ ಬಣ್ಣದಲ್ಲಿ ಪಟ್ಟೆ ಬಳಿದಿದ್ದಾರೆ. ರಸ್ತೆ ಉಬ್ಬಿಗೂ ಸ್ವಲ್ಪ ಮೊದಲೇ ವಾಹನ ಸವಾರರು ವೇಗ ನಿಯಂತ್ರಿಸಲು ಅನುಕೂಲವಾಗುವಂತೆ ರಂಬಲ್ ಪಟ್ಟಿಗಳನ್ನೂ ಹಾಕಲಾಗಿದೆ.



ಮಲ್ಲೇಶ್ವರದ ಮಾರ್ಗೋಸಾ ರಸ್ತೆಯಲ್ಲಿ ರಸ್ತೆ ಉಬ್ಬಿಗೆ ಬಣ್ಣ ಬಳಿಯುತ್ತಿರುವುದು

ಅವೈಜ್ಞಾನಿಕ ರಸ್ತೆ ಉಬ್ಬು ನಿರ್ಮಾಣ ಸಂಬಂಧ ಕ್ಷೇತ್ರದ ಶಾಸಕರೂ ಆದ ಸಚಿವ ಸಿ.ಎನ್. ಅಶ್ವತ್ಥ ನಾರಾಯಣ ಅವರು ಸೋಮ ವಾರ ಸಂಜೆಅಧಿಕಾರಿಗಳನ್ನುತರಾಟೆಗೆತೆಗೆದು- ಕೊಂಡಿದ್ದರು. ಪ್ರಕರಣ ದಾಖಲಿಸುವುದಾಗಿ ಎಂಜಿನಿಯರ್ ಪ್ರವೀಣ್ ಅವರಿಗೆ ಎಚ್ಚರಿಸಿದ್ದರು. ಎಚ್ಚೆತ್ತುಕೊಂಡ ಸಿಬ್ಬಂದಿ, ಕಾಮಗಾರಿ ಮಾಡಿದ್ದಾರೆ.

## 'ವಯೋಮಿತಿ ಸಡಿಲಿಸಿ'

**ಬೆಂಗಳೂರು:** 'ರಾಜ್ಯ ಸರ್ಕಾರವು 2022–23ನೇ ಸಾಲಿನಲ್ಲಿ ನಡೆಸಲಿರುವ ಎಲ್ಲ ನೇಮಕಾತಿಗಳಲ್ಲೂ ವಯೋಮಿತಿ ಸಡಿಲಗೊಳಿಸಬೇಕು' ಎಂದು ಉದ್ಯೋಗಾಕಾಂಕ್ಷಿಗಳು ಒತ್ತಾಯಿಸಿದ್ದಾರೆ.

'ಕೋವಿಡ್‌ನಿಂದಾಗಿ ಹಲವು ಇಲಾಖೆಗಳಲ್ಲಿ ಹೊಸ ನೇಮಕಾತಿ ನಡೆದಿಲ್ಲ. 2011ರ ಕೆಎಎಸ್ ಹಾಗೂ ಕೆ.ಇ.ಬಿ.ನೇಮಕಾತಿಗಳನ್ನು ರದ್ದು ಮಾಡಲಾಗಿದೆ. ಖಾಸಗಿ ಕಂಪನಿಗಳು ಕೋವಿಡ್ ನೆಪ ಮುಂದಿಟ್ಟು ಹಲವರನ್ನು ಕೆಲಸದಿಂದ ವಜಾಗೊಳಿಸಿವೆ. ಹೀಗಾಗಿ ನಿರುದ್ಯೋಗಿಗಳ ಸಂಖ್ಯೆ ಏರಿದೆ ಎಂದರು.

ಸಿಸಿಬಿ ಕಾರ್ಯಾಚರಣೆ: ₹ 70 ಲಕ್ಷ ಮೌಲ್ಯದ ಮಾದಕ ವಸ್ತು ಜಪ್ತಿ • ಎಂಟು ಆರೋಪಿಗಳ ಬಂಧನ

# ‘ಬಿಟ್ ಕಾಯಿನ್’ ಕೊಟ್ಟು ಡ್ರಗ್ಸ್ ಖರೀದಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಂತರರಾಷ್ಟ್ರೀಯ ಪೆಡ್ಲರ್‌ಗಳಿಗೆ ‘ಬಿಟ್ ಕಾಯಿನ್’ ರೂಪದಲ್ಲಿ ಹಣ ಪಾವತಿ ಮಾಡಿ ಡ್ರಗ್ಸ್ ಖರೀದಿಸಿ ತಂದು ನಗರದಲ್ಲಿ ಮಾರುತ್ತಿದ್ದ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದಾರೆ.

‘ಆರ್‌ಎಂಸಿ ಯಾರ್ಡ್ ಹಾಗೂ ಬಂಡೇಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಸಕ್ರಿಯವಾಗಿದ್ದ ಡ್ರಗ್ಸ್ ಜಾಲದ ಬಗ್ಗೆ ಮಾಹಿತಿ ಬಂದಿತ್ತು. ಕಾರ್ಯಾಚರಣೆ ನಡೆಸಿ, ಎಂಟು ಆರೋಪಿಗಳನ್ನು ಬಂಧಿಸಲಾಗಿದೆ. ಅವರಿಂದ ₹ 70 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

‘ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಉದ್ಯಮಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳಿಗೆ ಡ್ರಗ್ಸ್ ಮಾರಲಾಗುತ್ತಿತ್ತು. ಮಾರಾಟ ಜಾಲದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದೆ. ಬಂಧಿತರ ಹೆಸರನ್ನು ತನಿಖೆಯ ಗೋಪ್ಯತೆ ದೃಷ್ಟಿಯಿಂದ ಬಹಿರಂಗಪಡಿಸಲಾಗದು’ ಎಂದೂ ತಿಳಿಸಿದರು.



ಆರೋಪಿಗಳಿಂದ ಜಪ್ತಿ ಮಾಡಲಾದ ಎಲ್‌ಎಸ್‌ಡಿ ಕಾಗದ ಚೂರುಗಳು

**ಡಾರ್ಕ್‌ನೆಟ್ ಮೂಲಕ ಸಂಪರ್ಕ:** ‘ಬಂಧಿತರಲ್ಲಿ ಇಬ್ಬರು, ಡಾರ್ಕ್‌ನೆಟ್ ಜಾಲತಾಣ ಬಳಕೆಯಲ್ಲಿ ಪರಿಣಿತರು. ಅಲ್ಲಿಯೇ ಅಂತರರಾಷ್ಟ್ರೀಯ ಪೆಡ್ಲರ್ ಜೊತೆಯಲ್ಲಿ ಅವರು ಸಂಪರ್ಕ ಸಾಧಿಸುತ್ತಿದ್ದರು’ ಎಂದು ಅಧಿಕಾರಿ ಹೇಳಿದರು.

‘ಎಂಡಿಎಂಎ ಮಾತ್ರೆಗಳು, ಎಲ್‌ಎಸ್‌ಡಿ ಕಾಗದ ಚೂರುಗಳನ್ನು ಆರೋಪಿಗಳು ಖರೀದಿಸುತ್ತಿದ್ದರು. ಬಿಟ್ ಕಾಯಿನ್ ಮೂಲಕ ಪೆಡ್ಲರ್‌ಗಳಿಗೆ ಹಣ ಪಾವತಿಸುತ್ತಿದ್ದರು. ಅಂಚೆ ಮೂಲಕ ನಗರಕ್ಕೆ ಬರುತ್ತಿದ್ದ ಮಾದಕವಸ್ತುವನ್ನು ಮನೆಯಲ್ಲಿ ಸಂಗ್ರಹಿಸಿ, ವ್ಯವಸ್ಥಿತ ಜಾಲದ ಮೂಲಕ ಗ್ರಾಹಕರಿಗೆ ಮಾರಲಾಗುತ್ತಿತ್ತು’ ಎಂದೂ ವಿವರಿಸಿದರು.

‘1 ಕೆ.ಜಿ ಎಂಡಿಎಂಎ ಮಾತ್ರೆಗಳು, 183 ಎಲ್‌ಎಸ್‌ಡಿ ಕಾಗದ ಚೂರುಗಳು, 9 ಮೊಬೈಲ್, ತೂಕದ ಯಂತ್ರ ಜಪ್ತಿ ಮಾಡಲಾಗಿದೆ. ಆರ್‌ಎಂಸಿ ಯಾರ್ಡ್, ಬಂಡೇಪಾಳ್ಯ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ’ ಎಂದು ತಿಳಿಸಿದರು.

## 10 ಕೆ.ಜಿ ಗಾಂಜಾ ಸಾಗಣೆ: ಬಂಧನ

**ಬೆಂಗಳೂರು:** ಗಾಂಜಾ ಸಾಗಣೆ ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಕಲಾಸಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕೋಲಾರದ ಮಹಮ್ಮದ್ ಖಲೀಮುಲ್ಲಾ (46) ಹಾಗೂ ನವಾಜ್ ಪಾಷಾ (30) ಬಂಧಿತರು. ಅವರಿಂದ 20 ಕೆ.ಜಿ 250 ಗ್ರಾಂ ಗಾಂಜಾ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಗೋಣಿ ಚೀಲದಲ್ಲಿ ಗಾಂಜಾ ತುಂಬಿಕೊಂಡು ಬಂದಿದ್ದ ಆರೋಪಿಗಳು, ಕಲಾಸಿಪಾಳ್ಯದ ಪ್ರದೀಪ್ ವೃತ್ತದ ಬಳಿ ಗ್ರಾಹಕರಿಗೆ ಮಾರಲು ಯತ್ನಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ತಿಳಿಸಿದರು.

‘ಕೆಲ ಕಾರ್ಮಿಕರು, ಕೆಲ ಕಾಲೇಜು ವಿದ್ಯಾರ್ಥಿಗಳಿಗೆ ಗಾಂಜಾ ಮಾರಲಾಗುತ್ತಿತ್ತು. ಅದಕ್ಕಾಗಿ ನಗರದಲ್ಲಿ ತಮ್ಮದೇ ಜಾಲ ರೂಪಿಸಿಕೊಂಡಿದ್ದರೆಂಬ ಮಾಹಿತಿ ಇದೆ’ ಎಂದೂ ಹೇಳಿದರು.

## ದಂಡುಪಾಳ್ಯದವರಿಗೆ ಮನೆ ಬಾಡಿಗೆಗೆ ಪೊಲೀಸರ ಸಲಹೆ ಕೇಳಿದ ಮಾಲೀಕ

**ಬೆಂಗಳೂರು:** ‘ದಂಡುಪಾಳ್ಯ ಸಿನಿಮಾ ನೋಡಿದರೆ, ಭಯವಾಗುತ್ತದೆ’ ಎಂದು ಟ್ವೀಟ್ ಮಾಡಿರುವ ನಗರದ ಮನೆ ಮಾಲೀಕರೊಬ್ಬರು, ‘ದಂಡುಪಾಳ್ಯದವರಿಗೆ ಮನೆ ಬಾಡಿಗೆಗೆ ಕೊಡಬಹುದಾ?’ ಎಂದು ಪೊಲೀಸರ ಸಲಹೆ ಕೋರಿದ್ದಾರೆ.

‘ಬೆಂಗಳೂರು ಸಿಟಿ ಪೊಲೀಸ್’ ಟ್ವಿಟರ್ ಖಾತೆಗೆ ತಮ್ಮ ಸಂದೇಶ ಟ್ಯಾಗ್ ಮಾಡಿರುವ ಕೃಷ್ಣಮೂರ್ತಿ ಎಂಬುವರು, ‘ಬಾಡಿಗೆಗೆ ನೀಡುವ ವಿಚಾರದಲ್ಲಿ ದಯವಿಟ್ಟು ಸಹಾಯ ಮಾಡಿ’ ಎಂದಿದ್ದಾರೆ.

‘ಇತ್ತೀಚೆಗೆ ನಮ್ಮ ಮನೆಗೆ ಬಾಡಿಗೆದಾರರು ಬಂದಿದ್ದಾರೆ. ಅವರ ಆಧಾರ್ ಪರಿಶೀಲಿಸಿದಾಗ, ದಂಡುಪಾಳ್ಯ ಗ್ರಾಮದವರು ಎಂದು ಗೊತ್ತಾಗಿದೆ. ಈ ಗ್ರಾಮದವರು ಕೊಲೆ ಮಾಡಿ ಆಭರಣ ದೋಚುತ್ತಾರೆಂಬುದನ್ನು ಸಿನಿಮಾದಲ್ಲಿ ತೋರಿಸಲಾಗಿದೆ. ಸಿನಿಮಾದ ದೃಶ್ಯಗಳನ್ನು ನೋಡಿ ಭಯವೂ ಆಗಿತ್ತು. ಇದೀಗ, ಅದೇ ಗ್ರಾಮದ ನಿವಾಸಿ ನಮ್ಮ ಮನೆ ಬಾಡಿಗೆಗೆ ಬಂದಿದ್ದಾರೆ. ಬಾಡಿಗೆ ಕೊಡಬಹುದೇ’ ಎಂದೂ ಕೃಷ್ಣಮೂರ್ತಿ ಪ್ರಶ್ನಿಸಿದ್ದಾರೆ.

ಅದಕ್ಕೆ ಪೊಲೀಸರು, ‘ಮನೆ ಸಮೀಪದ ಠಾಣೆಗೆ ಹೋಗಿ. ಅವರು ನಿಮಗೆ ಸಹಾಯ ಮಾಡುತ್ತಾರೆ’ ಎಂದಿದ್ದಾರೆ.

ಅಪರಾಧ ಸುದ್ದಿ

## ಸುದ್ದಿ 2 ನಿಮಿಷ

### ‘ಪಿಎಸ್‌ಐ ನೇಮಕ ಆರಂಭಿಸಿ’

**ಬೆಂಗಳೂರು:** ‘545 ಪೊಲೀಸ್ ಇನ್‌ಸ್ಪೆಕ್ಟರ್ ಹುದ್ದೆಯ ನೇಮಕಾತಿ ಪ್ರಕ್ರಿಯೆಯನ್ನು ಶೀಘ್ರ ಮತ್ತೆ ಆರಂಭಿಸಬೇಕು’ ಎಂದು ಆಯ್ಕೆಯಾದ ಅಭ್ಯರ್ಥಿಗಳು ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಅಮ್ರಿತ್ ಪಾಲ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

‘ಈ ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆಯನ್ನು 2020ರಲ್ಲಿ ಹೊರಡಿಸಲಾಗಿತ್ತು. ಈಗಾಗಲೇ ಪ್ರಕ್ರಿಯೆ ವಿಳಂಬವಾಗಿದೆ. ಜೊತೆಗೆ, ಉದ್ಯೋಗದ ಕನಸು ಕಾಣುತ್ತಿದ್ದವರ ಭವಿಷ್ಯಕ್ಕೆ ಕೋವಿಡ್ ಕೊಳ್ಳಿ ಇಟ್ಟಿದೆ. ಇದ್ದಕ್ಕಿದ್ದಂತೆ ಆಡಳಿತಾತ್ಮಕ ಕಾರಣ ಹೇಳಿಕೊಂಡು ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಳಿಸಿರುವುದು ಆಯ್ಕೆಯಾದ ಅಭ್ಯರ್ಥಿಗಳಲ್ಲಿ ಆತಂಕ, ಅನುಮಾನಗಳಿಗೆ ಕಾರಣವಾಗಿದೆ’ ಎಂದೂ ಮನವಿಯಲ್ಲಿ ಅಳಲು ತೋಡಿಕೊಂಡಿದ್ದಾರೆ.



‘ಆಯ್ಕೆ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳನ್ನು ಕಲ್ಯಾಣ ಕರ್ನಾಟಕೇತರ ಕೋಟಾದಲ್ಲಿ ಆಯ್ಕೆ ಮಾಡದೆ, ಕಲ್ಯಾಣ ಕರ್ನಾಟಕ ಕೋಟಾದಲ್ಲಿ ಆಯ್ಕೆ ಮಾಡುವ ಮೂಲಕ ಅನ್ಯಾಯ ಮಾಡಲಾಗಿದೆ ಎಂದು ಆ ಭಾಗದ ಜನಪ್ರತಿನಿಧಿಗಳ ಮೂಲಕ ಅಭ್ಯರ್ಥಿಗಳು ಒತ್ತಡ ತಂದಿದ್ದಾರೆ. ಈ ಕಾರಣಕ್ಕೆ ನೇಮಕಾತಿ ಸ್ಥಗಿತಗೊಳಿಸಲಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳ ಕೋಟಾದಲ್ಲಿ 107 ಮಂದಿ ಆಯ್ಕೆಯಾಗಿದ್ದಾರೆ. ಕಲ್ಯಾಣ ಕರ್ನಾಟಕೇತರ ಕೋಟಾದಲ್ಲಿ ಕಲ್ಯಾಣ ಕರ್ನಾಟಕ ಭಾಗದ 30ಕ್ಕೂ ಹೆಚ್ಚು ಮಂದಿ ಆಯ್ಕೆ ಆಗಿದ್ದಾರೆ’ ಎಂದೂ ಅಭ್ಯರ್ಥಿಗಳು ಪ್ರತಿಪಾದಿಸಿದ್ದಾರೆ.

### ‘ಬೆಂಗಳೂರು ಸೇರಿ ಆರು ಕಡೆ ಎನ್‌ಐಎ ಕಚೇರಿ ಸ್ಥಾಪನೆ’

**ನವದೆಹಲಿ:** ಬೆಂಗಳೂರು ಸೇರಿದಂತೆ ದೇಶದ ಆರು ವಿವಿಧ ನಗರಗಳಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಕಚೇರಿ ಸ್ಥಾಪಿಸಲಾಗುವುದು ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ತಿಳಿಸಿದ್ದಾರೆ.

ಬಿಜೆಪಿಯ ತೇಜಸ್ವಿ ಸೂರ್ಯ ಅವರಿಗೆ ಸಚಿವರು ಲಿಖಿತ ಉತ್ತರ ನೀಡಿದ್ದು, ‘ಆರು ನೂತನ ಶಾಖೆಗಳ ಸ್ಥಾಪನೆಗೆ ಜ.5ರಂದು ಮಂಜೂರಾತಿ ನೀಡಲಾಗಿದೆ. ಭಯೋತ್ಪಾದನೆಯನ್ನು ಹತ್ತಿಕ್ಕುವ ನಿಟ್ಟಿನಲ್ಲಿ ತನಿಖಾ ಸಂಸ್ಥೆಯನ್ನು ಸಾಂಸ್ಥಿಕವಾಗಿ ಬಲಪಡಿಸುವುದು ಉದ್ದೇಶವಾಗಿದೆ’ ಎಂದಿದ್ದಾರೆ.

‘ಬೆಂಗಳೂರಿನಲ್ಲಿ ಸ್ಥಾಪಿಸಲಿರುವ ಶಾಖೆಗೆ 52 ಹುದ್ದೆ ಮಂಜೂರು ಮಾಡಲಾಗಿದೆ’ ಎಂದು ತಿಳಿಸಿದ್ದಾರೆ. ಎನ್‌ಐಎ ಕೇಂದ್ರ ಕಚೇರಿ ನವದೆಹಲಿಯಲ್ಲಿದ್ದು, ಸದ್ಯ 18 ನಗರಗಳಲ್ಲಿ ಕಚೇರಿಯನ್ನು ಹೊಂದಿದೆ.

## 10ನೇ ತರಗತಿ ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

**ಆನೇಕಲ್:** ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯ ಕಮ್ಮಸಂದ್ರದ ಡ್ಯಾಡಿ ಗಾರ್ಡ್‌ನಲ್ಲಿ ಮಂಗಳವಾರ 10ನೇ ತರಗತಿ ವಿದ್ಯಾರ್ಥಿಯೊಬ್ಬ ಐದು ಅಂತಸ್ತಿನ ಕಟ್ಟಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಯನ್ನು ಆದಿತ್ಯ ಪಾಟೀಲ (17) ಎಂದು ಗುರುತಿಸಲಾಗಿದೆ. ಈತ ಬೆಂಗಳೂರಿನಲ್ಲಿ ಅರಿವಳಿಕೆ ತಜ್ಞರಾಗಿರುವ ಡಾ.ಶರಣು ಪಾಟೀಲ ಮತ್ತು ಡಾ. ಮಮತಾ ಪಾಟೀಲ ದಂಪತಿಯ ಮಗ.



ಆದಿತ್ಯ ಪಾಟೀಲ

10ನೇ ತರಗತಿ ವಿದ್ಯಾರ್ಥಿಯಾಗಿದ್ದ ಆದಿತ್ಯ ಮನೆಯಲ್ಲಿಯೇ ಪರೀಕ್ಷೆಗೆ ತಯಾರಿ ನಡೆಸಿದ್ದ. ಮಧ್ಯಾಹ್ನ 1 ಗಂಟೆಗೆ ಅಂಗಡಿಗೆ ಹೋಗುವುದಾಗಿ ಹೇಳಿ ಹೊರಹೋಗಿದ್ದು, ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೇಲಿಂದ ಜಿಗಿದ ರಭಸಕ್ಕೆ ಆತನ ತಲೆ ಹೋಳಾಗಿ ಮೆದುಳು ಚೆಲ್ಲಾಪಿಲ್ಲಿಯಾಗಿದೆ. ಸ್ಥಳೀಯರು ಆದಿತ್ಯನನ್ನು ಗುರುತಿಸಿ ಪೋಷಕರಿಗೆ ಮಾಹಿತಿ ನೀಡಿದ್ದಾರೆ. ಹೆಬ್ಬಗೋಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಡಿವೈಎಸ್‌ಪಿ ಎಂ.ಮಲ್ಲೇಶ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

## ಅಪಘಾತ: ಪ್ರಿಂಟಿಂಗ್ ಪ್ರೆಸ್ ಮಾಲೀಕ ಸಾವು

**ಬೆಂಗಳೂರು:** ಕುಮಾರಸ್ವಾಮಿ ಲೇಔಟ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ್ದ ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದ ಗಿರೀಶ್ (50) ಎಂಬುವರು ಚಿಕಿತ್ಸೆಗೆ ಸ್ಪಂದಿಸದೇ ಆಸ್ಪತ್ರೆಯಲ್ಲಿ ಮಂಗಳವಾರ ಅಸುನೀಗಿದ್ದಾರೆ. ‘ಮಾಲೂರಿನ ಗಿರೀಶ್, ಜಿಂಕೆ ಉದ್ಯಾನ ಬಳಿ ‘ಶುಭೋದಯ’ ಪ್ರಿಂಟಿಂಗ್ ಪ್ರೆಸ್ ನಡೆಸುತ್ತಿದ್ದರು. ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಅಪಘಾತ ಸಂಭವಿಸಿತ್ತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ಗಿರೀಶ್

‘ಭಾನುವಾರವಷ್ಟೇ ಗಿರೀಶ್ 50ನೇ ಹುಟ್ಟುಹಬ್ಬ ಆಚರಿಸಿಕೊಂಡಿದ್ದರು. 80 ಅಡಿ ರಸ್ತೆಯಲ್ಲಿ ಸೋಮವಾರ ಮಧ್ಯಾಹ್ನ ದ್ವಿಚಕ್ರ ವಾಹನದಲ್ಲಿ ತೆರಳುವಾಗ ನೀರಿನ ಟ್ಯಾಂಕರ್ ಡಿಕ್ಕಿ ಹೊಡೆದಿತ್ತು.’

‘ತಲೆಗೆ ತೀವ್ರ ಪೆಟ್ಟು ಪ್ರಜ್ಞೆ ಕಳೆದುಕೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅವರು ತೀರಿಕೊಂಡಿದ್ದಾರೆ. ನೀರಿನ ಟ್ಯಾಂಕರ್ ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ’ ಎಂದೂ ತಿಳಿಸಿದರು.

ಉದಯವಾಣಿ, ಸಂಜೆವಾಣಿ ಪತ್ರಿಕೆಗಳಲ್ಲಿ ಗಿರೀಶ್ ಕೆಲಸ ಮಾಡಿದ್ದರು. ಅವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ.

## ಬ್ಲ್ಯಾಕ್‌ಮೇಲ್: ವಿಚಾರಣೆಗೆ ಮಹಿಳೆ ಹಾಜರು

**ಬೆಂಗಳೂರು:** ‘ಸೇಡಂ ಕ್ಷೇತ್ರದ ಶಾಸಕ ರಾಜಕುಮಾರ್ ಪಾಟೀಲ ತೇಲ್ಕೂರ ಅವರನ್ನು ಬ್ಲ್ಯಾಕ್‌ಮೇಲ್ ಮಾಡಲಾಗಿದೆ’ ಎನ್ನಲಾದ ಪ್ರಕರಣದ ವಿಚಾರಣೆಗೆ ಆರೋಪಿತ ಮಹಿಳೆ ಮಂಗಳವಾರ ಹಾಜರಾದರು.

‘₹ 2 ಕೋಟಿ ನೀಡುವಂತೆ ಮಹಿಳೆಯೊಬ್ಬರು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ’ ಎಂದು ಆರೋಪಿಸಿ ಶಾಸಕ ನೀಡಿದ್ದ ದೂರಿನನ್ವಯ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಪ್ರಕರಣ ಸಂಬಂಧ ಮಹಿಳೆ ಹಾಗೂ ಇತರರನ್ನು ಇತ್ತೀಚೆಗೆ ವಿಚಾರಣೆ ನಡೆಸಲಾಗಿತ್ತು. ಮಹಿಳೆಯಿಂದ ಮತ್ತಷ್ಟು ಮಾಹಿತಿ ಕಲೆಹಾಕಬೇಕಿದ್ದು, ವಿಚಾರಣೆಗೆ ಬರುವಂತೆ ನೋಟಿಸ್ ನೀಡಲಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಠಾಣೆಗೆ ಬೆಳಿಗ್ಗೆ ಬಂದಿದ್ದ ಮಹಿಳೆಯನ್ನು ಕೆಲ ಗಂಟೆ ವಿಚಾರಣೆ ನಡೆಸಲಾಯಿತು’ ಎಂದೂ ತಿಳಿಸಿವೆ. ‘ಶಾಸಕರಿಂದಲೇ ಮಗು ಹುಟ್ಟಿದ್ದು, ಜೀವನಾಂಶ ಕೇಳಿದ್ದಕ್ಕೆ ಈ ರೀತಿ ಸುಳ್ಳು ಆರೋಪ ಮಾಡಲಾಗುತ್ತಿದೆ. ಇದರ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು’ ಎಂದು ಮಹಿಳೆ ಹೇಳಿರುವುದಾಗಿ ಗೊತ್ತಾಗಿದೆ.

**ಕಮಿಷನರ್ ಕಚೇರಿಗೆ ಶಾಸಕ ಭೇಟಿ:** ಮಹಿಳೆ ಠಾಣೆಗೆ ಹಾಜರಾದ ಬೆನ್ನಲ್ಲೇ, ರಾಜಕುಮಾರ್ ಪಾಟೀಲ ತೇಲ್ಕೂರ ಅವರು ನಗರ ಪೊಲೀಸ್ ಕಮಿಷನರ್ ಕಚೇರಿಗೆ ಮಂಗಳವಾರ ಮಧ್ಯಾಹ್ನ ಭೇಟಿ ನೀಡಿದರು.

ಕಮಿಷನರ್ ಕಮಲ್ ಪಂತ್ ಅವರು ಪೊಲೀಸ್ ಅಧಿಕಾರಿಗಳ ಸಭೆ ನಡೆಸುತ್ತಿದ್ದರು. ಅವರನ್ನು ಭೇಟಿಯಾಗಲು ಶಾಸಕರಿಗೆ ಸಾಧ್ಯವಾಗಲಿಲ್ಲ. ಹೀಗಾಗಿ, ಕಚೇರಿಯಿಂದ ವಾಪಸು ಹೋದರು.

ಈ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ರಾಜಕುಮಾರ್ ಪಾಟೀಲ ತೇಲ್ಕೂರ, ‘ಬ್ಲ್ಯಾಕ್‌ಮೇಲ್ ಪ್ರಕರಣದಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಅದರ ಪ್ರಗತಿ ತಿಳಿಯಲು ಕಮಿಷನರ್ ಕಚೇರಿಗೆ ಬಂದಿದ್ದೆ’ ಎಂದರು.

## ₹ 11.45 ಲಕ್ಷ ಮೌಲ್ಯದ 20 ವಾಹನ ಜಪ್ತಿ

**ಬೆಂಗಳೂರು:** ಸಾರ್ವಜನಿಕ ಸ್ಥಳ ಹಾಗೂ ಮನೆಗಳ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಚಾಮರಾಜಪೇಟೆ ಪೊಲೀಸರು ಬಂಧಿಸಿದ್ದಾರೆ.

‘ಶರವಣ ಅಲಿಯಾಸ್ ಶಂಕರ್ (20) ಹಾಗೂ ರಾಮದಾಸ್ ಅಲಿಯಾಸ್ ಕಪ್ಪೆರಾಯ (22) ಬಂಧಿತರು. ಅವರಿಂದ ₹ 11.45 ಲಕ್ಷ ಮೌಲ್ಯದ 20 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರ ರಾಯಲ್ ಎನ್‌ಫೀಲ್ಡ್ ಬೈಕ್ ಕಳ್ಳತನವಾಗಿತ್ತು. ಈ ಬಗ್ಗೆ ದಾಖಲಾದ ಪ್ರಕರಣದ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು.’

‘ಹನುಮಂತನಗರ, ಚಂದ್ರಾ ಲೇಔಟ್, ಕುಮಾರಸ್ವಾಮಿ ಲೇಔಟ್ ಹಾಗೂ ಕೆಂಪೇಗೌಡನಗರ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ಕೃತ್ಯ ಎಸಗಿರುವ ಮಾಹಿತಿ ಇದೆ’ ಎಂದೂ ಪೊಲೀಸರು ತಿಳಿಸಿದರು.

## ವಾಯುಸೇನೆಯ ನಿವೃತ್ತ ಪೈಲಟ್, ಪತ್ನಿಯ ಹತ್ಯೆ

**ಬಿಡದಿ:** ಇಲ್ಲಿನ ಈಗಲ್‌ಟನ್ ರೆಸಾರ್ಟ್ ಮತ್ತು ಗಾಲ್ಫ್ ವಿಲೇಜ್ ಆವರಣದಲ್ಲಿ ಇರುವ ಖಾಸಗಿ ವಿಲ್ಲಾವೊಂದರಲ್ಲಿ ದುಷ್ಕರ್ಮಿಗಳು ವೃದ್ಧ ದಂಪತಿಯನ್ನು ಬರ್ಬರವಾಗಿ ಹತ್ಯೆ ಮಾಡಿದ್ದಾರೆ.

ಈಗಲ್‌ಟನ್ ವಿಲ್ಲಾ ಸಿ–21ರಲ್ಲಿ ವಾಸವಿದ್ದ, ಚೆನ್ನೈ ಮೂಲದ ರಘುರಾಜ್ (70), ಪತ್ನಿ ಆಶಾ (63) ಮೃತರು. ಸುತ್ತಿಗೆಯಿಂದ ಹೊಡೆದು ಹತ್ಯೆ ಮಾಡಲಾಗಿದೆ. ಪರಿಚಯಸ್ಥರೇ ಈ ಕೃತ್ಯ ಎಸಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ರಘುರಾಜ್ ವಾಯುಪಡೆಯಲ್ಲಿ ಪೈಲಟ್ ಆಗಿ ಸೇವೆ ಸಲ್ಲಿಸಿದ್ದು, ನಿವೃತ್ತಿ ಬಳಿಕ ಈಗಲ್‌ಟನ್‌ನಲ್ಲಿ ವಿಲ್ಲಾ ಖರೀದಿಸಿ ಪತ್ನಿ ಜೊತೆ ನೆಲೆಸಿದ್ದರು. ಅವರಿಗೆ ಒಬ್ಬ ಪುತ್ರ ಹಾಗೂ ಒಬ್ಬ ಪುತ್ರಿ ಇದ್ದು, ಕೆಲಸದ ನಿಮಿತ್ತ ದೆಹಲಿಯಲ್ಲಿದ್ದಾರೆ.



ರಘುರಾಜ್ ಹಾಗೂ ಆಶಾ ದಂಪತಿ

**ಬೆಳಕಿಗೆ ಬಂದಿದ್ದು ಹೇಗೆ?:** ರಘುರಾಜ್ ಸೋಮವಾರ ರಾತ್ರಿಯಿಂದ ಮೊಬೈಲ್ ಕರೆ ಸ್ವೀಕರಿಸುತ್ತಿರಲಿಲ್ಲ. ಗಾಬರಿಗೊಂಡ ಅವರ ಪುತ್ರ ಭದ್ರತಾ ಸಿಬ್ಬಂದಿಗೆ ಮಂಗಳವಾರ ಮಧ್ಯಾಹ್ನ ಕರೆ ಮಾಡಿ ವಿಚಾರಿಸಿದ್ದಾರೆ. ಭದ್ರತಾ ಸಿಬ್ಬಂದಿ ಮನೆಗೆ ಬಂದು ನೋಡಿದಾಗ ಅಲ್ಲಿಂದ ಒಬ್ಬ ವ್ಯಕ್ತಿ ಓಡುವುದು ಕಂಡಿದೆ. ಮನೆಯ ಪ್ರತ್ಯೇಕ ಕೊಠಡಿಗಳಲ್ಲಿ ರಘುರಾಜ್, ಆಶಾ ಅವರ ಶವವಿತ್ತು ಎಂದು ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಿರೀಶ್ ಮಾಹಿತಿ ನೀಡಿದರು.

ವಿಲ್ಲಾಗೆ ಆಗಾಗ್ಗೆ ಬಿಹಾರ ಮೂಲದ ಪರಿಚಯಸ್ಥ ಬಂದು ಹೋಗುತ್ತಿದ್ದು, ಆತನೇ ಕೃತ್ಯ ಎಸಗಿರುವ ಶಂಕೆ ಇದೆ. ಎಂದು ಪೊಲೀಸರು ತಿಳಿಸಿದರು.

## ಅಪಘಾತ: ನಗರದ ಮೂವರು ಸಾವು

**ಹಿರಿಯೂರು:** ತಾಲ್ಲೂಕಿನ ಬೀರೇನಹಳ್ಳಿ ಸಮೀಪ ಮಂಗಳವಾರ ಬೆಳಿಗ್ಗೆ ಕಾರೊಂದು ಮರಕ್ಕೆ ಡಿಕ್ಕಿ ಹೊಡೆದು ಅತ್ತೆ, ಸೊಸೆ ಹಾಗೂ ಮೊಮ್ಮಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ರಸ್ತೆಗೆ ಅಡ್ಡಬಂದ ಯಾವುದೋ ಪ್ರಾಣಿಯನ್ನು ಉಳಿಸಲು ಹೋಗಿ, ಚಾಲಕರು ಕಾರಿನ ನಿಯಂತ್ರಣ ಕಳೆದುಕೊಂಡಿದ್ದು, ಅಪಘಾತಕ್ಕೆ ಕಾರಣ ಎನ್ನಲಾಗಿದೆ.

ಬೆಂಗಳೂರಿನ ರಾಜರಾಜೇಶ್ವರಿ ನಗರದ ನಿವಾಸಿ ಸುರೇಶ್ ಅವರ ಪತ್ನಿ, ರೇಣುಕಾದೇವಿ (39), ಅವರ ಪುತ್ರಿ ಸುದೀಕ್ಷಾ (17) ಅತ್ತೆ ವಿಶಾಲಾಕ್ಷಿ (70) ಮೃತರು. ರೇಣುಕಾದೇವಿಯವರ ಮತ್ತೊಬ್ಬ ಪುತ್ರಿ ಪ್ರತಿಕ್ಷಾ (13) ಗಂಭೀರವಾಗಿ ಗಾಯಗೊಂಡಿದ್ದು, ಹಿರಿಯೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ರೇಣುಕಾದೇವಿ ಅವರು ಭದ್ರಾವತಿಯಲ್ಲಿ ಸಂಬಂಧಿಕರೊಬ್ಬರ ಮದುವೆಗೆಂದು ಅತ್ತೆ, ಇಬ್ಬರು ಮಕ್ಕಳನ್ನು ಕರೆದುಕೊಂಡು ಹೋಗಿದ್ದರು. ಮಂಗಳವಾರ ಬೆಳಿಗ್ಗೆ ಬೆಂಗಳೂರಿಗೆ ಹಿಂದಿರುಗುವಾಗ ದುರ್ಘಟನೆ ಸಂಭವಿಸಿದೆ.

ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತುಮಕೂರು–ಶಿವಮೊಗ್ಗ ಹೆದ್ದಾರಿ ವಿಸ್ತರಣೆ ಕಾಮಗಾರಿ ನಡೆಯುತ್ತಿರುವ ಕಾರಣ ಕಾರಿನಲ್ಲಿ ಹೋಗುವ ಬಹಳಷ್ಟು ಜನ ಭದ್ರಾವತಿ–ತರೀಕೆರೆ– ಅಜ್ಜಂಪುರ–ಹೊಸದುರ್ಗ–ಹಿರಿಯೂರು ಮಾರ್ಗವಾಗಿ ಬೆಂಗಳೂರಿಗೆ ಹೋಗುತ್ತಿದ್ದಾರೆ.

ಐಎಫ್‌ಎಬಿಯಿಂದ ಪೂರೈಕೆ ಆಗುವ ಗುಲಾಬಿಯ ದರ ಗಣನೀಯ ಏರಿಕೆ

# ಪ್ರೇಮಿಗಳ ದಿನ: ಕೆಂಗುಲಾಬಿಗೆ ಭರ್ಜರಿ ಬೇಡಿಕೆ

• ಮನೋಹರ್ ಎಂ.



ಹೊರ ರಾಜ್ಯಗಳಿಗೆ ತಲುಪಿಸಲು ಗುಲಾಬಿ ಹೂವುಗಳನ್ನು ಅಣಿಗೊಳಿಸುತ್ತಿರುವ ಐಎಫ್‌ಎಬಿ ಸಿಬ್ಬಂದಿ ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಪ್ರಜಾವಾಣಿ ವಿಶೇಷ

**ಬೆಂಗಳೂರು:** 'ಪ್ರೇಮಿಗಳ ದಿನ' ಸಮೀಪಿಸುತ್ತಿರುವುದರಿಂದ ಕೆಂಗುಲಾಬಿಗೆ ಬೇಡಿಕೆ ಹೆಚ್ಚಾಗಿದೆ. ಬೆಂಗಳೂರು ಅಂತರರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರದಿಂದ (ಐಎಫ್‌ಎಬಿ) ಹೊರ ರಾಜ್ಯಗಳಿಗೆ ಪೂರೈಕೆಯಾಗುತ್ತಿರುವ ಕೆಂಗುಲಾಬಿಯ ದರ ವಾರದಿಂದ ನಿರಂತರವಾಗಿ ಏರಿಕೆ ಕಂಡಿದೆ.

ಹೆಬ್ಬಾಳದಲ್ಲಿರುವ ಐಎಫ್‌ಎಬಿ ಕೇಂದ್ರಕ್ಕೆ ರಂಗು ರಂಗಿನ ಗುಲಾಬಿಗಳು ಹೆಚ್ಚಿನ ಪ್ರಮಾಣದಲ್ಲಿ ಬರಲಾರಂಭಿಸಿವೆ. ಹೈದರಾಬಾದ್, ದೆಹಲಿ, ಮುಂಬೈ, ಚೆನ್ನೈ, ಕೋಲ್ಕತ್ತ ಸೇರಿದಂತೆ ದೇಶದ ಪ್ರಮುಖ ನಗರಗಳಿಗೆ ಪ್ರತಿನಿತ್ಯ ಲಕ್ಷಾಂತರ ಗುಲಾಬಿಗಳು ಈ ಕೇಂದ್ರದಿಂದ ಪೂರೈಕೆಯಾಗುತ್ತಿವೆ.

ಫೆ.14ರ ಪ್ರೇಮಿಗಳ ದಿನಕ್ಕೆ ದಿನಗಣನೆ ಆರಂಭವಾಗಿದ್ದು, ಪೂರೈಕೆಯಾಗುವ ಗುಲಾಬಿ ಹೂಗಳ ಸಂಖ್ಯೆಯೂ ದುಪ್ಪಟ್ಟಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ದರವೂ ಏರಿದೆ. ಎರಡು ವರ್ಷದಿಂದ ಕೋವಿಡ್ ಸ್ಥಿತಿಯಿಂದಾಗಿ ಮಂಕಾಗಿದ್ದ ಗುಲಾಬಿ ಹೂವಿನ ವಹಿವಾಟು ಗರಿಗೆದರಿದೆ.

'ನವೆಂಬರ್‌ನಿಂದ ಫೆಬ್ರುವರಿ ಅವಧಿಯಲ್ಲಿ ಗುಲಾಬಿ ಹೆಚ್ಚಿನ ಸಂಖ್ಯೆಯಲ್ಲಿ ಪೂರೈಕೆಯಾಗುತ್ತದೆ. ಸಾಮಾನ್ಯ ದಿನಗಳಲ್ಲಿ ಸುಮಾರು 2 ಲಕ್ಷ ಗುಲಾಬಿಗಳು ಕೇಂದ್ರದಿಂದ ಬೇರೆ ಸ್ಥಳಗಳಿಗೆ ತಲುಪುತ್ತವೆ. ಈ ವಾರ ಪೂರೈಕೆ ಪ್ರಮಾಣ ದುಪ್ಪಟ್ಟಾಗಿದೆ. ಈ ಪ್ರೇಮಿಗಳ ದಿನಕ್ಕೆ ಸುಮಾರು 6 ಲಕ್ಷ ಗುಲಾಬಿ ಪೂರೈಕೆಯಾಗಬಹುದು' ಎಂದು ಐಎಫ್‌ಎಬಿ ವ್ಯವಸ್ಥಾಪಕ ನಿರ್ದೇಶಕ ಎಂ.ವಿಶ್ವನಾಥ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಪಾಲಿಹೌಸ್‌ಗಳಲ್ಲಿ (ಹಸಿರುಮನೆ) ಬೆಳೆಯಲಾಗುವ ಗುಲಾಬಿಗಳ ಪೂರೈಕೆಗೆ ಕೇಂದ್ರ ವೇದಿಕೆಯಾಗಿದೆ. ಕಳೆದ ವರ್ಷದ ಪ್ರೇಮಿಗಳ ದಿನದ ಸಮಯದಲ್ಲಿ ಕೆಂಗುಲಾಬಿಯೊಂದರ ದರ ಗರಿಷ್ಠ ₹33ರಂತೆ ಹರಾಜಿನಲ್ಲಿ ಮಾರಾಟವಾಗಿತ್ತು. ಈ ಪ್ರೇಮಿಗಳ ದಿನಕ್ಕೆ ಗುಲಾಬಿಯೊಂದರ ದರ ಗರಿಷ್ಠ ₹40ಕ್ಕೆ ಏರುವ ನಿರೀಕ್ಷೆ ಇದೆ' ಎಂದರು.

**ವಾರದವರೆಗೆ ತಾಜಾತನ:** 'ವಿಶೇಷ ಗುಣವುಳ್ಳ ಈ ಗುಲಾಬಿಗಳು ಕಟಾವು ಆದ ಬಳಿಕ ಗರಿಷ್ಠ 7 ದಿನ ಇಡಬಹುದು. ಹೂವಿನ ಕಾಂಡವನ್ನು ನಿತ್ಯ ಒಂದು ಸೆಂ.ಮೀ ಕಟಾವು ಮಾಡಿ ನೀರಿನಲ್ಲೇ ಇಡುವುದರಿಂದ ಒಂದು ವಾರ ತಾಜಾತನದಿಂದ ಕೂಡಿರುತ್ತದೆ. ಹರಾಜು ಪ್ರಕ್ರಿಯೆ ನಂತರ ಬೇರೆ ಸ್ಥಳಗಳಿಗೆ ಪೂರೈಸಲಾಗುತ್ತದೆ. ಈ ಪ್ರಕ್ರಿಯೆಯು ಪೂರ್ಣಗೊಳ್ಳುವವರೆಗೆ ಗುಲಾಬಿಗಳನ್ನು ತಾಜಾ ಸ್ಥಿತಿಯಲ್ಲಿಡುವ ಶೀತಲೀಕರಣ ವ್ಯವಸ್ಥೆ ಕೇಂದ್ರದಲ್ಲಿದೆ' ಎಂದು ಐಎಫ್‌ಎಬಿ ಸಿಬ್ಬಂದಿ ವಿವರಿಸಿದರು.

## 'ಕಾರ್ಗೋ ದರ ಹೆಚ್ಚಳದಿಂದ ರಫ್ತು ಕುಸಿತ'

'ಪ್ರೇಮಿಗಳ ದಿನಕ್ಕೆ ಕರ್ನಾಟಕದಿಂದ ಸುಮಾರು 50 ಲಕ್ಷ ಗುಲಾಬಿ ರಫ್ತಾಗುತ್ತಿತ್ತು. ಆದರೆ, ಕಳೆದ ವರ್ಷ ವಿಮಾನದಲ್ಲಿ ಸಾಗಣೆ ದರ ಶೇ 40ರಷ್ಟು ಏರಿದೆ. ಗುಲಾಬಿ ಖರೀದಿಗೆ ವಿದೇಶಿ ಖರೀದಿ ದಾರರು ಮುಂದೆ ಬರುತ್ತಿಲ್ಲ. ಇದು, ರಾಜ್ಯದ ಗುಲಾಬಿ ಬೆಳೆಗಾರರಿಗೆ ನುಂಗಲಾರದ ತುಪ್ಪವಾಗಿದೆ' ಎಂದು ದಕ್ಷಿಣ ಭಾರತ ಹೂವು ಬೆಳೆಗಾರರ ಸಂಘದ ಅಧ್ಯಕ್ಷ ಟಿ.ಎಂ. ಅರವಿಂದ್ ವಿವರಿಸಿದರು.

'ಆನೇಕಲ್, ದೊಡ್ಡಬಳ್ಳಾಪುರ, ನೆಲಮಂಗಲ, ಹೊಸಕೋಟೆ, ಚಿಕ್ಕಬಳ್ಳಾಪುರ ಸೇರಿದಂತೆ ಬೆಂಗಳೂರು ಹೊರವಲಯಗಳಲ್ಲಿ ಬೆಳೆಯುವ ಗುಲಾಬಿಯನ್ನು ಸಿಂಗಪುರ, ಮಲೇಷಿಯ, ಜಪಾನ್ ಹಾಗೂ ಯೂರೋಪ್‌ನ ರಾಷ್ಟ್ರಗಳು ಹೆಚ್ಚಾಗಿ ಆಮದು ಮಾಡಿಕೊಳ್ಳುತ್ತಿದ್ದವು. ಶುಭ ಸಮಾರಂಭಗಳು ಆರಂಭವಾಗಿರುವ ಕಾರಣ ಹೊರ ರಾಜ್ಯಗಳು ಮತ್ತು ಸ್ಥಳೀಯ ಮಾರುಕಟ್ಟೆಗಳಲ್ಲಿ ಗುಲಾಬಿ ಮಾರಾಟ ಸುಗಮವಾಗಿದೆ' ಎಂದರು.

### ಬೇಡಿಕೆ ಇರುವ ಗುಲಾಬಿಗಳು

- ತಾಜ್‌ಮಹಲ್
- ಹಾಟ್‌ಶಾಟ್
- ಕಾರ್ವೆಟ್
- ರಾಕ್‌ಸ್ಟಾರ್
- ಬ್ರಿಲಿಯಂಟ್
- ಫರ್ಸ್ಟ್ ರೆಡ್
- ಗ್ರ್ಯಾಂಡ್‌ಗಲಾ

## ಪುಷ್ಪ ಕೃಷಿಗೆ ಮತ್ತೆ ಹೆಚ್ಚಿದ ಒಲವು

'ಗುಲಾಬಿ ಬೆಳೆಗಾರರು ಕೋವಿಡ್ ಪರಿಸ್ಥಿತಿಯಲ್ಲಿ ನಷ್ಟ ಎದುರಿಸಿದ್ದರಿಂದ ಪಾಲಿಹೌಸ್‌ಗಳಲ್ಲಿದ್ದ ಹೂವಿನಗಿಡಗಳನ್ನು ಬುಡಮೇಲು ಮಾಡಿದ್ದರು. ಮಾರುಕಟ್ಟೆ ಲಭ್ಯತೆ ದೃಷ್ಟಿಯಿಂದ ತರಕಾರಿ ಕೃಷಿಗೆ ಕೈಹಾಕಿದ್ದರು. ಈಗ ಗುಲಾಬಿ ಮಾರುಕಟ್ಟೆ ಸಹಜ ಸ್ಥಿತಿಗೆ ಬಂದಿರುವ ಕಾರಣ ಮತ್ತೆ ಗುಲಾಬಿ ಬೆಳೆಯಲು ಒಲವು ತೋರಿದ್ದಾರೆ' ಎಂದು ಎಂ.ವಿಶ್ವನಾಥ್ ಹೇಳಿದರು.

### ಅಂಕಿ-ಅಂಶಗಳು

**₹30** 'ತಾಜ್‌ಮಹಲ್' ಗುಲಾಬಿಯೊಂದರ ದರ (ಮಂಗಳವಾರ)

**283** ಎಎಫ್‌ಎಬಿ ನೋಂದಾಯಿತ ಹೂವು ಬೆಳೆಗಾರರು

**4 ಲಕ್ಷ** ಐಎಫ್‌ಎಬಿಯಿಂದ ಪೂರೈಕೆಯಾಗುತ್ತಿರುವ ಗುಲಾಬಿ (ದಿನಕ್ಕೆ)



ಕರ್ನಾಟಕ ಕ್ಷತ್ರಿಯ ಮರಾಠ ಮಹಾ ಒಕ್ಕೂಟದ ಅಧ್ಯಕ್ಷ ಶ್ಯಾಮ್‌ಸುಂದರ್ ಗಾಯಕವಾಡ್ ಮಾತನಾಡಿದರು. ಒಕ್ಕೂಟದ ಉಪಾಧ್ಯಕ್ಷ ಭಾಹೂಸಾಹೇಬ್, ಚಿಕ್ಕೋಡಿ ಜಿಲ್ಲಾ ಘಟಕದ ಅಧ್ಯಕ್ಷ ವಿನಾಯಕ ದೇಸಾಯಿ, ಗದಗ ಜಿಲ್ಲಾ ಘಟಕದ ಅಧ್ಯಕ್ಷ ವಿನಿತಾ ಕುಮಾರ್, ವಿಜಯಪುರ ಜಿಲ್ಲಾ ಘಟಕದ ಅಧ್ಯಕ್ಷ ರಾಹುಲ್ ಜಾಧವ್ ಇದ್ದರು.

## ಮರಾಠರಿಂದ 19ರಂದು 'ಬೆಂಗಳೂರು ಚಲೋ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮರಾಠ ಸಮಾಜವನ್ನು '3ಬಿ'ಯಿಂದ '2ಎ'ಗೆ ಸೇರ್ಪಡೆ ಮಾಡುವಂತೆ ಆಗ್ರಹಪಡಿಸಿ ಇದೇ 19ರಂದು 'ಬೆಂಗಳೂರು ಚಲೋ' ಹಮ್ಮಿಕೊಂಡಿದ್ದೇವೆ' ಎಂದು ಕರ್ನಾಟಕ ಕ್ಷತ್ರಿಯ ಮರಾಠ ಮಹಾ ಒಕ್ಕೂಟ ತಿಳಿಸಿದೆ.

'ಯಡಿಯೂರಪ್ಪನವರು ಸಿ.ಎಂ ಆಗಿದ್ದಾಗ ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದರು. ಬಳಿಕ ಮರೆತರು. ಬಸವರಾಜ ಬೊಮ್ಮಾಯಿ ಅವರೂ ಸಮುದಾಯದ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ' ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಶ್ಯಾಮ್‌ಸುಂದರ್ ಗಾಯಕವಾಡ್ ಅವರು ಹೇಳಿದರು.

'ರಾಜ್ಯದಲ್ಲಿ ಸುಮಾರು 50 ಲಕ್ಷ ಜನಸಂಖ್ಯೆ ಹೊಂದಿರುವ ಮರಾಠ ಸಮುದಾಯದವರಿಗೆ ಬಿಜೆಪಿ ಸರ್ಕಾರದಲ್ಲಿ ಅನ್ಯಾಯವಾಗಿದೆ. ಇದನ್ನು ಸರಿಪಡಿಸಲು ಶ್ರೀಮಂತ ಪಾಟೀಲ್ ಅವರಿಗೆ ಸಚಿವ ಸ್ಥಾನ ಕೊಡಬೇಕು. ಮರಾಠ ನಿಗಮಕ್ಕೆ ಕೂಡಲೇ ಅಧ್ಯಕ್ಷ ಹಾಗೂ ನಿರ್ದೇಶಕರನ್ನು ನೇಮಿಸಬೇಕು' ಎಂದು ಅವರು ಮನವಿ ಮಾಡಿದರು.

'ಈ ತಿಂಗಳ ಅಂತ್ಯದೊಳಗೆ ಮರಾಠ ಸಮುದಾಯದವರಿಗೆ ಸೂಕ್ತ ಪ್ರಾತಿನಿಧ್ಯ ನೀಡಬೇಕು. ಇಲ್ಲದಿದ್ದರೆ ಮುಂದೆ ಬಿಜೆಪಿ ವಿರುದ್ಧ ಮತ ಚಲಾಯಿಸುತ್ತೇವೆ. ಬಿಜೆಪಿ ಸದಸ್ಯತ್ವಕ್ಕೆ ಸಾಮೂಹಿಕ ರಾಜೀನಾಮೆ ನೀಡುತ್ತೇವೆ' ಎಂದೂ ಅವರು ಎಚ್ಚರಿಸಿದರು.

'ಕನ್ನಡನಾಡಿನ ವೀರ ಸೇನಾನಿಗಳಿಗೆ ಅವಮಾನ ಮಾಡಿರುವ ಎಂಇಎಸ್ ಹಾಗೂ ಶಿವಸೇನಾ ಕಾರ್ಯಕರ್ತರ ವಿರುದ್ಧ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

### 'ಉತ್ತರ ಪ್ರದೇಶವಾಗಿ ಮಾಡುವ ಕುಟಿಲ ತಂತ್ರ'

**ಬೆಂಗಳೂರು:** 'ರಾಜ್ಯ ಶಾಲಾ ಕಾಲೇಜುಗಳಲ್ಲಿ ಭುಗಿಲೆದ್ದಿರುವ ವಿವಾದ ಕರ್ನಾಟಕವನ್ನು ಉತ್ತರ ಪ್ರದೇಶವನ್ನಾಗಿಸುವ ಕುಟಿಲ ತಂತ್ರ ಹೊಂದಿದ್ದು, ರಾಜ್ಯದ ಜನ ವಿಫಲಗೊಳಿಸಬೇಕು' ಎಂದು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣಗೌಡ ತಿಳಿಸಿದ್ದಾರೆ. 'ಉಡುಪಿಯ ಒಂದು ಕಾಲೇಜಿನಲ್ಲಿ ಆರಂಭಗೊಂಡ ಸಮಸ್ಯೆ ರಾಜ್ಯಕ್ಕೆ ವ್ಯಾಪಿಸಲು ಕಾರಣವೇನು? ಇದರ ಹಿಂದಿರುವ ಸಂಘಟನೆಗಳು ಯಾವುವು? ಅದಕ್ಕೆ ಸರ್ಕಾರದ ಬೆಂಬಲವಿದೆಯೇ' ಎಂದು ಪ್ರಶ್ನಿಸಿದ್ದಾರೆ.



ಕರ್ನಾಟಕ ಮಹಿಳಾ ಯಕ್ಷಗಾನ ಸಂಸ್ಥೆಯು ನಯನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕಲಾವಿದರು 'ಭಕ್ತ ಸುಧನ್ವ' ಯಕ್ಷಗಾನ ಪ್ರದರ್ಶಿಸಿದರು

ರಾಜ್ಯ ಸರ್ಕಾರಕ್ಕೆ ಫನಾ ಮನವಿ • ಬಳಕೆಯಾಗದ ಶೇ 50ರಷ್ಟು ಹಾಸಿಗೆಗಳು

# 'ಕೋವಿಡೇತರ ಚಿಕಿತ್ಸೆಗೆ 'ಮೀಸಲು' ಹಾಸಿಗೆ ಬಳಕೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರಿ ವ್ಯವಸ್ಥೆಯಡಿ ಮೀಸಲಿರಿಸಿರುವ 5000ಕ್ಕೂ ಅಧಿಕ ಹಾಸಿಗೆಗಳು ಖಾಲಿ ಉಳಿದಿದ್ದು, ಅವನ್ನು ಕೋವಿಡೇತರ ಚಿಕಿತ್ಸೆಗೆ ಬಳಸಲು ಅನುಮತಿ ನೀಡಿ' ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿದೆ.

'ನಗರದಲ್ಲಿ ಕೋವಿಡ್ ಪ್ರಕರಣಗಳು ಇಳಿಮುಖವಾಗಿವೆ. ಕೋವಿಡ್ ಪೀಡಿತರ ಆಸ್ಪತ್ರೆ ದಾಖಲಾತಿ ಕುಗ್ಗಿದೆ. ಸರ್ಕಾರಿ ಕೋಟಾದಡಿ ಚಿಕಿತ್ಸೆಗೆ ಮೀಸಲಿಟ್ಟಿದ್ದ ಶೇ 50ರಷ್ಟು ಹಾಸಿಗೆಗಳು ಖಾಲಿ ಇವೆ. ಅವುಗಳಿಂದ ಆದಾಯ ಬರುತ್ತಿಲ್ಲ. ಅವುಗಳ ನಿರ್ವಹಣೆಗೆ ಹಣ ವ್ಯಯಿಸುವಂತಾಗಿದೆ. ಈಗ ಕೋವಿಡೇತರ ರೋಗಿಗಳ ದಾಖಲಾತಿ ಹೆಚ್ಚುತ್ತಿದ್ದು, ಖಾಲಿ ಹಾಸಿಗೆಗಳನ್ನು ಚಿಕಿತ್ಸೆಗೆ ಬಳಸಲು ಅನುಮತಿ ನೀಡಿದರೆ ಹೆಚ್ಚು ಅನುಕೂಲವಾಗಲಿದೆ' ಎಂದೂ ಮನವಿ ಮಾಡಿದೆ.

'ಒಂದೊಮ್ಮೆ ಕೋವಿಡ್ ಪ್ರಕರಣಗಳು ಹೆಚ್ಚಳವಾಗಿ ಆಸ್ಪತ್ರೆ ದಾಖಲಾತಿ ಏರಿದರೆ ಸರ್ಕಾರ ಸೂಚಿಸಿದ 5-7 ದಿನಗಳೊಳಗೆ ಶೇ 50ರಷ್ಟು ಹಾಸಿಗೆಗಳನ್ನು ಬಿಟ್ಟುಕೊಡಲಾಗುತ್ತದೆ' ಎಂದು ತಿಳಿಸಿದೆ.

## ಸೋಂಕಿತರ ಸಂಖ್ಯೆ ಇಳಿಕೆ

**ಬೆಂಗಳೂರು:** ರಾಜ್ಯದಲ್ಲಿ ಕೋವಿಡ್ ಸೋಂಕಿತರ ಹೊಸ ಪ್ರಕರಣಗಳು ಇಳಿಮುಖವಾಗಿದ್ದು, ಮೃತರ ಸಂಖ್ಯೆ ಹೆಚ್ಚಿದೆ.

ಒಂದು ದಿನದಲ್ಲಿ 4,452 ಜನರಿಗೆ ಸೋಂಕು ತಗುಲಿರುವುದು ಖಾತರಿಯಾಗಿದೆ. ಈವರೆಗೆ 39.06 ಲಕ್ಷ ಮಂದಿ ಸೋಂಕಿತರಾಗಿದ್ದಾರೆ. ಸೋಂಕು ದೃಢ ಪ್ರಮಾಣ ಶೇ 5.01ಕ್ಕೆ ತಗ್ಗಿದೆ.

24 ಗಂಟೆಗಳಲ್ಲಿ 51 ಮಂದಿ ಅಸುನೀಗಿದ್ದಾರೆ. ಕೋವಿಡ್‌ನಿಂದ ರಾಜ್ಯದಲ್ಲಿ ಮೃತರ ಸಂಖ್ಯೆ 39,447ಕ್ಕೆ ಏರಿದೆ. ಮರಣ ಪ್ರಮಾಣ ದರವು ಶೇ 1.14ರಷ್ಟಿದೆ.

ಮಂಗಳವಾರ 19,067 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ 37.94 ಲಕ್ಷ ಮಂದಿ ಗುಣಮುಖರಾದಂತಾಗಿದೆ. ಸದ್ಯ 72,414 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಒಂದು ದಿನದಲ್ಲಿ 88,797 ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ಬೆಂಗಳೂರು ಬಿಟ್ಟು ಉಳಿದ ಜಿಲ್ಲೆಗಳಲ್ಲಿ ಸೋಂಕು ಪ್ರಮಾಣ ಗಣನೀಯವಾಗಿ ಇಳಿದಿದೆ. ಏಳು ಜಿಲ್ಲೆಗಳಲ್ಲಿ ಇದು ಮೂರಂಕಿಯಷ್ಟಿದ್ದು, 22 ಜಿಲ್ಲೆಗಳಲ್ಲಿ ಎರಡಂಕಿಗೆ ಇಳಿದಿದೆ. ಬೆಂಗಳೂರಿನಲ್ಲಿ 17 ಮಂದಿ ಮೃತಪಟ್ಟಿದ್ದಾರೆ.

**ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ-ಅಂಶ**


**17,62,315** ಒಟ್ಟು ಪ್ರಕರಣಗಳು ▲ (17,60,176 ನಿನ್ನೆಯ ವಿವರ)

| 29,149 ▼ | 17,16,457 ▲ | 16,708 ▲ |
|---|---|---|
| ಸಕ್ರಿಯ ಪ್ರಕರಣ | ಗುಣಮುಖ ಆದವರು | ಒಟ್ಟು ಸಾವು |

ದಿನದ ಏರಿಕೆ

| | |
|---|---|
| ಹೊಸ ಪ್ರಕರಣ | 2,139 ▼ |
| ಗುಣಮುಖ | 8,604 ▲ |
| ಸಾವು | 17 ▲ |

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್




## ಸಂಕ್ಷಿಪ್ತ ಸುದ್ದಿ

### ದೇವದಾಸಿಯರ ಅಭಿವೃದ್ಧಿ ನಿಗಮ ಸ್ಥಾಪನೆಗೆ ಆಗ್ರಹ

**ಬೆಂಗಳೂರು:** 'ದೇವದಾಸಿ ತಾಯಂದಿರು ಮತ್ತು ಮಕ್ಕಳ ಅಭಿವೃದ್ಧಿಗೆ ಸರ್ಕಾರ ಪ್ರತ್ಯೇಕ ನಿಗಮ ಸ್ಥಾಪಿಸಬೇಕು ಹಾಗೂ ಬಜೆಟ್‌ನಲ್ಲಿ ಅನುದಾನ ಘೋಷಿಸಬೇಕು' ಎಂದು ವಿಮುಕ್ತ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆ ಆಗ್ರಹಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಸದಸ್ಯೆ ಮಂಜುಳಾ, 'ದೇವದಾಸಿಯರು ಮತ್ತು ಅವರ ಮಕ್ಕಳ ಬದುಕು ದುಸ್ತರವಾಗಿದೆ. ದೇವದಾಸಿ ತಾಯಂದಿರಿಗೆ ನೀಡುತ್ತಿರುವ ಮಾಸಾಶನ ಸಕಾಲಕ್ಕೆ ತಲುಪುತ್ತಿಲ್ಲ. ಅಲ್ಲದೆ, ಮಾಸಾಶನ ಮೊತ್ತವನ್ನು ₹5 ಸಾವಿರಕ್ಕೆ ಹೆಚ್ಚಿಸಬೇಕು' ಎಂದು ಆಗ್ರಹಿಸಿದರು.

'ದೇವದಾಸಿ ಸಮುದಾಯದ ಮಕ್ಕಳಿಗೆ ಶಿಕ್ಷಣದಲ್ಲಿ ಮೀಸಲಾತಿ ಹಾಗೂ ವಿದ್ಯಾರ್ಥಿವೇತನ ನೀಡಬೇಕು. ವಸತಿರಹಿತರಿಗೆ ಸೂರು ಕಲ್ಪಿಸಬೇಕು. ಸ್ವಉದ್ಯೋಗಕ್ಕಾಗಿ ₹10 ಲಕ್ಷ ನೆರವು ಒದಗಿಸಬೇಕು. ರಾಜ್ಯದಲ್ಲಿ ದೇವದಾಸಿ ಪದ್ಧತಿ ನಿಷೇಧ ಮತ್ತು ಪುನರ್ವಸತಿ ಕಾಯ್ದೆಯನ್ನು ಜಾರಿ ಮಾಡಬೇಕು' ಎಂದು ಮನವಿ ಮಾಡಿದರು.

ವೇದಿಕೆಯ ಸದಸ್ಯ ಬಸವರಾಜು, 'ತಂದೆಯ ಹೆಸರು ಇಲ್ಲದಿರುವುದರಿಂದ ದೇವದಾಸಿಯರ ಮಕ್ಕಳು ಅನೇಕ ಸಮಸ್ಯೆ ಎದುರಿಸುತ್ತಿದ್ದಾರೆ. ಅವರ ಶಿಕ್ಷಣ ಮತ್ತು ಉದ್ಯೋಗ ಸಂಬಂಧಿತ ಸೂಕ್ಷ್ಮತೆಗಳನ್ನು ಅರ್ಥ ಮಾಡಿಕೊಂಡು ಪ್ರಮಾಣಪತ್ರಗಳನ್ನು ನೀಡಲು ಕ್ರಮ ಕೈಗೊಳ್ಳಬೇಕು' ಎಂದೂ ಕೋರಿದರು.

### ತುಮಕೂರು ರಸ್ತೆ: ಸುಂಕ ಸಂಗ್ರಹಿಸದಂತೆ ಒತ್ತಾಯ

**ಬೆಂಗಳೂರು:** ತುಮಕೂರು ರಸ್ತೆ ಮೇಲ್ಸೇತುವೆಯ ಮೇಲೆ ವಾಹನಗಳ ಸಂಚಾರಕ್ಕೆ 45 ದಿನದಿಂದ ಅವಕಾಶ ಇಲ್ಲದಿದ್ದರೂ, ಟೋಲ್ (ಸುಂಕ) ಸಂಗ್ರಹ ಮಾಡುತ್ತಿರುವುದು ಅಕ್ರಮ ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷ ಆರೋಪಿಸಿದೆ.

ಮೇಲ್ಸೇತುವೆ ದುರಸ್ತಿಪಡಿಸುವಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ವಿಫಲವಾಗಿದೆ. ಸಂಚಾರ ದಟ್ಟಣೆಗಳ ನಡುವೆ ಸಿಗ್ನಲ್‌ಗಳಲ್ಲಿ ಕಾದು ವಾಹನಗಳನ್ನು ಚಲಾಯಿಸಬೇಕಾದ ಸ್ಥಿತಿ ಇದೆ.

'ನಾಗಸಂದ್ರದ ಬಳಿ ಪೂರ್ಣ ಪ್ರಮಾಣದ ಸುಂಕ ಪಾವತಿಸಬೇಕಾಗಿದೆ. ಸುಂಕ ಪಾವತಿಸಿದರೂ ಒಳ್ಳೆಯ ರಸ್ತೆ ಇಲ್ಲ. ಮೇಲ್ಸೇತುವೆಯಲ್ಲಿ ಸಂಚಾರಕ್ಕೆ ಅವಕಾಶ ನೀಡದೆ ಸುಂಕ ಸಂಗ್ರಹಿಸುತ್ತಿರುವುದು ಸರಿಯಲ್ಲ' ಎಂದು ಸಂಘಟನೆ ಹೇಳಿದೆ.

'ನಗದು ರೂಪದಲ್ಲಿ ಸಂಗ್ರಹವಾಗಿದ್ದರೆ ಅದನ್ನು ಸ್ಥಳೀಯ ಸಂಸ್ಥೆಗೆ ಒಪ್ಪಿಸಬೇಕು. ಮೇಲ್ಸೇತುವೆ ಸರಿಪಡಿಸುವ ತನಕ ಸುಂಕ ಸಂಗ್ರಹ ಮಾಡುವುದನ್ನು ನಿಲ್ಲಿಸಬೇಕು' ಎಂದು ಕೆಆರ್‌ಎಸ್ ರಾಜ್ಯ ಕಾರ್ಯದರ್ಶಿ ರಘು ಜಾಣಗೆರೆ ಮತ್ತು ಜಂಟಿ ಕಾರ್ಯದರ್ಶಿ ಯು.ಬಿ. ವಿಜಯಕುಮಾರ್ ಒತ್ತಾಯಿಸಿದ್ದಾರೆ.

# ನಕಲಿ ದಾಖಲೆ ನೀಡಿ ₹ 3 ಕೋಟಿ ಕ್ಲೇಮ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಮೆ ಕಂಪನಿಯೊಂದಕ್ಕೆ ನಕಲಿ ದಾಖಲೆಗಳನ್ನು ಕೊಟ್ಟು ₹ 3 ಕೋಟಿ ಕ್ಲೇಮ್ ಮಾಡಿಕೊಂಡಿರುವ ಆರೋಪದಡಿ ಸುಪ್ರಿಯಾ ಲಕಾಕುಲ್ ಎಂಬುವರ ವಿರುದ್ಧ ಕೋರಮಂಗಲ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಟಾಟಾ ಎಐಎ ಲೈಫ್ ಇನ್ಸೂರೆನ್ಸ್ ಕಂಪನಿ ವ್ಯವಸ್ಥಾಪಕ ಪಿ.ಬಿ. ಗಣಪತಿ ಅವರು ದೂರು ನೀಡಿದ್ದಾರೆ. ನಕಲಿ ದಾಖಲೆ ಸೃಷ್ಟಿ, ವಂಚನೆ ಆರೋಪದಡಿ ಸುಪ್ರಿಯಾ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸುಪ್ರಿಯಾ ಅವರ ಪತಿ ಕೃಷ್ಣಪ್ರಸಾದ್, ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. 2021ರ ಮಾರ್ಚ್‌ನಲ್ಲಿ ಟಾಟಾ ಎಐಎ ಲೈಫ್ ಇನ್ಸೂರೆನ್ಸ್ ಕಂಪನಿಯಲ್ಲಿ 'ಮಹಾರಕ್ಷಾ ಸುಪ್ರಿಂ' ವಿಮೆ ಮಾಡಿಸಿದ್ದರು. ವರ್ಷದ ಕಂತು ₹ 51,777 ಪಾವತಿಸಿದ್ದರು. ಕೆಲ ತಿಂಗಳ ನಂತರ ಅನಾರೋಗ್ಯದಿಂದ ಮೃತಪಟ್ಟಿದ್ದರು'.

'2021ರ ಜುಲೈ 19ರಂದು ವಿಮೆ ಕಂಪನಿ ಕಚೇರಿಗೆ ಬಂದಿದ್ದ ಸುಪ್ರಿಯಾ, 'ಪತಿ ಕೃಷ್ಣಪ್ರಸಾದ್ ಹೃದಯಾಘಾತದಿಂದ ನಿಧನರಾಗಿದ್ದಾರೆ. ವಿಮೆಗೆ ನನ್ನ ನಾಮನಿರ್ದೇಶನವಿದೆ. ವಿಮೆ ಕ್ಲೇಮ್ ಮಾಡಿಕೊಡಿ' ಎಂದಿದ್ದರು. ಪೂರಕ ದಾಖಲೆಗಳನ್ನೂ ನೀಡಿದ್ದರು. ಆ ಪ್ರಕಾ, ಡಿಸೆಂಬರ್ 16ರಂದು ₹ 3 ಕೋಟಿ ಹಣವನ್ನು ಕಂಪನಿಯಿಂದ ನೀಡಲಾಗಿತ್ತು.'

'ಕೆಲದಿನದ ನಂತರ ಕಂಪನಿ ಸಂಪರ್ಕಿಸಿದ್ದ ವ್ಯಕ್ತಿಯೊಬ್ಬರು, 'ಕೃಷ್ಣಪ್ರಸಾದ್ ಅವರು ಕ್ಯಾನ್ಸರ್‌ನಿಂದ ತೀರಿಕೊಂಡಿದ್ದಾರೆ. ಅವರ ಪತ್ನಿ ನಕಲಿ ದಾಖಲೆ ಕೊಟ್ಟು, ಹಣ ಕ್ಲೇಮ್ ಮಾಡಿಕೊಂಡಿದ್ದಾರೆ' ಎಂದಿದ್ದರು. ಅದೇ ಮಾಹಿತಿ ಆಧರಿಸಿ ಕಂಪನಿ ಅಧಿಕಾರಿಗಳು, ತನಿಖೆ ನಡೆಸಿದಾಗಲೇ ಮಹಿಳೆ ಕೃತ್ಯ ಬಯಲಾಗಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

### ಪ್ರೇಮಿಗಳ ದಿನದಂದು ವಂಡರ್‌ಲಾ ಕೊಡುಗೆ

**ಬೆಂಗಳೂರು:** ಪ್ರೇಮಿಗಳ ದಿನದ ಪ್ರಯುಕ್ತ ಫೆ.14ರಂದು ವಂಡರ್‌ಲಾದಲ್ಲಿ ಪ್ರೇಮಿಗಳು ಮತ್ತು ದಂಪತಿಗೆ ವಂಡರ್‌ಲಾ ಪಾರ್ಕ್ ಪ್ರವೇಶ ಹಾಗೂ ವೇವ್‌ಪೂಲ್ ರೊಮ್ಯಾಂಟಿಕ್ ಡಿನ್ನರ್ ಮೇಲೆ ವಿಶೇಷ ಕೊಡುಗೆ ನೀಡಲಾಗಿದೆ.

ವಂಡರ್‌ಲಾ ರೆಸಾರ್ಟ್‌ನಲ್ಲಿ ರೊಮ್ಯಾಂಟಿಕ್ ಡಿನ್ನರ್ ಮೇಲೂ ವಿಶೇಷ ಕೊಡುಗೆ ಇರಲಿದೆ. ಅಂದು ಪ್ರೇಮಿಗಳಿಗಾಗಿ ಆವರಣವನ್ನು ವಿಶೇಷವಾಗಿ ಅಲಂಕರಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ವಂಡರ್‌ಲಾ ವೆಬ್‌ಸೈಟ್ www.wonderla.comಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಚಾಮರಾಜನಗರ ಜಿಲ್ಲೆಯ ಬಿಆರ್‌ಟಿ ವ್ಯಾಪ್ತಿಯಲ್ಲಿ ಹಾದುಹೋಗುವ ಎರಡು ರಸ್ತೆಗಳು

# ದಿಂಬಂ: ರಾತ್ರಿ ಸಂಚಾರ ನಿಷೇಧ, ಜಿಲ್ಲೆಯಲ್ಲೂ ಜಾರಿ?

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- 2019ರ ಆದೇಶ ಪಾಲನೆಗೆ ಕೋರ್ಟ್ ಸೂಚನೆ
- ಭಾರಿ ವಾಹನಗಳಿಗೆ ಸಂಜೆ 6ರಿಂದ ಬೆ.6ರವರೆಗೆ ನಿಷೇಧ
- ಲಘುವಾಹನಗಳಿಗೆ ರಾತ್ರಿ 9ರಿಂದ ಬೆಳಿಗ್ಗೆ 6ರವರೆಗೆ ನಿರ್ಬಂಧ

**ಚಾಮರಾಜನಗರ:** ಜಿಲ್ಲೆಯ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡಿರುವ ತಮಿಳುನಾಡಿನ ಸತ್ಯಮಂಗಲ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದುಹೋಗಿರುವ ಬೆಂಗಳೂರು–ಕೊಯಮತ್ತೂರು ರಾಷ್ಟ್ರೀಯ ಹೆದ್ದಾರಿಯ 948ರ ಹಾಸನೂರು–ಬಣ್ಣಾರಿ ಚೆಕ್‌ಪೋಸ್ಟ್ (ದಿಂಬಂ ಘಾಟಿ) ನಡುವೆ ಗುರುವಾರದಿಂದ (ಫೆ.10) ರಾತ್ರಿ ವಾಹನಗಳ ಸಂಚಾರ ನಿಷೇಧಿಸುವಂತೆ ಮದ್ರಾಸ್ ಹೈಕೋರ್ಟ್ ಅಲ್ಲಿನ ಅರಣ್ಯ ಇಲಾಖೆಗೆ ಮಂಗಳವಾರ ನಿರ್ದೇಶನ ನೀಡಿದೆ.

ದಿಂಬಂ ಘಾಟಿಗೆ ಸಂಪರ್ಕ ಕಲ್ಪಿಸುವ ಎರಡು ಮಾರ್ಗಗಳು ಜಿಲ್ಲೆಯ ಮೂಲಕ ಹಾದು ಹೋಗುತ್ತವೆ. ಚಾಮರಾಜನಗರ ತಾಲ್ಲೂಕಿನಲ್ಲಿ ಹಾದು ಹೋಗುವ 209 ರಾಷ್ಟ್ರೀಯ ಹೆದ್ದಾರಿ ಪುಣಜನೂರು ಮೂಲಕ ತಮಿಳುನಾಡಿನ ಗಡಿ ಸಂಪರ್ಕಿಸುತ್ತದೆ. ಹನೂರು ತಾಲ್ಲೂಕಿನ ಬೈಲೂರಿನ ಮೂಲಕ ಹಾದು ಹೋಗುವ ರಾಜ್ಯ ಹೆದ್ದಾರಿ ಕೂಡ ದಿಂಬಂ ಘಾಟಿಯನ್ನು ಸಂಪರ್ಕಿಸುತ್ತದೆ.

ಚಾಮರಾಜನಗರ ತಾಲ್ಲೂಕಿನ ಸುವರ್ಣಾವತಿ ಜಲಾಶಯದ ಬಳಿಯಿಂದ ಪುಣಜನೂರುವರೆಗಿನ 15 ಕಿ.ಮೀ. ಉದ್ದದ ರಸ್ತೆಯು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಗೆ ಬರುತ್ತದೆ. ಹನೂರು ತಾಲ್ಲೂಕಿನ ಬೈಲೂರಿನಿಂದ ತಮಿಳುನಾಡಿನ ಗೇರುಮಾಳ್ಯಂವರೆಗಿನ 15 ಕಿ.ಮೀ. ಉದ್ದದ ರಸ್ತೆಯೂ ಬಿಆರ್‌ಟಿಗೆ ಸೇರುತ್ತದೆ. ತಮಿಳುನಾಡಿನ ಅರಣ್ಯ ಇಲಾಖೆಯು ಅಲ್ಲಿ ವಾಹನಗಳ ರಾತ್ರಿ ಸಂಚಾರ ನಿಷೇಧಿಸುತ್ತಿರುವುದರಿಂದ ಜಿಲ್ಲೆಯ ಬಿಆರ್‌ಟಿ ವ್ಯಾಪ್ತಿಯಲ್ಲಿ ಬರುವ ರಸ್ತೆಯಲ್ಲೂ ರಾತ್ರಿ ಸಂಚಾರ ನಿಷೇಧಿಸುವ ಸಾಧ್ಯತೆ ಇದೆ.

ತಮಿಳುನಾಡು ಚೆಕ್‌ಪೋಸ್ಟ್‌ನಲ್ಲಿ ರಾತ್ರಿ ವಾಹನಗಳನ್ನು ತಡೆಯುವುದರಿಂದ ಅವುಗಳು ರಾಜ್ಯದ ಗಡಿ ಭಾಗದಲ್ಲಿ ನಿಲ್ಲಬೇಕಾಗುತ್ತದೆ. ಅದರಿಂದಾಗಿ ಪ್ರಾಣಿಗಳ ಓಡಾಟಕ್ಕೆ ತೊಂದರೆಯಾಗಲಿದೆ. ಹಾಗಾಗಿ, ಮದ್ರಾಸ್ ಹೈಕೋರ್ಟ್ ನಿರ್ದೇಶನದ ಆಧಾರದಲ್ಲಿ ರಾಜ್ಯದ ಅರಣ್ಯ ಇಲಾಖೆ ಕೂಡ ಬಿಆರ್‌ಟಿ ವ್ಯಾಪ್ತಿಯಲ್ಲಿ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸುವ ಸಾಧ್ಯತೆ ಹೆಚ್ಚಳವಾಗಿದೆ. ಈ ಸಂಬಂಧ ರಾತ್ರಿ ವಾಹನ ಸಂಚಾರ ನಿಷೇಧಿಸುವಂತೆ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಅಧಿಕಾರಿಗಳು ಜಿಲ್ಲಾಧಿಕಾರಿಗೆ ಮನವಿ ಮಾಡುವುದು ನಿಚ್ಚಳವಾಗಿದೆ ಎಂದು ಮೂಲಗಳು ತಿಳಿಸಿವೆ.

ಈಗಾಗಲೇ, ಬಿಳಿಗಿರಿರಂಗನ ಬೆಟ್ಟಕ್ಕೆ ಅರಣ್ಯದ ಮೂಲಕ ಹಾದು ಹೋಗುವ ರಸ್ತೆಯಲ್ಲಿ ರಾತ್ರಿ ವಾಹನಗಳ ಸಂಚಾರಕ್ಕೆ ನಿರ್ಬಂಧವಿದೆ. ಸ್ಥಳೀಯರಿಗೆ ಮಾತ್ರ ಅವಕಾಶ ನೀಡಲಾಗುತ್ತಿದೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಜಿ. ಸಂತೋಷ್‌ಕುಮಾರ್, 'ಮದ್ರಾಸ್ ಹೈಕೋರ್ಟ್ ನಿರ್ದೇಶನದ ಪ್ರತಿ ಇನ್ನೂ ಬಂದಿಲ್ಲ. ಅವರು ರಾತ್ರಿ ಸಂಚಾರ ನಿಷೇಧ ಮಾಡಿದರೆ, ನಮ್ಮ ಗಡಿಯಲ್ಲಿ ವಾಹನಗಳು ನಿಲ್ಲುವುದು ನಿಜ. ಅದರಿಂದ ಪ್ರಾಣಿಗಳಿಗೆ ತೊಂದರೆಯಾಗಲಿದೆ. ನಮ್ಮ ಭಾಗದಲ್ಲಿ ಸಂಚಾರ ನಿಷೇಧ ಮಾಡುವ ಬಗ್ಗೆ ಜಿಲ್ಲಾಧಿಕಾರಿ ಆದೇಶ ಹೊರಡಿಸಬೇಕು. ಈ ಬಗ್ಗೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು' ಎಂದರು.

ಒಂದು ವೇಳೆ ಜಿಲ್ಲಾಧಿಕಾರಿ ಆದೇಶ ಹೊರಡಿಸಿದರೆ, ಅರಣ್ಯ ಪ್ರದೇಶ ಸಿಗುವುದಕ್ಕೂ ಮೊದಲೇ ಅರಣ್ಯ ಇಲಾಖೆ ನಿಗದಿತ ಸಮಯದ ಬಳಿಕ ವಾಹನಗಳನ್ನು ತಡೆಯಲಿದೆ.

## ಮದ್ರಾಸ್ ಹೈಕೋರ್ಟ್ ಹೇಳಿದ್ದೇನು?

ಸತ್ಯಮಂಗಲ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಹಾಸನೂರು ಚೆಕ್‌ಪೋಸ್ಟ್‌ನಿಂದ ಬಣ್ಣಾರಿ ಚೆಕ್ ಪೋಸ್ಟ್ ನಡುವಿನ ಹೆದ್ದಾರಿಯಲ್ಲಿ ಸಂಜೆ 6 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಅತಿ ಭಾರದ ವಾಹನಗಳ ಸಂಚಾರ, ರಾತ್ರಿ 9ರಿಂದ ಬೆಳಿಗ್ಗೆ 6ರವರೆಗೆ ಲಘು ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಈ ರೋಡ್ ಜಿಲ್ಲಾಧಿಕಾರಿ 2019ರಲ್ಲಿ ಹೊರಡಿಸಿರುವ ಆದೇಶವನ್ನು ಗುರುವಾರದಿಂದ (ಫೆ.10) ಜಾರಿಗೆ ತರುವಂತೆ ಮದ್ರಾಸ್ ಹೈಕೋರ್ಟ್ ತಮಿಳುನಾಡಿನ ಅರಣ್ಯ ಇಲಾಖೆಗೆ ಮಂಗಳವಾರ ನಿರ್ದೇಶನ ನೀಡಿ, ಮುಂದಿನ ವಿಚಾರಣೆಯನ್ನು 15ಕ್ಕೆ ಮುಂದೂಡಿದೆ.

ಜಿಲ್ಲಾಧಿಕಾರಿ ಆದೇಶವನ್ನು ಪಾಲಿಸದೇ ಇದ್ದುದರಿಂದ 155 ಪ್ರಾಣಿಗಳು ಪ್ರಾಣ ಕಳೆದುಕೊಂಡಿವೆ ಎಂದು ಎಸ್.ಪಿ.ಚೊಕ್ಕಲಿಂಗಂ ಎಂಬುವವರು ಮದ್ರಾಸ್ ಹೈಕೋರ್ಟ್‌ನ ಮೆಟ್ಟಿಲೇರಿದ್ದರು.

ಹಿಂದೆ ಆದೇಶ ಹೊರಡಿಸಿದ್ದಾಗ ತಮಿಳುನಾಡಿನಲ್ಲಿ ವಿರೋಧ ವ್ಯಕ್ತವಾಗಿತ್ತು. ಈಗಲೂ ಅಲ್ಲಿ ವಿರೋಧ ವ್ಯಕ್ತವಾಗಿದೆ. 10ರಂದು ಪ್ರತಿಭಟಿಸಲು ಸ್ಥಳೀಯರು ನಿರ್ಧರಿಸಿದ್ದಾರೆ. ಜಿಲ್ಲೆಯಲ್ಲೂ ರೈತ ಸಂಘವು ಹೈಕೋರ್ಟ್‌ನ ನಿರ್ದೇಶನ ವಿರೋಧಿಸಿದ್ದು, 10ರಂದು ಪ್ರತಿಭಟಿಸಲು ನಿರ್ಧರಿಸಿದೆ.

ಹೈಕೋರ್ಟ್‌ನ ಸೂಚನೆಯನ್ನು ಜಿಲ್ಲೆಯ ಪರಿಸರವಾದಿಗಳು ಸ್ವಾಗತಿಸಿದ್ದಾರೆ.



ಸತ್ಯಮಂಗಲ ಹುಲಿ ಸಂರಕ್ಷಿತ ಪ್ರದೇಶದ ದಿಂಬಂ ಘಾಟಿಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ

# ಸಂಪುಟ ವಿಸ್ತರಣೆ: ಫಲಿಸದ ನಡ್ಡಾ ಭೇಟಿ ಪ್ರಯತ್ನ

ಪ್ರಜಾವಾಣಿ ವಾರ್ತೆ


**ನವದೆಹಲಿ:** ಸಂಪುಟ ವಿಸ್ತರಣೆ ಅಥವಾ ಪುನರ್‌ ರಚನೆಗೆ ಅನುಮತಿ ಪಡೆಯಲು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರೊಂದಿಗೆ ಚರ್ಚಿಸಬೇಕೆಂಬ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪ್ರಯತ್ನ ಮಂಗಳವಾರ ಯಶಸ್ವಿ ಆಗಲಿಲ್ಲ.

'ನಡ್ಡಾ ಅವರ ಭೇಟಿ ಸಾಧ್ಯವಾಗಲಿಲ್ಲ. ಆದ್ದರಿಂದ ದೂರವಾಣಿ ಮೂಲಕವೇ ಮಾತನಾಡಿ ಈ ಕುರಿತು ಪ್ರಸ್ತಾಪಿಸಿದೆ. ಆದರೆ, ಎರಡು-ಮೂರು ದಿನಗಳ ನಂತರ ಚರ್ಚಿಸುವುದಾಗಿ ಅವರು ತಿಳಿಸಿದ್ದಾರೆ' ಎಂದು ಬೊಮ್ಮಾಯಿ ಸುದ್ದಿಗಾರರಿಗೆ ತಿಳಿಸಿದರು.

ಸಂಸತ್ ಭವನದಲ್ಲಿ ಮಧ್ಯಾಹ್ನ ಅಮಿತ್ ಶಾ ಅವರನ್ನು ಭೇಟಿಯಾದ ಬೊಮ್ಮಾಯಿ ಅವರು ಈ ವಿಷಯ ಪ್ರಸ್ತಾಪಿಸಿದ್ದಾರೆ. ಸಂಪುಟ ವಿಸ್ತರಣೆ ಹಾಗೂ ನಿಗಮ- ಮಂಡಳಿಗಳ ನೇಮಕಕ್ಕೆ ಒತ್ತಡ ಹೆಚ್ಚಿದ್ದು ಕೂಡಲೇ ಅನುಮತಿ ನೀಡಬೇಕು ಎಂದು ಕೋರಿದ್ದಾರೆ. ಆದರೆ, ನಡ್ಡಾ ಅವರೊಂದಿಗೆ ಚರ್ಚಿಸಿಯೇ ನಿರ್ಧಾರ ಕೈಗೊಳ್ಳಬೇಕು ಎಂದು ಸೂಚಿಸಿದ್ದಾಗಿ ಮೂಲಗಳು ಹೇಳಿವೆ.

ಫೆಬ್ರುವರಿ 15ರೊಳಗೆ ಸಂಪುಟ ವಿಸ್ತರಣೆ ಹಾಗೂ ನಿಗಮ-ಮಂಡಳಿಗಳ ನೇಮಕ ಪ್ರಕ್ರಿಯೆ ಅನುಮತಿ ದೊರೆಯುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

## ಸಿದ್ದೇಶ್ವರ ಶ್ರೀ ಚೇತರಿಕೆ, ಪ್ರವಚನ ಆರಂಭ



**ನಿಪ್ಪಾಣಿ (ಬೆಳಗಾವಿ ಜಿಲ್ಲೆ):** ಚಿಕ್ಕೋಡಿ ತಾಲ್ಲೂಕಿನ ಬಸವನಾಳಗಡ್ಡೆಯ ಭಕ್ತರ ತೋಟದ ಮನೆಯಲ್ಲಿ ಈಚೆಗೆ ಆಕಸ್ಮಿಕವಾಗಿ ಬಿದ್ದು ಗಾಯಗೊಂಡಿದ್ದ ವಿಜಯಪುರದ ಜ್ಞಾನಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿ ಅವರಿಗೆ ನೆರೆಯ ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಕನ್ನೇರಿಯಲ್ಲಿರುವ ಸಿದ್ದಗಿರಿ ಮಠದ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ. ಚೇತರಿಸಿಕೊಳ್ಳುತ್ತಿರುವ ಅವರು ಅಲ್ಲಿ ಭಕ್ತರಿಗೆ ಮಂಗಳವಾರ ಒಂದು ತಾಸು ಪ್ರವಚನವನ್ನೂ ನೀಡಿದ್ದಾರೆ.

## ಅಳವಂಡಿ ಮಠ ತೊರೆಯಲು 'ಸಂಬಂಧಿಕರ' ನಿರ್ಧಾರ

ಪ್ರಜಾವಾಣಿ ವಾರ್ತೆ



ಭಕ್ತರ ಭಾವನೆ ಗೌರವಿಸಿ ಪ್ರಕರಣಕ್ಕೆ ಅಂತ್ಯ ಹಾಡಲಾಗಿದೆ. ಮಠದ ಧಾರ್ಮಿಕ ಕಾರ್ಯಕ್ರಮಗಳನ್ನು ಭಕ್ತರ ಇಚ್ಛೆಯಂತೆ ನೆರವೇರಿಸಲು ನಮಗೆ ಸ್ವಾತಂತ್ರ್ಯ ಸಿಗಲಿದೆ.
**ಮರುಳಸಿದ್ಧ ಶಿವಾಚಾರ್ಯ ಸ್ವಾಮೀಜಿ,** ಪೀಠಾಧಿಪತಿ

**ಕೊಪ್ಪಳ:** ತಾಲ್ಲೂಕಿನ ಅಳವಂಡಿ ಗ್ರಾಮದ ಕಟ್ಟಿಮನಿ ಸಂಸ್ಥಾನ ಹಿರೇಮಠದ ಐದು ದಶಕಗಳ ವಿವಾದಕ್ಕೆ ಮಂಗಳವಾರ ತೆರೆ ಬಿದ್ದಿದೆ.

ಉಜ್ಜಯಿನಿ ಪೀಠದ ಶಾಖಾ ಮಠವಾಗಿರುವ ಕಟ್ಟಿಮನಿ ಸಂಸ್ಥಾನ ಹಿರೇಮಠ, ಸುಮಾರು ವರ್ಷಗಳ ಕಾಲ ಇನಾಂದಾರ ಮನೆತನದ ಒಡೆತನದಲ್ಲಿತ್ತು. ಈ ಮಠದವರೇ ಆಗಿದ್ದ ಸ್ವಾತಂತ್ರ್ಯ ಹೋರಾಟಗಾರ ಶಿವಮೂರ್ತಿಸ್ವಾಮಿ ಹಿರೇಮಠ ಇನಾಂದಾರ ಸಂಸದರಾಗಿದ್ದರು. ಪುತ್ರ ವರ್ಗ ಪರಂಪರೆಯ ಈ ಮಠಕ್ಕೆ ಸಂಬಂಧಿಕರಲ್ಲಿಯೇ ಒಬ್ಬರನ್ನು ಪೀಠಾಧಿಪತಿಯನ್ನಾಗಿ ನೇಮಕ ಮಾಡಲಾಗುತ್ತಿತ್ತು.

'ಇನಾಂದಾರ ಮನೆತನದವರ ಹಸ್ತಕ್ಷೇಪ ಹೆಚ್ಚಾಗಿದೆ' ಎಂದು ಗ್ರಾಮಸ್ಥರು ಆರೋಪಿಸುತ್ತಿದ್ದರು. ಅಲ್ಲದೆ ಈ ಹಿಂದಿನ ಸ್ವಾಮೀಜಿಯೊಬ್ಬರು ಮದುವೆಯಾಗಿ ಪೀಠ ತೊರೆದಿದ್ದರು.

'ಸದ್ಭಕ್ತರ ಜಾತ್ರೆ ಇದೆ. ಮಠದ ಸಂಬಂಧಿಗಳ ಹಿಡಿತ ತಪ್ಪಬೇಕು, ತೆರೆ ಎಳೆಯಬೇಕಾದರೆ ಸಂಬಂಧಿಗಳು ಮಠ ತೊರೆಯಬೇಕು' ಎಂದು ಗ್ರಾಮಸ್ಥರು ಅಹೋರಾತ್ರಿ ಧರಣಿ ನಡೆಸಿದರು.


ಮಠದ ನಿರ್ವಹಣೆ ಮಾಡುತ್ತಿರುವ ಗುರುಮೂರ್ತಿಸ್ವಾಮಿ ಇನಾಂದಾರ, ಭಕ್ತರ ಭಾವನೆಗೆ ಬೆಲೆ ನೀಡಿ ಸಂಬಂಧಿಕರೆಲ್ಲರೂ ಮಠ ತೊರೆಯುವುದಾಗಿ ಘೋಷಿಸಿದರು. ಹಿರೇಮಠ ಮನೆತನಕ್ಕೆ ಸೇರಿದ ಈಗಿನ ಪೀಠಾಧಿಪತಿ ಮರುಳಸಿದ್ಧ ಶಿವಾಚಾರ್ಯ ಸ್ವಾಮೀಜಿ ಅವರನ್ನು ಉಳಿಸಿಕೊಳ್ಳಲು ಭಕ್ತರು ಒಪ್ಪಿಗೆ ನೀಡಿದರು.

ಗ್ರಾಮದ ಮುಖಂಡರಾದ ಬಸವರಾಜ ಹಳ್ಳಿಕೇರಿ, ನಾಗಪ್ಪ ಸವತಿ ಮಾತನಾಡಿ, 'ಮಠ ಭಕ್ತರಿಗೆ ಸೇರಿದ್ದು, ಇನಾಂದಾರ ಕುಟುಂಬದ ಒಳ ಜಗಳದಿಂದ ಅಭಿವೃದ್ಧಿ ಹೊಂದದೆ ನಿಷ್ಕ್ರಿಯವಾಗಿತ್ತು. ಈಗ ಯಾವುದೇ ಗದ್ದಲಕ್ಕೆ ಅವಕಾಶವಿಲ್ಲದಂತೆ ಸುಖಾಂತ್ಯ ಕಂಡಿದ್ದು, ಸಂತಸ ಮೂಡಿಸಿದೆ' ಎಂದರು.

**ಭಾವಚಿತ್ರ ತೆರವು:** ಮಠದಲ್ಲಿ ಇದ್ದ ಪೀಠಾಧಿಪತಿಗಳ ಭಾವಚಿತ್ರ ಹೊರತುಪಡಿಸಿ ಸಂಬಂಧಿಕರ ಎಲ್ಲ ಭಾವಚಿತ್ರಗಳನ್ನು ತೆರವುಗೊಳಿಸಲಾಯಿತು.

ಗ್ರಾಮದ ಎಲ್ಲ ಧರ್ಮದ ಭಕ್ತರ ಭಾವನೆಗೆ ಬದ್ಧರಾಗಿ ಸಂಬಂಧಿಗಳು ಯಾವುದೇ ಕಾನೂನು ಹೋರಾಟಕ್ಕೆ ಮುಂದಾಗದೇ ಸೌಹಾರ್ದ ವಾತಾವರಣದಿಂದ ಮಠವನ್ನು ಮುನ್ನಡೆಸಿಕೊಂಡು ಹೋಗಬೇಕು. ಪೀಠಾಧಿಪತಿ ಅಧ್ಯಕ್ಷತೆಯಲ್ಲಿ ಟ್ರಸ್ಟ್ ರಚನೆ ಮಾಡಿ ಧಾರ್ಮಿಕ ಕಾರ್ಯಗಳನ್ನು ನಡೆಸಬೇಕು ಎಂಬ ಸಲಹೆಗೆ ಒಪ್ಪಿಗೆ ನೀಡಲಾಯಿತು ಎಂದು ಗ್ರಾಮದ ಭಕ್ತರು ತಿಳಿಸಿದರು.

## ಗೋಸಾಯಿ ಮಠ: ಮಂಜುನಾಥ ಸ್ವಾಮೀಜಿ ಪೀಠಾರೋಹಣ ಫೆ.14ಕ್ಕೆ



ಮಂಜುನಾಥ ಸ್ವಾಮೀಜಿ

**ಬೆಂಗಳೂರು:** ಗವಿಪುರ ಗೋಸಾಯಿ ಮಹಾಸಂಸ್ಥಾನ ಮಠದ ನೂತನ ಪೀಠಾಧ್ಯಕ್ಷರಾಗಿ ಮಂಜುನಾಥ ಸ್ವಾಮೀಜಿ ಅವರ ಪಟ್ಟಾಭಿಷೇಕ ಸಮಾರಂಭ ಫೆಬ್ರುವರಿ 14ರಂದು ಬೆಳಿಗ್ಗೆ 9.30 ಗಂಟೆಗೆ ಮಠದ ಆವರಣದಲ್ಲಿ ನಡೆಯಲಿದೆ.

ಫೆ.10ರಿಂದ 14ರವರೆಗೆ ಪೀಠಾರೋಹಣ ಪಟ್ಟಾಭಿಷೇಕ ಕಾರ್ಯಕ್ರಮಗಳು ನಡೆಯಲಿವೆ. ಪ್ರತಿದಿನ ಬೆಳಿಗ್ಗೆ 10 ಗಂಟೆ ಮತ್ತು ಸಂಜೆ 5 ಗಂಟೆಗೆ ನಡೆಯಲಿರುವ ಧರ್ಮಸಭೆಗಳಲ್ಲಿ ವಿವಿಧ ಮಠಾಧೀಶರು ಭಾಗವಹಿಸಲಿದ್ದಾರೆ.

14ರಂದು ನಡೆಯಲಿರುವ ಪಟ್ಟಾಭಿಷೇಕ ಮಹೋತ್ಸವದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಪತಂಜಲಿ ಯೋಗಾಶ್ರಮದ ಬಾಬಾ ರಾಮದೇವ್, ಧರ್ಮಸ್ಥಳದ ಡಿ.ವೀರೇಂದ್ರ ಹೆಗ್ಗಡೆ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಶ್ರೀ ರವಿಶಂಕರ್ ಗುರೂಜಿ, ಸಿದ್ದೇಶ್ವರ ಸ್ವಾಮೀಜಿ ಸೇರಿದಂತೆ ಹಲವರು ಸಾನ್ನಿಧ್ಯ ವಹಿಸಲಿದ್ದಾರೆ.

ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. ಪಿ.ಜಿ.ಆರ್.ಸಿಂಧ್ಯ ಅಧ್ಯಕ್ಷತೆ ವಹಿಸಲಿದ್ದು, ಅತಿಥಿಗಳಾಗಿ ಶಾಸಕ ಬಿ.ಎಸ್.ಯಡಿಯೂರಪ್ಪ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ. ಅದೇ ದಿನ ಗೀತಾಮೃತರಾಗಾವಲ್ಲಿ ಧ್ವನಿಸುರುಳಿ ಲೋಕಾರ್ಪಣೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಂಜುನಾಥ ಸ್ವಾಮೀಜಿ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಬಿ.ಕೆ.ಹಳ್ಳಿಯವರು. ಯಲ್ಲವ್ವಾ ಮತ್ತು ಕೃಷ್ಣಪ್ಪ ಬಾಂಗಡಿ ದಂಪತಿಯ ಪುತ್ರರಾಗಿ 1980ರಲ್ಲಿ ಜನಿಸಿದರು.

## ಮಕ್ಕಳ ಸಾವು: ಚಿಕನ್ ಪಾಕ್ಸ್ ದೃಢ

**ವಾಡಿ (ಕಲಬುರಗಿ ಜಿಲ್ಲೆ):** ಸಮೀಪದ ನಾಲವಾರ ಗ್ರಾಮದಲ್ಲಿ ಈಚೆಗೆ ಒಂದೇ ಕುಟುಂಬದ ಇಬ್ಬರ ಮಕ್ಕಳ ಸಾವಿಗೆ ಚಿಕನ್ ಪಾಕ್ಸ್ (ಸಿಡುಬು) ಕಾರಣ ಎಂದು ಬೆಂಗಳೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ ದೃಢಪಡಿಸಿದೆ. ಇಮ್ರಾನ್ ಪಟೇಲ್ (13), ರೆಹಮಾನ್ (15) ಮೃತರು. ಇವರ ತಾಯಿ ಹಾಗೂ ಇನ್ನಿಬ್ಬರು ಮಕ್ಕಳು ಕೂಡ ಚಿಕನ್‌ಪಾಕ್ಸ್‌ಗೆ ಚಿಕಿತ್ಸೆ ಪಡೆಯುತ್ತಿದ್ದಾರೆ.

### ನಿಧನ ವಾರ್ತೆ

## ಗುರುಬಾಯಿ ಗೌಡತಿ

**ವಿಜಯಪುರ:** ಮಾಜಿ ಸಚಿವ ದಿ.ಬಿ.ಎಸ್.ಪಾಟೀಲ ಸಾಸನೂರ ಅವರ ಪತ್ನಿ, ದೇವರಹಿಪ್ಪರಗಿ ಶಾಸಕ ಸೋಮನಗೌಡ ಪಾಟೀಲ ಸಾಸನೂರ ಅವರ ತಾಯಿ ಗುರುಬಾಯಿಗೌಡತಿ (82) ಮಂಗಳವಾರ ನಿಧನರಾದರು.

ಅವರಿಗೆ ಮೂವರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ತಾಳಿಕೋಟಿ ತಾಲ್ಲೂಕಿನ ಸ್ವಗ್ರಾಮ ಸಾಸನೂರನಲ್ಲಿ ಫೆ. 9ರಂದು ಮಧ್ಯಾಹ್ನ 3ಕ್ಕೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

**ನೇತ್ರ ದಾನ:** ಗುರುಬಾಯಿಗೌಡತಿ ತಮ್ಮ ಪತಿ ಬಿ.ಎಸ್. ಪಾಟೀಲ ಅವರಂತೆ ತಮ್ಮ ನೇತ್ರಗಳನ್ನು ದಾನ ಮಾಡಿದ್ದಾರೆ.

## ಧ್ವಜಸ್ತಂಭದಲ್ಲಿ ಕೇಸರಿ ಬಾವುಟ, ಶಿಕಾರಿಪುರದಲ್ಲಿ ಲಾಠಿ ಪ್ರಹಾರ

# ಶಿವಮೊಗ್ಗ: ಕೆಲವೆಡೆ ಲಾಠಿ ಪ್ರಹಾರ, ನಿಷೇಧಾಜ್ಞೆ

ಪ್ರಜಾವಾಣಿ ವಾರ್ತೆ

**ಶಿವಮೊಗ್ಗ:** ಜಿಲ್ಲೆಯ ಇನ್ನಷ್ಟು ಕಾಲೇಜುಗಳಿಗೆ ಮಂಗಳವಾರವೂ ಹಿಜಾಬ್, ಕೇಸರಿ ಶಾಲು ಸಂಘರ್ಷ ಹಬ್ಬಿದ್ದು, ಸಹ್ಯಾದ್ರಿ ಕಾಲೇಜು, ಬಾಪೂಜಿನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಅತಿರೇಕದ ವರ್ತನೆ ತೋರಿದರು.

ಬಾಪೂಜಿ ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ವಿದ್ಯಾರ್ಥಿಗಳು ಧ್ವಜಸ್ತಂಭಕ್ಕೆ ಕೇಸರಿ ಬಾವುಟ ಕಟ್ಟಿದರು. ಕಲ್ಲು, ಚಪ್ಪಲಿ ತೂರಾಡಿದರು. ಕೆಲವು ಸಮಯ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಪೊಲೀಸರು ಗುಂಪು ಚದುರಿಸಿದ ನಂತರ ಕಾಲೇಜು ಸಿಬ್ಬಂದಿ ಧ್ವಜ ತೆರವುಗೊಳಿಸಿದರು. ಸ್ಥಳಕ್ಕೆ ಜಿಲ್ಲಾಧಿಕಾರಿ ಸೆಲ್ವಮಣಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮೀಪ್ರಸಾದ್ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು.

ಸಹ್ಯಾದ್ರಿ ಕಾಲೇಜಿನಲ್ಲಿ ಸಾವಿರಾರು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು. ಸಮವಸ್ತ್ರ ಕಡ್ಡಾಯಗೊಳಿಸಬೇಕು. ಸರ್ಕಾರದ ಆದೇಶದಂತೆ ಹಿಜಾಬ್ ಧರಿಸಿದವರಿಗೆ ಕಾಲೇಜು ಪ್ರವೇಶಿಸಲು ಅವಕಾಶ ನೀಡಬಾರದು ಎಂದು ಆಗ್ರಹಿಸಿದರು. ರಸ್ತೆಗಳಲ್ಲಿ 'ಜೈ ಶ್ರೀರಾಮ್' ಘೋಷಣೆ ಕೂಗುತ್ತಾ ಸಾಗಿದರು. ಹಿಜಾಬ್ ಧರಿಸಿ ಬಂದಿದ್ದ ಯುವತಿಯರನ್ನು ಓಡಿಸಿಕೊಂಡು ಹೋಗಿ ಬೆದರಿಸಿದರು. ಕಡಿಮೆ ಸಂಖ್ಯೆಯಲ್ಲಿದ್ದ ಯುವತಿಯರು ಓಡುತ್ತಲೇ ಕಾಲೇಜು ಆವರಣದಿಂದ ಹೊರನಡೆದರು. ಕೆಲವು ವಿದ್ಯಾರ್ಥಿಗಳು ಕೇಸರಿ ಬಾವುಟದ ಜತೆಗೆ ರಾಷ್ಟ್ರಧ್ವಜವನ್ನು ಹಿಡಿದು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಡಿವಿಎಸ್ ಕಾಲೇಜು ಮುಂಭಾಗವೂ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ನಂತರ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸಿದರು.

- ಶಿವಮೊಗ್ಗದಲ್ಲಿ ತರಗತಿ ಬಹಿಷ್ಕರಿಸಿ ಹೊರಬಂದ ವಿದ್ಯಾರ್ಥಿಗಳಿಗೆ ಅಪರಿಚಿತ ವ್ಯಕ್ತಿಗಳು ಉಚಿತವಾಗಿ ಕೇಸರಿ ಶಾಲು ವಿತರಿಸಿದರು. ಕಾರುಗಳಲ್ಲಿ ಶಾಲು ತುಂಬಿಕೊಂಡು ಬಂದು ಕಾಲೇಜು ಆವರಣಗಳಲ್ಲೇ ಹಂಚಿದರು.
- ಹಾಸನದಲ್ಲಿ ನಗರದ ಗೃಹ ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ತರಗತಿಗೆ ಹಾಜರಾದರು. ನೀಲಿ ಶಾಲು ಧರಿಸಿದ್ದ ವಿದ್ಯಾರ್ಥಿಗಳ ಗುಂಪು ಹಿಜಾಬ್‌ಗೆ ಬೆಂಬಲ ಸೂಚಿಸಿದರೆ, ಕೇಸರಿ ಶಾಲು ಧರಿಸಿದ್ದವರು ವಿರೋಧಿಸಿದರು.
- ಚನ್ನರಾಯಪಟ್ಟಣ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಂಶುಪಾಲರು ಹಾಗೂ ಉಪನ್ಯಾಸಕರು ವಿದ್ಯಾರ್ಥಿನಿಯರಿಗೆ ತಿಳಿವಳಿಕೆ ಹೇಳಿ ಹಿಜಾಬ್ ತೆಗೆಸಿದರು. ನಂತರ ವಿದ್ಯಾರ್ಥಿಗಳು ಕೇಸರಿ ಶಾಲು ತೆಗೆದರು.
- ಮಡಿಕೇರಿಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನಲ್ಲಿ ಮಂಗಳವಾರ ಕಾಲೇಜಿಗೆ ರಜೆ ಘೋಷಿಸಿ, ಆನ್‌ಲೈನ್ ತರಗತಿಗಳನ್ನು ನಡೆಸಲಾಯಿತು.
- ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪೊಲೀಸರು ಲಾಠಿ ಬೀಸಿ ವಿದ್ಯಾರ್ಥಿಗಳನ್ನು ಚದುರಿಸಿದ್ದಾರೆ.
- ಹಿಜಾಬ್–ಕೇಸರಿ ಶಾಲು ವಿವಾದಕ್ಕೆ ಸಂಬಂಧಿಸಿದಂತೆ ಹರಿಹರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಎದುರು ಮಂಗಳವಾರ ಉದ್ವಿಗ್ನ ಪರಿಸ್ಥಿತಿ ಉಂಟಾಯಿತು. ಪೊಲೀಸರು ಲಾಠಿ ಜಾರ್ಜ್ ಮತ್ತು ಅಶ್ರುವಾಯು ಪ್ರಯೋಗ ಮಾಡಿ ಪರಿಸ್ಥಿತಿ ನಿಯಂತ್ರಿಸಿದರು.
- ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳನ್ನು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ಮಾಡಿದರು.



ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿಯಲ್ಲಿ ಅಲ್ಲಮ ಪ್ರಾಥಮಿಕಶಾಲೆಯ ಅತಿಥಿ ಶಿಕ್ಷಕ ಮಂಜುನಾಥ ನಾಯಕ ಅವರು ದುಷ್ಕರ್ಮಿಗಳಿಂದ ಹಲ್ಲೆಗೊಳಗಾದರು

**ಲಘು ಲಾಠಿ ಪ್ರಹಾರ:** ಶಿಕಾರಿಪುರ ಕಾಲೇಜಿನಲ್ಲಿ ಎರಡೂ ಕೋಮಿನ ಯುವಕ, ಯುವತಿಯರು ಪ್ರತಿಭಟನೆ ನಡೆಸಿದರು. ಕೆಲವು ಯುವಕರು ಬಸ್‌ಗಳ ಮೇಲೆ ಕಲ್ಲು ತೂರಾಟ ನಡೆಸಿದರು. ಗಾಜುಗಳನ್ನು ಒಡೆದು ಹಾಕಿದರು. ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ ಗುಂಪು ಚದುರಿಸಿದರು.

**ನಗರ ವ್ಯಾಪ್ತಿಯಲ್ಲಿ 144 ಸೆಕ್ಷನ್ ಜಾರಿ:** ಶಿವಮೊಗ್ಗದ ಸರ್ಕಾರಿ ಪದವಿ ಕಾಲೇಜು ಸೇರಿ ವಿವಿಧ ಕಾಲೇಜುಗಳಲ್ಲಿ ಸ್ಕಾರ್ಫ್–ಕೇಸರಿ ಶಾಲು ವಿವಾದಕ್ಕೆ ಸಂಬಂಧಿಸಿ ನಗರದ ಪ್ರಥಮ ದರ್ಜೆ ಕಾಲೇಜಿನ ಮೇಲೆ ವಿದ್ಯಾರ್ಥಿಗಳು ಕಲ್ಲು ತೂರಾಟ ನಡೆಸಿದ್ದು, ಪರಿಸ್ಥಿತಿ ಹತೋಟಿಗೆ ತಹಶೀಲ್ದಾರ್ ಸೆಕ್ಷನ್ 144 ಜಾರಿ ಮಾಡಿದ್ದಾರೆ.

ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಶಿವಮೊಗ್ಗ ನಗರದಲ್ಲಿ ಫೆ.8 ಮತ್ತು 9 ರಂದು 144 ಸೆಕ್ಷನ್ ಜಾರಿಗೊಳಿಸಿ ತಹಶೀಲ್ದಾರ್ ಆದೇಶ ಹೊರಡಿಸಿದ್ದಾರೆ. ಹೀಗಾಗಿ ಮಧ್ಯಾಹ್ನದ ನಂತರ ನಗರದ ಎಲ್ಲ ಅಂಗಡಿಗಳ ಬಾಗಿಲು ಮುಚ್ಚಿದವು,

# ವಿವಾದ: ಸರ್ಕಾರದ ನಡೆ ಸರಿಯೇ?

ಹಿಜಾಬ್–ಶಾಲು ವಿವಾದ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿದೆ. ಈ ಪ್ರಕ್ಷೋಭೆ ಮಂಗಳವಾರ ಸಂಘರ್ಷದತ್ತ ತಿರುಗಿದ ಬೆನ್ನಲ್ಲೇ, ಮೂರು ದಿನ ಪ್ರೌಢಶಾಲೆ–ಕಾಲೇಜುಗಳಿಗೆ ರಜೆ ನೀಡಲಾಗಿದೆ. ಈ ಪ್ರಕರಣವನ್ನು ನಿಭಾಯಿಸಿದ ಕ್ರಮ ಸರಿಯಿದೆಯೇ? ರಜೆ ಕೊಡುವ ಬದಲು ಬೇರೆ ಮಾರ್ಗ ಇರಲಿಲ್ಲವೇ ಎಂಬ ಪ್ರಶ್ನೆಗೆ ಹಿಂದೆ ಶಿಕ್ಷಣ ಸಚಿವರಾಗಿ ಕಾರ್ಯನಿರ್ವಹಿಸಿದವರ ಅಭಿಪ್ರಾಯ ಇಲ್ಲಿದೆ.

## 'ರಾಜ್ಯ ಸರ್ಕಾರದ ವೈಫಲ್ಯವೇ ಕಾರಣ'



ಈ ವಿವಾದ ರಾಜ್ಯವ್ಯಾಪಿ ವಿಸ್ತರಿಸಲು ರಾಜ್ಯ ಸರ್ಕಾರದ ವೈಫಲ್ಯವೇ ಕಾರಣ. ಆರಂಭದಲ್ಲಿಯೇ ಮುಖ್ಯಮಂತ್ರಿ, ಗೃಹ ಸಚಿವರು, ಶಿಕ್ಷಣ ಸಚಿವರು, ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಅಡ್ವೊಕೇಟ್ ಜನರಲ್ ಜೊತೆ ಸಮಾಲೋಚಿಸಿ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಬೇಕಿತ್ತು. ಆ ಕೆಲಸ ಮಾಡುವ ಬದಲು ವಿದ್ಯಾರ್ಥಿಗಳು, ಪೋಷಕರು ಬೀದಿಗಿಳಿಯಲು ಬಿಟ್ಟು, ರಾಜಕೀಯ ಲಾಭ ಪಡೆಯಲು ಯತ್ನಿಸಿದರು. ಸದ್ಯ ಇರುವ ವ್ಯವಸ್ಥೆಯಲ್ಲೇ ಮುಂದುವರಿಸಿ, ಈ ವಿಚಾರದಲ್ಲಿ ನ್ಯಾಯಾಲಯದ ಆದೇಶಕ್ಕೆ ಬದ್ಧ ಎಂದು ಆರಂಭದಲ್ಲಿಯೇ ಸರ್ಕಾರ ಸ್ಪಷ್ಟಪಡಿಸಬೇಕಿತ್ತು. ಆ ಮೂಲಕ, ಯಾರೂ ಕೂಡಾ ಸಂಘರ್ಷಕ್ಕೆ ಇಳಿಯದಂತೆ ತಡೆಯಬೇಕಿತ್ತು. ಆದರೆ, ಈ ಸರ್ಕಾರಕ್ಕೆ ನೆಲದ ಕಾನೂನು ಮತ್ತು ಸಂವಿಧಾನದ ಮೇಲೆ ನಂಬಿಕೆ ಇಲ್ಲ. ಚುನಾವಣೆ ಹತ್ತಿರ ಬಂದಾಗ ಧರ್ಮ, ಜಾತಿ ವಿಷಯದಲ್ಲಿ ರಾಜಕೀಯ ಮಾಡುವುದು ಬಿಜೆಪಿಯವರ ಪರಿಪಾಠ. ಈ ಹಿಂದಿನ ಚುನಾವಣೆಯಲ್ಲಿ ಕೋಮು ಸಂಘರ್ಷದ ಮೂಲಕ ಬಿಜೆಪಿಯವರು ಅಧಿಕಾರದ ಕನಸು ಕಂಡಿದ್ದರೆ, ಮುಂದಿನ ಚುನಾವಣೆಗೆ ಇಂಥ ವಿಷಯವನ್ನು ರಕ್ಷಾ ಕವಚ ಮಾಡಲು ಹೊರಟಿದ್ದಾರೆ.

**ಕಿಮ್ಮನೆ ರತ್ನಾಕರ,** ಮಾಜಿ ಶಿಕ್ಷಣ ಸಚಿವ

## 'ಪರಿಸ್ಥಿತಿ ತಿಳಿಗೊಳಿಸದಿದ್ದರೆ ಅಪಾಯ'



ಶಾಲೆ, ಕಾಲೇಜುಗಳ ಮಕ್ಕಳನ್ನು ಚಿಲ್ಲರೆ ರಾಜಕಾರಣಕ್ಕೆ ಬಳಸಿಕೊಳ್ಳುವ ಮೂರ್ಖತನವನ್ನು ಎಲ್ಲರೂ ತಕ್ಷಣ ನಿಲ್ಲಿಸಬೇಕು. ರಾಜ್ಯ ಸರ್ಕಾರ, ರಾಜಕೀಯ ಪಕ್ಷಗಳು ಮತ್ತು ಮಕ್ಕಳ ಪೋಷಕರು ಸ್ವಾರ್ಥ ಬದಿಗಿಟ್ಟು ಜವಾಬ್ದಾರಿಯಿಂದ ವರ್ತಿಸಬೇಕು. ರಾಜಕಾರಣ ವಿಧಾನಸೌಧ ಮತ್ತು ಚುನಾವಣೆಗೆ ಸೀಮಿತವಾಗಿರಬೇಕು.

ಶಿಕ್ಷಣ ಸಂಸ್ಥೆಗಳಲ್ಲಿ ವಸ್ತ್ರದ ಹೆಸರಿನಲ್ಲಿ ಮಕ್ಕಳನ್ನು ಇಬ್ಭಾಗ ಮಾಡಿ, ಪ್ರವೇಶ ದ್ವಾರದ ಬಳಿ ನಿಲ್ಲಿಸುವುದು ಸಲ್ಲದು. ಕಾಲೇಜಿನ ಪ್ರವೇಶ ದ್ವಾರದ ಬಳಿ ನಿಂತು 'ಅಲ್ಲಾ ಹು ಅಕ್ಬರ್...', 'ಜೈ ಶ್ರೀರಾಮ್' ಎಂದು ಘೋಷಣೆ ಕೂಗುವ ಮಟ್ಟಕ್ಕೆ ಮಕ್ಕಳನ್ನು ತಳ್ಳಿರುವುದು ಖಂಡನೀಯ. ಈ ಬಗೆಯ ಒಡಕಿನ ಭಾವನೆ ಬೆಳೆದರೆ ಮುಂದೆ ಶಾಲೆ, ಕಾಲೇಜುಗಳಲ್ಲೇ ಗಲಾಟೆಗಳು ಆಗುವ ಅಪಾಯವಿದೆ. ಯಾರೊಬ್ಬರೂ ಈ ವಿಚಾರದಲ್ಲಿ ಪ್ರತಿಷ್ಠೆ ಪ್ರದರ್ಶಿಸಬಾರದು. ಮಕ್ಕಳ ಮನಸ್ಸಿನಲ್ಲಿ ಸೌಹಾರ್ದ ಭಾವನೆ ಮೂಡಿಸುವ ಕೆಲಸವನ್ನು ತಕ್ಷಣ ಮಾಡುವಂತೆ ನಾನು ಎಲ್ಲರಲ್ಲೂ ಮನವಿ ಮಾಡುವೆ. ಮಕ್ಕಳ ಮನಸ್ಸನ್ನು ಹಾಳು ಮಾಡುವ ಕೆಲಸಕ್ಕೆ ಎಲ್ಲರೂ ಪೂರ್ಣವಿರಾಮ ಹಾಕಬೇಕು.

**ಬಸವರಾಜ ಹೊರಟ್ಟಿ,** ವಿಧಾನ ಪರಿಷತ್ ಸಭಾಪತಿ, ಮಾಜಿ ಶಿಕ್ಷಣ ಸಚಿವ

## 'ತಕ್ಷಣದ ಕ್ರಮ ಅನಿವಾರ್ಯವಾಗಿತ್ತು'



ಶಾಲೆ, ಕಾಲೇಜುಗಳಿಗೆ ರಜೆ ನೀಡಿರುವ ನಿರ್ಧಾರವನ್ನು ಸರಿ, ತಪ್ಪು ಎಂದು ವಿಶ್ಲೇಷಿಸಲು ಆಗದು. ರಜೆ ಘೋಷಿಸುವಂತೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕೂಡ ಆಗ್ರಹಿಸಿದ್ದರು. ಸರ್ಕಾರವೂ ಅದೇ ನಿರ್ಧಾರ ಕೈಗೊಂಡಿದೆ.

ತರಗತಿಗಳಲ್ಲಿ ವಸ್ತ್ರ ಧಾರಣೆಗೆ ಸಂಬಂಧಿಸಿದ ವಿಚಿತ್ರ ಪ್ರತಿ ದಿನವೂ ವ್ಯಾಪಿಸುತ್ತಲೇ ಇದೆ. ಈಗಾಗಲೇ ರಾಜ್ಯದ ಬಹುತೇಕ ಜಿಲ್ಲೆಗಳನ್ನು ತಲುಪಿದೆ. ಕೋವಿಡ್ ಸರಪಳಿ ತುಂಡರಿಸಲು ಲಾಕ್‌ಡೌನ್ ಜಾರಿಗೊಳಿಸಿದಂತೆ ತಕ್ಷಣದ ಕ್ರಮ ಅನಿವಾರ್ಯ ಆಗಿತ್ತು. ಆ ದಿಸೆಯಲ್ಲಿ ಶಾಲೆ, ಕಾಲೇಜುಗಳಿಗೆ ರಜೆ ಘೋಷಿಸಿರುವುದು ಸರಿಯಾದ ಕ್ರಮ. ಈ ಅವಧಿಯಲ್ಲಿ ಎಲ್ಲ ಕಡೆಯ ಪ್ರಮುಖರ ಜತೆ ಕುಳಿತು ಪರಿಸ್ಥಿತಿ ತಿಳಿಗೊಳಿಸಲು ಪ್ರಯತ್ನ ನಡೆಸಲು ಅವಕಾಶ ದೊರಕಿದೆ. ಶಾಶ್ವತವಾಗಿ ಈ ಸಮಸ್ಯೆಯನ್ನು ಪರಿಹರಿಸಲು ಈ ತಾತ್ಕಾಲಿಕ ಕ್ರಮದಿಂದ ಅನುಕೂಲ ಆಗಲಿದೆ.

**ಎಸ್. ಸುರೇಶ್ ಕುಮಾರ್,** ಮಾಜಿ ಶಿಕ್ಷಣ ಸಚಿವ ಹಾಗೂ ಹಾಲಿ ಶಾಸಕ

## ಮಂಡ್ಯ: ಪಿಇಎಸ್ ಪದವಿ ಕಾಲೇಜಿನಲ್ಲಿ ಗೊಂದಲ, ಪ್ರತಿಭಟನೆ

# ಜೈಶ್ರೀರಾಮ್– ಅಲ್ಲಾಹು ಅಕ್ಬರ್ ಮಾರ್ದನಿ

ಪ್ರಜಾವಾಣಿ ವಾರ್ತೆ

**ಮಂಡ್ಯ:** ಹಿಜಾಬ್, ಬುರ್ಖಾ ಧರಿಸಿ ಮಂಗಳವಾರ ಕಾಲೇಜಿಗೆ ಬಂದ ವಿದ್ಯಾರ್ಥಿನಿಯೊಬ್ಬರ ಹಿಂದೆ ಕೇಸರಿ ಶಾಲು ಧರಿಸಿದ್ದ ನೂರಾರು ವಿದ್ಯಾರ್ಥಿಗಳು 'ಜೈಶ್ರೀರಾಮ್' ಘೋಷಣೆ ಕೂಗುತ್ತಾ ಹಿಂಬಾಲಿಸಿದರು. ಆ ಸಂದರ್ಭದಲ್ಲಿ ಸ್ವಲ್ಪವೂ ವಿಚಲಿತರಾಗದೆ ವಿದ್ಯಾರ್ಥಿನಿಯು 'ಅಲ್ಲಾಹು ಅಕ್ಬರ್' ಘೋಷಣೆ ಕೂಗುತ್ತಾ ಪ್ರತಿರೋಧ ವ್ಯಕ್ತಪಡಿಸಿದ ಸನ್ನಿವೇಶದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ದಾರಿ ಮಾಡಿತ್ತು.

ಈ ಘಟನೆ ನಡೆದದ್ದು ನಗರದ ಪಿಇಎಸ್ ಪದವಿ ಕಾಲೇಜು ಆವರಣದಲ್ಲಿ. ಕೇಸರಿ ಶಾಲು ಧರಿಸಿ ವಿದ್ಯಾರ್ಥಿಗಳು ಬಂದಿದ್ದರು. ಹಲವರು ವಿದ್ಯಾರ್ಥಿಗಳಿಗೆ ಶಾಲು ವಿತರಿಸುತ್ತಿದ್ದರು. ಅದೇ ಸಮಯಕ್ಕೆ ಬುರ್ಖಾ, ಹಿಜಾಬ್ ಧರಿಸಿದ್ದ ವಿದ್ಯಾರ್ಥಿನಿ ಸ್ಕೂಟರ್‌ನಲ್ಲಿ ಬಂದರು. ಆಗ ಕೇಸರಿ ಶಾಲು ಧರಿಸಿದ್ದವರ ಕೂಗು ಜೋರಾಯಿತು.

ಸ್ಕೂಟರ್ ಇಳಿದು ತರಗತಿಗೆ ತೆರಳುತ್ತಿದ್ದ ವಿದ್ಯಾರ್ಥಿನಿಯನ್ನೇ ಹಿಂಬಾಲಿಸಿ, ಹಿಜಾಬ್, ಬುರ್ಖಾ ವಿರುದ್ಧ ಘೋಷಣೆ ಕೂಗಿದರು. 'ಜೈಶ್ರೀರಾಮ್' ಘೋಷಣೆಯೂ ಹೊರಬಿತ್ತು. ಆ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಿದ ವಿದ್ಯಾರ್ಥಿನಿ 'ಅಲ್ಲಾಹು ಅಕ್ಬರ್' ಎಂದು ಗಟ್ಟಿದನಿಯಲ್ಲಿ ಘೋಷಣೆ ಕೂಗಿದರು.

ಅದರಿಂದ ಮತ್ತಷ್ಟು ಪ್ರಚೋದನೆಗೆ ಒಳಗಾದ ಕೇಸರಿ ಶಾಲು ಧರಿಸಿದ್ದವರ ಕೂಗು ಇನ್ನೂ ಜೋರಾಯಿತು. ವಿದ್ಯಾರ್ಥಿನಿಯೂ ಘೋಷಣೆ ಮುಂದುವರಿಸಿದರು. 'ಬುರ್ಖಾ ತೆಗೆಯಿರಿ ಎಂದು ಹೇಳಲು ಅವರು ಯಾರು, ಅವರಿಗೆ ಏನು ಹಕ್ಕಿದೆ' ಎಂದು ಪ್ರಶ್ನಿಸಿದರು. ಆಗಲೂ ವಿದ್ಯಾರ್ಥಿಗಳು ಆಕೆಯನ್ನು ಹಿಂಬಾಲಿಸಿಯೇ ಬಂದರು.

ತಕ್ಷಣವೇ ಎಚ್ಚೆತ್ತುಕೊಂಡ ಕಾಲೇಜು ಸಿಬ್ಬಂದಿ ಗುಂಪನ್ನು ತಡೆದರು, ನಂತರ ಪೊಲೀಸರು ಸ್ಥಳಕ್ಕೆ ಬಂದು ವಿದ್ಯಾರ್ಥಿಗಳನ್ನು ಚದುರಿಸಿದರು. ಕಾಲೇಜು ಆವರಣದಿಂದ ಹೊರ ಹೋಗುವಂತೆ ಸೂಚಿಸಿದರು. ಕೆಲವರು ಕೇಸರಿ ಶಾಲು ತೆಗೆದು ತರಗತಿಗೆ ತೆರಳಿದರೆ, ಇನ್ನೂ ಕೆಲವರು ಆವರಣದಿಂದ ಹೊರನಡೆದರು.

'ಕಾಲೇಜಿನ ಹೊರಗೆ ಘಟನೆ ನಡೆದಿದೆ. ಸಮವಸ್ತ್ರ ಹೊರತುಪಡಿಸಿ ಬೇರೆ ಯಾವುದೇ ಉಡುಪು ಧರಿಸಿ ಬಂದವರನ್ನು ತರಗತಿಗೆ ಸೇರಿಸಿಲ್ಲ' ಎಂದು ಪ್ರಾಚಾರ್ಯ ಡಾ.ಜೆ. ಮಹಾದೇವ ತಿಳಿಸಿದರು.

**ಪ್ರತಿಭಟನೆ:** ಮಂಡ್ಯ ವಿಶ್ವವಿದ್ಯಾಲಯ, ಪಿಇಎಸ್ ಪದವಿ ಕಾಲೇಜು ಸೇರಿದಂತೆ ವಿವಿಧ ಕಾಲೇಜು ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. 'ನಾವೆಲ್ಲಾ ಒಂದು, ನಾವೆಲ್ಲಾ ಹಿಂದೂ' ಎಂದು ಘೋಷಣೆ ಕೂಗಿದರು. 'ಹಿಜಾಬ್ ತೆಗೆಯುವವರೆಗೂ ನಾವು ಕೇಸರಿ ಶಾಲು ತೆಗೆಯುವುದಿಲ್ಲ' ಎಂದು ಪ್ರತಿಪಾದಿಸಿದರು. ಕೆ.ಆರ್.ಪೇಟೆ, ಶ್ರೀರಂಗಪಟ್ಟಣ, ಪಾಂಡವಪುರದಲ್ಲೂ ಪ್ರತಿಭಟನೆಗಳು ನಡೆದವು.

## ಸಂಘರ್ಷ: ಇಬ್ಬರು ವಿದ್ಯಾರ್ಥಿಗಳು ಆಸ್ಪತ್ರೆಗೆ ದಾಖಲು

**ಶಿವಮೊಗ್ಗ/ಸಾಗರ:** ಹಿಜಾಬ್–ಕೇಸರಿ ಸಂಘರ್ಷದಲ್ಲಿ ಸಾಗರದ ಸರ್ಕಾರಿ ಪದವಿಪೂರ್ವ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಇಲ್ಲಿನ ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಆಸ್ಪತ್ರೆಯಲ್ಲಿ ದಾಖಲಾಗಿರುವ ಇಬ್ಬರಲ್ಲಿ ಒಬ್ಬರು ವಿದ್ಯಾರ್ಥಿನಿಯಾಗಿದ್ದಾರೆ. 12 ವಿದ್ಯಾರ್ಥಿಗಳು ಹೊರರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. ಶಿವಮೊಗ್ಗದ ಪ್ರಥಮ ದರ್ಜೆ ಕಾಲೇಜಿನಲ್ಲೂ ಆರು ವಿದ್ಯಾರ್ಥಿಗಳು ಗಾಯಗೊಂಡಿದ್ದು, ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ತೆರಳಿದ್ದಾರೆ.

## 'ಮುಸ್ಲಿಮರ ವಿರುದ್ಧ ದ್ವೇಷ ಸಾಮಾನ್ಯ'

**ಶ್ರೀನಗರ:** 'ದೇಶದಲ್ಲಿ ಇತ್ತೀಚಿನ ದಿನಗಳಲ್ಲಿ ಮುಸ್ಲಿಮರ ವಿರುದ್ಧ ಕಿಡಿಕಾರುವುದು ಸರ್ವೆ ಸಾಮಾನ್ಯವಾಗಿಬಿಟ್ಟಿದ್ದು, ಭಾರತವು ಈಗ ವೈವಿಧ್ಯತೆಯಲ್ಲಿ ಏಕತೆಯನ್ನು ಸಾರುವ ದೇಶವಾಗಿ ಉಳಿದಿಲ್ಲ' ಎಂದು ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

# ಕಲ್ಲು ತೂರಾಟ, ಲಾಠಿ ಚಾರ್ಜ್

ಪ್ರಜಾವಾಣಿ ವಾರ್ತೆ

- ಬೇಲೂರಿನ ವೈಡಿಡಿ ಕಾಲೇಜಿನಲ್ಲಿ ಹಿಜಾಬ್ ಪರ, ವಿರುದ್ಧ ಪ್ರತಿಭಟನೆ ನಡೆಯಿತು.
- ಕಲಬುರಗಿಯಲ್ಲಿ ಜೆಡಿಎಸ್ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

**ಹುಬ್ಬಳ್ಳಿ:** ವಿಜಯಪುರ, ಬೆಳಗಾವಿ, ವಿಜಯನಗರ, ಶಿರಸಿ, ಹಾವೇರಿ, ಬೆಳಗಾವಿ ಹಾಗೂ ಗದಗ ಜಿಲ್ಲೆಗಳ ಕೆಲ ಕಾಲೇಜುಗಳಲ್ಲಿ ಮಂಗಳವಾರವೂ ಹಿಜಾಬ್ ಹಾಗೂ ಕೇಸರಿ ಶಾಲು ವಿವಾದ ಮುಂದುವರಿದಿದ್ದು, ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿ ತಾಲ್ಲೂಕಿನ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ವಿವಾದ ತಾರಕ್ಕೇರಿದ್ದು ಕಲ್ಲು ತೂರಾಟವಾಗಿ ಪ್ರಾಚಾರ್ಯ ಹಾಗೂ ಉಪನ್ಯಾಸಕರೊಬ್ಬರು ಗಾಯಗೊಂಡಿದ್ದಾರೆ.

ಬನಹಟ್ಟಿಯ ಮಹಾತ್ಮ ಗಾಂಧಿ ಸರ್ಕಲ್ ಹತ್ತಿರದ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಬೆಳಿಗ್ಗೆ ಕೆಲವು ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬಂದಿದ್ದರು. ನಂತರ ಕೆಲ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಪ್ರತಿಭಟಿಸಿದರು. ವಿದ್ಯಾರ್ಥಿಗಳ ಪೋಷಕರು ಕೂಡ ಪ್ರತಿಭಟನೆಯಲ್ಲಿ ಪಾಲ್ಗೊಂಡು ಪರಸ್ಪರ ಘೋಷಣೆಗಳನ್ನು ಕೂಗಿದರು.

ಮಾತು ಬೆಳೆದು ವಿದ್ಯಾರ್ಥಿಗಳು ಪರಿಸ್ಪರ ಕಲ್ಲು ತೂರಾಟದಲ್ಲಿ ತೊಡಗಿದರು. ಕಲ್ಲು ತೂರಾಟದ ಸಮಯದಲ್ಲಿ ಕಾಲೇಜಿನ ಪ್ರಾಚಾರ್ಯ ಎಸ್.ಎಂ.ಶೇಖ ಮತ್ತು ಕನ್ನಡ ಉಪನ್ಯಾಸಕರೊಬ್ಬರು ಕಲ್ಲು ತಾಗಿ ಗಾಯಗೊಂಡರು. ಜನರನ್ನು ಚದುರಿಲು ಪೊಲೀಸ್‌ರು ಲಘು ಲಾಠಿ ಪ್ರಹಾರ ನಡೆಸಿದರು.

## 'ವಸ್ತ್ರಸಂಹಿತೆ ಆದೇಶ ತಕ್ಷಣ ವಾಪಸ್ ಪಡೆಯಬೇಕು'

**ಬೆಂಗಳೂರು:** 'ಹಿಜಾಬ್ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುವುದರಿಂದ ಸಮವಸ್ತ್ರ ವಿಚಾರದಲ್ಲಿ ಹಿಂದಿನಿಂದ ಇರುವ ಕ್ರಮವನ್ನೇ ಮುಂದುವರಿಸಿಕೊಂಡು ಹೋಗಬೇಕಿತ್ತು. ಸಮವಸ್ತ್ರ ಕಡ್ಡಾಯಗೊಳಿಸಿ ಸರ್ಕಾರ ಆದೇಶ ಮಾಡಬಾರದಿತ್ತು. ತಕ್ಷಣ ಈ ಆದೇಶ ವಾಪಸ್ ಪಡೆಯಬೇಕು' ಎಂದು ಕಾಂಗ್ರೆಸ್ ಶಾಸಕ ಯು.ಟಿ. ಖಾದರ್ ಆಗ್ರಹಿಸಿದರು. ಸುದ್ದಿಗಾರರ ಜೊತೆ ಮಾತನಾಡಿ, 'ಹೊಸ ವಸ್ತ್ರಸಂಹಿತೆ ತರುವ ಸಮಯ ಇದಲ್ಲ. ಏಕಾಏಕಿ ಪದ್ಧತಿ ಬದಲಾವಣೆ ಸರಿಯಲ್ಲ. ನ್ಯಾಯಾಲಯದ ತೀರ್ಪು ಬಂದ ಬಳಿಕ ಸರ್ಕಾರ ನಿರ್ಧರಿಸಲಿ. ಕಾಲೇಜುಗಳಲ್ಲಿ ತರಗತಿ ನಡೆಯಲು ಅಡ್ಡಿಪಡಿಸಿದರೆ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದರು.

# ರಾಜ್ಯ ಹೊತ್ತಿ ಉರಿಯುತ್ತಿದೆ: ಹೈಕೋರ್ಟ್ ಆತಂಕ

• ಬಿ.ಎಸ್.ಷಣ್ಮುಖಪ್ಪ

**ಬೆಂಗಳೂರು:** ಕೋವಿಡ್ ನಿರ್ಬಂಧ ಸಡಿಲಿಕೆಯಾಗಿದ್ದರೂ ಹೈಕೋರ್ಟ್ ಪ್ರವೇಶಕ್ಕೆ ವಿಧಿಸಿರುವ ಸಾರ್ವಜನಿಕರು, ಕಕ್ಷಿದಾರರ ಪ್ರವೇಶ ಮಿತಿಯಲ್ಲಿ ಅಷ್ಟೇನೂ ವ್ಯತ್ಯಾಸವಾಗಿಲ್ಲ. ಆದರೂ, ಮಂಗಳವಾರ ಹೈಕೋರ್ಟ್‌ನ 10ನೇ ಸಂಖ್ಯೆಯ ಹಾಲ್‌ನಲ್ಲಿ ಹಿರಿ–ಕಿರಿಯ ವಕೀಲರು, ಬೆಳಿಗ್ಗೆ 10.30ಕ್ಕೆ ಸರಿಯಾಗಿ ಕಿಕ್ಕಿರಿದು ಜಮಾಯಿಸಿದ್ದರು.

ಹಿಜಾಬ್ ಕುರಿತಾದ ರಿಟ್ ಅರ್ಜಿಗಳ ಸಂಖ್ಯೆ ಮಂಗಳವಾರ ಒಟ್ಟು ಏಳಕ್ಕೇರಿದೆ. ಈ ಎಲ್ಲ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಧ್ಯಾಹ್ನ ವಿಚಾರಣೆಗೆ ಕೈಗೆತ್ತಿಕೊಂಡಿತು.

ಕಲಾಪ ಆರಂಭವಾಗುತ್ತಿದ್ದಂತೆಯೇ ದಿನದ ಕಾಸ್ ಲಿಸ್ಟ್‌ನಲ್ಲಿ ನಮೂದಿಸಲಾಗಿದ್ದ (ಹಿಜಾಬ್ ಹೊರತುಪಡಿಸಿ) ಇತರೆಲ್ಲಾ ಪ್ರಕರಣಗಳಿಗೆ ಮುದ್ದತ್ತು ನೀಡಿ ವಿಚಾರಣೆ ಮುಂದೂಡಲಾಯಿತು. ಕೆಲವು ವಕೀಲರು, 'ನಮ್ಮ ಅರ್ಜಿಗಳ ತುರ್ತು ವಿಚಾರಣೆ ಅಗತ್ಯವಿದೆ' ಎಂದು ಮನವಿ ಮಾಡಿದರು.

ಇದಕ್ಕೆ ನ್ಯಾಯಮೂರ್ತಿಗಳು, 'ಇಡೀ ರಾಜ್ಯ ಹೊತ್ತಿ ಉರಿಯುತ್ತಿದೆ. ಮುಗ್ಧ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಲು ಎಲ್ಲೆಡೆ ಅಡಚಣೆಯಾಗುತ್ತಿದೆ. ಅವರೆಲ್ಲಾ ರಸ್ತೆಗೆ ಇಳಿದಿದ್ದಾರೆ. ಇದ್ಯಾವುದೂ ಸಂತೋಷದ ವಿಷಯವಲ್ಲ. ಹಾಗಾಗಿ ಹಿಜಾಬ್ ಪ್ರಕರಣಕ್ಕೆ ಆದ್ಯತೆ ನೀಡಲಾಗುವುದು. ಸಂವಿಧಾನ ಏನು ಹೇಳುತ್ತದೆಯೋ ಹಾಗೆ ನಡೆಯೋಣ. ಈ ಅರ್ಜಿಗಳ ಕಾನೂನು ಪರಾಮರ್ಶೆ ನಡೆಸೋಣ' ಎಂದರು.

**ಸಂಖ್ಯೆ ಮುಖ್ಯವಲ್ಲ:** ಅರ್ಜಿದಾರರ ಪರ ವಕೀಲರೊಬ್ಬರು, 'ಸ್ವಾಮಿ ಈ ವಿಷಯಕ್ಕೆ ಸಂಬಂಧಿಸಿದಂತೆ ಇನ್ನೂ ಹಲವು ಅರ್ಜಿಗಳು ದಾಖಲಾಗುತ್ತಿವೆ. ಆದ್ದರಿಂದ, ವಿಚಾರಣೆ ಮುಂದೂಡಬೇಕು' ಎಂದು ಕೋರಿದರು.

ಇದಕ್ಕೆ ನ್ಯಾಯಮೂರ್ತಿಗಳು, 'ಇದು ಕೆ.ಆರ್.ಮಾರ್ಕೆಟ್ ಅಲ್ಲ. ಹೈಕೋರ್ಟ್. ಅರ್ಜಿಗಳ ಸಂಖ್ಯೆ ಎಷ್ಟೇ ಇದ್ದರೂ ತೀರ್ಪು ಎಲ್ಲವಕ್ಕೂ ಒಂದೇ ಅನ್ವಯವಾಗುತ್ತದೆ ಅಲ್ಲವೇ' ಎಂದು ಪ್ರಶ್ನಿಸಿದರು.

**ಸಂಸ್ಕೃತಕ್ಕಿಂತ ಸುಂದರ ಕನ್ನಡ:** ಅರ್ಜಿದಾರರ ಪರ ಹಿರಿಯ ವಕೀಲ ದೇವದತ್ತ ಕಾಮತ್ ಇಡೀ ದಿನದ ಕಲಾಪ ಅಂತ್ಯವಾಗುವ ತನಕ ವಾದ ಮಂಡಿಸಿದರು. ಆರಂಭದಲ್ಲಿಯೇ, 'ಸರ್ಕಾರದ ಸುತ್ತೋಲೆ ಆಕ್ಷೇಪಾರ್ಹವಾಗಿದೆ' ಎಂದು ವಿವರಿಸುತ್ತಿದ್ದಂತೆಯೇ, ನ್ಯಾಯಮೂರ್ತಿಗಳು, 'ಸರಿ, ಸರ್ಕಾರದ ಆದೇಶವನ್ನು ಎಲ್ಲ ವಕೀಲರು ಮತ್ತು ಕಕ್ಷಿದಾರರಿಗೆ ಕೇಳುವಂತೆ ಗಟ್ಟಿಯಾಗಿ ಓದಿ' ಎಂದು ನಿರ್ದೇಶಿಸಿದರು. ಆಗ ಕಾಮತ್, 'ಸ್ವಾಮಿ, ನನಗೆ ಕನ್ನಡ ಅಷ್ಟೊಂದು ಚೆನ್ನಾಗಿ ಬರುವುದಿಲ್ಲ, ಕ್ಷಮಿಸಬೇಕು' ಎಂದರು.

ಇದಕ್ಕೆ ಅಚ್ಚರಿ ವ್ಯಕ್ತಪಡಿಸಿದ ನ್ಯಾಯಮೂರ್ತಿಗಳು, ಕಾಮತ್, ನೀವು ಕನ್ನಡಿಗರು. ನಿಮಗೆ ಗೊತ್ತೇ, ಸಂಸ್ಕೃತಕ್ಕಿಂತಲೂ ಕನ್ನಡ ಅತ್ಯಂತ ಸುಂದರವಾದ ಭಾಷೆ. ಈ ಮಾತನ್ನು ಡಿ.ವಿ. ಗುಂಡಪ್ಪನವರು ತಮ್ಮ, 'ಸಾಹಿತ್ಯ ಮತ್ತು ಜೀವನ ಸೌಂದರ್ಯ'ದಲ್ಲಿ ಉಲ್ಲೇಖಿಸಿದ್ದಾರೆ ಎಂದು ಗಮನ ಸೆಳೆದರು.

**ಆಕ್ಷೇಪಣೆ ಸಿದ್ಧ:** ಸರ್ಕಾರದ ಪರ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ ಹಾಜರಾಗಿ, 'ಸರ್ಕಾರದ ಆಕ್ಷೇಪಣೆ ಸಿದ್ಧವಿದೆ' ಎಂದು ಅರುಹಿದರು. ವಾದ ಮಂಡನೆಯ ಮಧ್ಯದಲ್ಲಿ ಕಾಮತ್, 'ಕೆಲವೆಡೆ ವಿದ್ಯಾರ್ಥಿಗಳಿಗೆ ರಕ್ಷಣೆ ಬೇಕಾಗಿದೆ. ಸರ್ಕಾರ ಈ ಪ್ರಕರಣವನ್ನು ರಾಜಕೀಯಗೊಳಿಸುತ್ತಿದೆ. ಇನ್ನೆರಡು ತಿಂಗಳಲ್ಲಿ ವಾರ್ಷಿಕ ಪರೀಕ್ಷೆ ಎದುರಾಗಲಿವೆ. ಅಲ್ಲಿಯವರೆಗೂ ಯಥಾಸ್ಥಿತಿ ಕಾಪಾಡಿಕೊಂಡು ಹೋಗುವಂತೆ ಆದೇಶಿಸಬೇಕು' ಎಂದರು. ರಾಜಕೀಯಗೊಳಿಸುವ ಪದವನ್ನು ಬಲವಾಗಿ ನಾವದಗಿ ಆಕ್ಷೇಪಿಸಿದರು.

**ದೇವರ ನಾಡಿನ ವಕೀಲರು:** ಮಧ್ಯಾಹ್ನದ ಕಲಾಪ ಮುಕ್ತಾಯಗೊಳಿಸುವ ಮುನ್ನ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಿ, 'ಈ ಪ್ರಕರಣದಲ್ಲಿ ನಾನೂ ವಾದ ಮಂಡಿಸಲಿದ್ದೇನೆ' ಎಂದು ವಕೀಲ ಹಾಗೂ ಅಂಕಣಕಾರ ಕಾಳೇಶ್ವರಮ್ ರಾಜ್ ಕೋರಿದರು.

'ನೀವು ಎಲ್ಲಿಂದ ಮಾತನಾಡುತ್ತಿದ್ದೀರಿ' ಎಂದು ನ್ಯಾಯಮೂರ್ತಿಗಳು ಕಾಳೇಶ್ವರಮ್ ಅವರನ್ನು ಪ್ರಶ್ನಿಸಿದರು. ಆಗ ಅವರು, 'ನಾನು ಕೇರಳದಿಂದ ಮಾತನಾಡುತ್ತಿದ್ದೇನೆ' ಎಂದರು. 'ಓಹ್ ನೀವು ದೇವರ ನಾಡಿನವರು. ತಾವು ಅವಶ್ಯವಾಗಿ ಮಧ್ಯಂತರ ಅರ್ಜಿ ಸಲ್ಲಿಸಿ ವಾದ ಮಂಡಿಸಬಹುದು' ಎಂದು ನ್ಯಾಯಮೂರ್ತಿಗಳು ಅನುಮತಿ ನೀಡಿದರು.

**ಫುಲ್ ರಷ್..!** ವಿಚಾರಣೆಯನ್ನು ವಿಡಿಯೊ ಕಾನ್ಫರೆನ್ಸ್ ಮುಖಾಂತರ ವೀಕ್ಷಿಸುತ್ತಿದ್ದವರ ಸಂಖ್ಯೆ ದಿನವಿಡೀ 500 ಇತ್ತು. ಈ ಸಂಖ್ಯೆ ಹೆಚ್ಚಾಗಲು ಅವಕಾಶ ನೀಡದ ಕೋರ್ಟ್ ಆಫೀಸರ್, ಮಧ್ಯದಲ್ಲಿ ಸೇರ್ಪಡೆಯಾಗಲು ಪ್ರಯತ್ನಿಸುತ್ತಿದ್ದವರ ಮನವಿಯನ್ನು ತಿರಸ್ಕರಿಸುತ್ತಿದ್ದರು. ಒಂದು ಹಂತದಲ್ಲಿ ಅಡ್ವೊಕೇಟ್ ಜನರಲ್ ಅವರಿಗೇ ಆನ್‌ಲೈನ್‌ಲ್ಲಿ ಅವಕಾಶ ಇಲ್ಲದಂತಾಗಿತ್ತು.

### ಈ ಕುರಾನ್ ಅಧಿಕೃತವೇ?

ವಾದದ ಮಧ್ಯೆ ದೇವದತ್ತ ಕಾಮತ್ ಕುರಾನ್ ಸಾಲುಗಳನ್ನು ಉಲ್ಲೇಖಿಸಿದರು. ಮೊದಲಿಗೆ 'ಕುರಾನ್' ಎಂದು ಸಂಬೋಧಿಸುತ್ತಿದ್ದಂತೆಯೇ ನ್ಯಾಯಮೂರ್ತಿಗಳು, 'ಪವಿತ್ರ ಕುರಾನ್' ಎಂದು ತಿದ್ದಿದರು. ಹೈಕೋರ್ಟ್ ಗ್ರಂಥಾಲಯದಲ್ಲಿರುವ ಕುರಾನ್ ಪ್ರತಿ ತರಿಸುವಂತೆ ಕೋರ್ಟ್ ಅಧಿಕಾರಿಗೆ ಆದೇಶಿಸಿದರು. ಕುರಾನ್ ಪ್ರತಿಯನ್ನು ಕೋರ್ಟ್ ಅಧಿಕಾರಿ ರಾಘವೇಂದ್ರ ನ್ಯಾಯಮೂರ್ತಿಗಳಿಗೆ ನೀಡಿದರು.

ಕೃತಿ ಪರಿಶೀಲಿಸಿದ ನ್ಯಾಯಮೂರ್ತಿಗಳು, 'ಇದು ಮಂಗಳೂರಿನ ಶಾಂತಿ ಪ್ರಕಾಶನ ಪ್ರಕಟಿಸಿರುವ ಕನ್ನಡ ಅನುವಾದದ ಕುರಾನ್. ಇದು ಸರ್ವಸಮ್ಮತ ಮತ್ತು ಅಧಿಕೃತ ಎಂದು ಒಪ್ಪಬಹುದೇ' ಎಂದು ಕಾಮತ್ ಮತ್ತು ನಾವದಗಿ ಅವರನ್ನು ಪ್ರಶ್ನಿಸಿದರು. ಈ ಪ್ರಶ್ನೆಗೆ ಇಬ್ಬರೂ ತಬ್ಬಿಬ್ಬಾದರು!. ನಂತರ, 'ಅಧಿಕೃತ ಎಂದು ಒಪ್ಪಬಹುದು' ಎಂದರು. ಇಬ್ಬರ ಸಮ್ಮತಿ ನಂತರ, ರವೀಂದ್ರನಾಥ್ ಟ್ಯಾಗೋರ್‌ರ 'ಗೀತಾಂಜಲಿ'ಯ ಅನುವಾದದ ಪ್ರಸಂಗವೊಂದನ್ನು ಉದ್ಧರಿಸಿದ ನ್ಯಾಯಮೂರ್ತಿಗಳು ಕುರಾನ್ ಭಾಗಗಳ ವಿಶ್ಲೇಷಣೆಗೆ ಅವಕಾಶ ಕೊಟ್ಟರು. 'ಮಹಿಳೆಯ ಅಂಗಾಂಗಗಳು ಕಾಣದಂತೆ ಉಡುಪು ಧರಿಸುವಂತೆ ಮತ್ತು ಅಪರಿಚಿತರಿಗೆ ಹೆಣ್ಣಿನ ಮುಖ ಹಾಗೂ ಕೈಗಳ ಹೊರತು ದೇಹದ ಮತ್ತಾವ ಅಂಗವೂ ಕಾಣಿಸದಂತೆ ಮಹಿಳೆ ಉಡುಪು ಧರಿಸಬೇಕೆಂದು ಕುರಾನ್‌ನಲ್ಲಿ ತಿಳಿಸಲಾಗಿದೆ' ಎಂದು ಕಾಮತ್ ವಿವರಿಸಿದರು.

# 'ಸಮವಸ್ತ್ರ ಪಾಲನೆಗೆ ನಕಾರ; ಪ್ರತ್ಯೇಕತೆ ಬೀಜ ಸೃಷ್ಟಿಗೆ ನಾಂದಿ'

**ಚಿಕ್ಕಮಗಳೂರು:** 'ಶಾಲೆಯಲ್ಲಿ ಸಮವಸ್ತ್ರ ಇರಬೇಕು. ಅದನ್ನು ಪಾಲಿಸಲ್ಲ ಎಂದರೆ ಪ್ರತ್ಯೇಕತೆಯ ಬೀಜ ಅಲ್ಲಿಂದಲೇ ಹುಟ್ಟಲು ಶುರುವಾಗುತ್ತದೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಪ್ರತಿಕ್ರಿಯಿಸಿದರು.

ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನಾನು ಬೇರೆ, ನೀನು ಬೇರೆ ಎನ್ನುವುದು ಜಾತ್ಯತೀತತೆಯೂ ಅಲ್ಲ, ಸರ್ವಧರ್ಮ ಸಮಭಾವವೂ ಅಲ್ಲ. ಇದೆಲ್ಲವನ್ನೂ ತಿಳಿ ಹೇಳಬೇಕಾದ ರಾಜಕೀಯ ನಾಯಕರು, ಪಕ್ಷಗಳು ಪ್ರತ್ಯೇಕತಾವಾದವನ್ನು ಗೊಬ್ಬರ, ನೀರು ಹಾಕಿ ಬೆಳೆಸಿ ವೋಟಿನ ಬೆಳೆ ತೆಗೆಯುವ ಸಂಚು ಮಾಡುತ್ತಿದ್ದಾರೆ. ಅದರಿಂದಾಗಿ ಹಿಜಾಬ್ ವಿವಾದ ರಾಜ್ಯದ ಉದ್ದಗಲಕ್ಕೂ ವ್ಯಾಪಿಸುತ್ತಿದೆ' ಎಂದರು.

# ಹಿಜಾಬ್ ವಿವಾದದಿಂದ ಕಾಂಗ್ರೆಸ್ ಸರ್ವನಾಶ- ಈಶ್ವರಪ್ಪ

**ಮೈಸೂರು:** 'ಹಿಜಾಬ್ ವಿವಾದದಿಂದಾಗಿಯೇ ರಾಜ್ಯದಲ್ಲಿ ಕಾಂಗ್ರೆಸ್ ಸರ್ವನಾಶವಾಗುವುದು ಖಚಿತ. ಉಡುಪಿಯಿಂದಲೇ ಅದು ಆರಂಭವಾಗಿದೆ' ಎಂದು ಗ್ರಾಮೀಣಾಭಿವೃದ್ಧಿ ಇಲಾಖೆ ಸಚಿವ ಕೆ.ಎಸ್.ಈಶ್ವರಪ್ಪ ತಿಳಿಸಿದರು.

'ವೀರಶೈವ- ಲಿಂಗಾಯತ ಧರ್ಮ, ಮತಾಂತರ, ಗೋಹತ್ಯೆಯನ್ನು ರಾಜಕೀಯ ವಿಚಾರವಾಗಿಸಿಕೊಂಡಿದ್ದ ಕಾಂಗ್ರೆಸ್, ಮುಸ್ಲಿಮ್ ವೋಟ್ ಬ್ಯಾಂಕ್‌ಗಾಗಿ ಹಿಜಾಬ್ ವಿವಾದವನ್ನು ಸೃಷ್ಟಿಸಿದೆ. ಆರು ವಿದ್ಯಾರ್ಥಿನಿಯರಿಗೆ ತಿಳಿವಳಿಕೆ ಹೇಳಿ ಸಮಸ್ಯೆ ಬಗೆಹರಿಸಬಹುದಿತ್ತು. ಹಿಂದೂ–ಮುಸ್ಲಿಮರನ್ನು ಒಡೆದಿದ್ದು ಕಾಂಗ್ರೆಸ್. ಅಪವಾದ ಮಾತ್ರ ಬಿಜೆಪಿ ಮೇಲೆ' ಎಂದು ಇಲ್ಲಿ ಮಂಗಳವಾರ ಹೇಳಿದರು.

'ಹಿಜಾಬ್ ಧರಿಸಿ ಅಧಿವೇಶನಕ್ಕೆ ಬರುವೆ' ಎಂಬ ಕಲಬುರಗಿ ಶಾಸಕಿ ಖನೀಜಾ ಫಾತಿಮಾ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಹಿಜಾಬ್ ಹಾಕಿಕೊಂಡು ಮೊದಲು ಮಸೀದಿಗೆ ಹೋಗಿ' ಎಂದರು.

ಉತ್ತರ ಪ್ರದೇಶ: ಮಹಿಳಾ ಮತಬ್ಯಾಂಕ್ ಗಟ್ಟಿಗೊಳಿಸಲು ಎಲ್ಲ ಪಕ್ಷಗಳ ಕಾರ್ಯತಂತ್ರ

# ಪ್ರಚಾರದ ಕೇಂದ್ರಕ್ಕೆ ಮಹಿಳೆ

**6.98 ಕೋಟಿ** ಮಹಿಳಾ ಮತದಾರರು

**8.04 ಕೋಟಿ** ಪುರುಷ ಮತದಾರರು

ಲಖನೌ (ಪಿಟಿಐ): ಉತ್ತರ ಪ್ರದೇಶದಲ್ಲಿ ಮಹಿಳಾ ಮತದಾರರ ಸಂಖ್ಯೆ ಹೆಚ್ಚುತ್ತಲೇ ಇದೆ. ಒಟ್ಟು ಜನಸಂಖ್ಯೆಯ ಸುಮಾರು ಅರ್ಧದಷ್ಟಿರುವ ಈ ವರ್ಗವನ್ನು ರಾಜಕೀಯ ಪಕ್ಷಗಳು ನೋಡುವ ದೃಷ್ಟಿ ಬದಲಾಗಿದೆ ಎಂಬುದಕ್ಕೆ ಈ ಬಾರಿಯ ವಿಧಾನಸಭಾ ಚುನಾವಣೆ ಸಾಕ್ಷಿಯಾಗಿದೆ.

ಉತ್ತರ ಪ್ರದೇಶದಲ್ಲಿ ಕಳೆದುಕೊಂಡಿರುವ ನೆಲೆಯನ್ನು ಪಡೆಯಲು ಯತ್ನಿಸುತ್ತಿರುವ ಕಾಂಗ್ರೆಸ್ ಪಕ್ಷವು, ಮಹಿಳೆಯರನ್ನು ತನ್ನ ಮತ ಬ್ಯಾಂಕ್ ಆಗಿಸುವ ಕಾರ್ಯತಂತ್ರ ರೂಪಿಸಿತು. ಶೇ 40ರಷ್ಟು ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಟಿಕೆಟ್ ನೀಡುವುದು ಈ ಕಾರ್ಯತಂತ್ರದ ಭಾಗ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರ ಚುನಾವಣಾ ಪ್ರಚಾರವು ಮಹಿಳಾ ಕೇಂದ್ರಿತವಾಗಿದೆ. ತಮ್ಮ ಟೀಕಾಕಾರರನ್ನು ಸುಮ್ಮನಿರಿಸಲು ಅವರು ಹಿಂದಿ ಸಿನಿಮಾ 'ದೀವಾರ್'ನ ಸಂಭಾಷಣೆಯ ತುಣುಕನ್ನೂ ಇತ್ತೀಚೆಗೆ ಹೇಳಿದ್ದರು. 'ಮೇರೆ ಪಾಸ್ ಬೆಹನ್ ಹೈ' (ನನ್ನ ಬಳಿ ಸಹೋದರಿ ಇದ್ದಾಳೆ) ಎಂದು ಪ್ರಿಯಾಂಕಾ ಹೇಳಿದ್ದರು.

ಪೌರತ್ವ ಕಾಯ್ದೆ ವಿರೋಧಿ ಹೋರಾಟದ ಸಂದರ್ಭದಲ್ಲಿ ಬಂಧನಕ್ಕೆ ಒಳಗಾಗಿದ್ದ ನಟಿ ಮತ್ತು ಸಾಮಾಜಿಕ ಹೋರಾಟಗಾರ್ತಿ ಸದಫ್ ಜಾಫರ್, ಉನ್ನಾವೊ ಅತ್ಯಾಚಾರ ಸಂತ್ರಸ್ತೆಯ ತಾಯಿ, ಗೌರವಧನ ಹೆಚ್ಚಳಕ್ಕೆ ಆಗ್ರಹಿಸಿ ಹೋರಾಡುತ್ತಿದ್ದ ಸಂದರ್ಭದಲ್ಲಿ ತಳಿಥಕ್ಕೆ ಒಳಗಾಗಿದ್ದ ಆಶಾ ಕಾರ್ಯಕರ್ತೆ ಪೂನಂ ಪಾಂಡೆ, ಪಂಚಾಯಿತಿ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಸುವ ವೇಳೆ ದೌರ್ಜನ್ಯಕ್ಕೆ ಒಳಗಾಗಿದ್ದ ರೀತು ಸಿಂಗ್ ಮುಂತಾದವರು ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯಲ್ಲಿ ಇದ್ದಾರೆ.

ಮಹಿಳಾ ಮತದಾರರನ್ನೇ ಕೇಂದ್ರವಾಗಿಸಿದ ರಾಜಕಾರಣವನ್ನು ಕಾಂಗ್ರೆಸ್ ಆರಂಭಿಸಿತು. ನಂತರ, ಬಿಜೆಪಿ ಕೂಡ ಇದೇ ದಾರಿ ಹಿಡಿಯಿತು. ಪ್ರಧಾನಿ ಮೋದಿ ಕಳೆದ ಡಿಸೆಂಬರ್‌ನಲ್ಲಿ ಉತ್ತರ ಪ್ರದೇಶದ ಸ್ವಸಹಾಯ ಗುಂಪುಗಳ ಬ್ಯಾಂಕ್ ಖಾತೆಗಳಿಗೆ ₹1,000 ಕೋಟಿ ವರ್ಗಾವಣೆ ಮಾಡಿದ್ದರು. ಇದರಿಂದ 16 ಲಕ್ಷ ಮಹಿಳೆಯರಿಗೆ ಅನುಕೂಲ ಆಗಿತ್ತು. ಪ್ರಯಾಗರಾಜ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಮಹಿಳೆಯರು ಭಾಗಿಯಾಗಿದ್ದರು.


ಉತ್ತರ ಪ್ರದೇಶದ ಮೀರಠ್‌ನಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಚುನಾವಣಾ ಪ್ರಚಾರ ನಡೆಸಿದರು. ಪಕ್ಷದ ನಾಯಕ ಸಚಿನ್ ಪೈಲಟ್ ಇದ್ದಾರೆ – ಪಿಟಿಐ ಚಿತ್ರ

ಮುಸ್ಲಿಂ (ಇಂಗ್ಲಿಷ್ ವರ್ಣಮಾಲೆಯ ಎಂ ಅಕ್ಷರ) ಮತ್ತು ಯಾದವ್ (ಇಂಗ್ಲಿಷ್ ವರ್ಣಮಾಲೆಯ ವೈ ಅಕ್ಷರ) ಜಾತಿ ಸಮೀಕರಣದ ಮೂಲಕ ಅಧಿಕಾರಕ್ಕೆ ಏರುವಲ್ಲಿ ಯಶಸ್ವಿಯಾಗಿದ್ದ ಎಸ್‌ಪಿ ಈ ಬಾರಿ 'ಎಂ', 'ವೈ'ಗೆ ಬೇರೆ ಅರ್ಥ ಕೊಟ್ಟಿದೆ. 'ಈಗಿನದ್ದು ಹೊಸ ಎಸ್‌ಪಿ. ಎಂ ಮತ್ತು ವೈ ಎಂದರೆ ಮಹಿಳೆ ಮತ್ತು ಯುವಜನ. ನಾವು ಎಲ್ಲವನ್ನೂ ವಿಸ್ತೃತ ನೆಲೆಯಲ್ಲಿ ನೋಡುತ್ತಿದ್ದೇವೆ. ಜಾತೀಯತೆಯ ಸಂಕೋಲೆಯಿಂದ ಬಂಧಿತರಾಗಿಲ್ಲ' ಎಂದು ಅಖಿಲೇಶ್ ಇತ್ತೀಚೆಗೆ ಹೇಳಿದ್ದರು.

ಮಹಿಳೆಯೇ ಮುಖ್ಯಸ್ಥೆಯಾಗಿರುವ ಬಿಎಸ್‌ಪಿ ಮಾತ್ರ ಈವರೆಗೆ ಮಹಿಳೆಯರನ್ನು ಕೇಂದ್ರೀಕರಿಸಿ ಕಾರ್ಯತಂತ್ರ ಹೆಣೆಯುವ ಪ್ರಯತ್ನ ಮಾಡಿಲ್ಲ. ಮತದಾರರ ಪಟ್ಟಿಯಲ್ಲಿ ಮಹಿಳೆಯರ ನೋಂದಣಿಯು ಈಗ ಹೆಚ್ಚಾಗಿದೆ. ಕಳೆದ ನವೆಂಬರ್‌ನಲ್ಲಿ ಪ್ರತಿ ಸಾವಿರ ಪುರುಷ ಮತದಾರರಿಗೆ 857 ಮಹಿಳಾ ಮತದಾರರಿದ್ದರು. ಡಿಸೆಂಬರ್ ಹೊತ್ತಿಗೆ 868ಕ್ಕೆ ಹೆಚ್ಚಿದೆ ಎಂದು ಚುನಾವಣಾ ಆಯೋಗವು ಹೇಳಿದೆ.

### 40 ಗರಿಷ್ಠ ಸಂಖ್ಯೆ

2017ರಲ್ಲಿ ಗರಿಷ್ಠ ಅಂದರೆ 40 ಮಹಿಳೆಯರು ವಿಧಾನಸಭೆಗೆ ಆಯ್ಕೆಯಾಗಿದ್ದರು. ಎಲ್ಲ ಪಕ್ಷಗಳಿಂದ ಕಣಕ್ಕೆ ಇಳಿದಿದ್ದ ಮಹಿಳೆಯರ ಒಟ್ಟು ಸಂಖ್ಯೆ 96 ಮಾತ್ರ ಆಗಿತ್ತು. ಬಿಜೆಪಿ ಮತ್ತು ಅಪ್ನಾದಳದಿಂದ 35 ಮಹಿಳೆಯರು ಗೆದ್ದಿದ್ದರು. ಬಿಎಸ್‌ಪಿ ಮತ್ತು ಕಾಂಗ್ರೆಸ್‌ನಿಂದ ತಲಾ ಇಬ್ಬರು, ಎಸ್‌ಪಿಯಿಂದ ಒಬ್ಬರು ಗೆದ್ದಿದ್ದರು.

2012ರ ಚುನಾವಣೆಯಲ್ಲಿ 35 ಮಹಿಳೆಯರು ಆಯ್ಕೆ ಆಗಿದ್ದರು.

1952ರಲ್ಲಿ ನಡೆದ ಮೊದಲ ವಿಧಾನಸಭಾ ಚುನಾವಣೆಯಲ್ಲಿ 20 ಮಹಿಳೆಯರು ಗೆದ್ದಿದ್ದರು. 1985ರಲ್ಲಿ 31, 1989ರಲ್ಲಿ 18 ಶಾಸಕಿಯರು ಆಯ್ಕೆಯಾಗಿದ್ದರು. 1991ರಲ್ಲಿ ಈ ಸಂಖ್ಯೆ ಗಣನೀಯವಾಗಿ ಕುಸಿಯಿತು. 10 ಮಹಿಳೆಯರು ಮಾತ್ರ ಗೆದ್ದಿದ್ದರು. 2007ರಲ್ಲಿ ಮಹಿಳೆಯೇ ಸದನದ ನಾಯಕಿ (ಮಾಯಾವತಿ) ಆಗಿದ್ದರು. ಆದರೆ, ಮಹಿಳಾ ಪ್ರಾತಿನಿಧ್ಯವು ಕನಿಷ್ಠ ಮಟ್ಟಕ್ಕೆ ಆ ಬಾರಿ ಕುಸಿದಿತ್ತು. ಮೂವರು ಮಹಿಳೆಯರು ಮಾತ್ರ ಸದನದಲ್ಲಿ ಇದ್ದರು.



ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಲಖನೌದಲ್ಲಿ ಮಂಗಳವಾರ ಪ್ರಣಾಳಿಕೆ ಬಿಡುಗಡೆ ಮಾಡಿದರು ಪಿಟಿಐ ಚಿತ್ರ

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಬಿಜೆಪಿ ಪ್ರಣಾಳಿಕೆ ಪ್ರಕಟ

# 'ಲವ್ ಜಿಹಾದ್'ಗೆ ಕನಿಷ್ಠ 10 ವರ್ಷ ಸಜೆ'

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಬಿಜೆಪಿ ಪ್ರಕಟಿಸಿರುವ ಪ್ರಣಾಳಿಕೆಯಲ್ಲಿ 'ಲವ್ ಜಿಹಾದ್' (ಮುಸ್ಲಿಂ ಯುವಕರು ಹುಸಿ ಭರವಸೆ ಕೊಟ್ಟು ಹಿಂದೂ ಯುವತಿಯರನ್ನು ಮದುವೆ ಆಗುವುದು) ವಿರುದ್ಧ ಕಠಿಣ ಕಾನೂನು, ರೈತರು, ಒಬಿಸಿ ಮತ್ತು ಮಹಿಳೆಯರಿಗೆ ವಿಶೇಷ ಕೊಡುಗೆಗಳು ಸೇರಿವೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು 'ಸಂಕಲ್ಪ ಪತ್ರ' ಎಂಬ ಹೆಸರಿನ ಪ್ರಣಾಳಿಕೆಯನ್ನು ಮಂಗಳವಾರ ಬಿಡುಗಡೆಗೊಳಿಸಿದರು. 'ಲವ್ ಜಿಹಾದ್'ನ ತಪ್ಪಿತಸ್ಥರಿಗೆ ಕನಿಷ್ಠ 10 ವರ್ಷ ಸಜೆ ಮತ್ತು ಒಂದು ಲಕ್ಷ ರೂಪಾಯಿ ದಂಡ ವಿಧಿಸುವ ಕಾಯ್ದೆ ರೂಪಿಸಲಾಗುವುದು ಎಂದು ಪ್ರಣಾಳಿಕೆಯಲ್ಲಿ ಹೇಳಲಾಗಿದೆ.

ಉತ್ತರ ಪ್ರದೇಶದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರವು 'ಲವ್ ಜಿಹಾದ್' ನಿಯಂತ್ರಿಸಲು ಈಗಾಗಲೇ ಕಾಯ್ದೆ ರೂಪಿಸಿದೆ. 'ಲವ್ ಜಿಹಾದ್' ಅನ್ನು ಜಾಮೀನುರಹಿತ ಅಪರಾಧ ಎಂದು ಈ ಕಾಯ್ದೆ ಪರಿಗಣಿಸಿದೆ. ಜತೆಗೆ, ಐದು ವರ್ಷ ಸಜೆ ಮತ್ತು ದಂಡದ ಅವಕಾಶವೂ ಇದೆ. ಮತಾಂತರದ ಬಳಿಕ ಮದುವೆ ಮತ್ತು ಹುಸಿ ಭರವಸೆ ಕೊಟ್ಟು ಮದುವೆ ಎರಡಕ್ಕೂ ಈ ಕಾಯ್ದೆ ಅನ್ವಯ ಆಗುತ್ತದೆ.

### ಪ್ರಣಾಳಿಕೆ ಅಂಶಗಳು

- ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಉಚಿತ ಸ್ಕೂಟರ್ ವಿತರಣೆ
- ವಿದ್ಯಾರ್ಥಿಗಳಿಗೆ ಎರಡು ಕೋಟಿ ಟ್ಯಾಬ್ಲೆಟ್, ಸ್ಮಾರ್ಟ್‌ಫೋನ್ ನೀಡುವ ಯೋಜನೆ
- ಎಲ್ಲ ಜಿಲ್ಲೆಗಳಲ್ಲಿಯೂ ಸುಸಜ್ಜಿತ ಸರ್ಕಾರಿ ಆಸ್ಪತ್ರೆ ಸ್ಥಾಪನೆ

ಬಿಜೆಪಿಯ ವಿರುದ್ಧ ಆಕ್ರೋಶಗೊಂಡಿರುವ ರೈತರನ್ನು ಸಾಂತ್ವನಗೊಳಿಸುವ ಭರವಸೆಗಳೂ ಪ್ರಣಾಳಿಕೆಯಲ್ಲಿ ಇವೆ. ಕಬ್ಬು ಪೂರೈಕೆಯಾಗಿ 14 ದಿನಗಳೊಳಗೆ ಹಣ ಪಾವತಿಯ ವ್ಯವಸ್ಥೆ ಜಾರಿಗೆ ತರಲಾಗುವುದು ಎಂದು ಪ್ರಣಾಳಿಕೆಯಲ್ಲಿ ಹೇಳಲಾಗಿದೆ. ರೈತರ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಮಾನ್ಯತೆ ನೀಡುವ ಕಾಯ್ದೆ ತರುವುದಾಗಿ ಕೇಂದ್ರ ಸರ್ಕಾರ ಭರವಸೆ ಕೊಟ್ಟಿದ್ದರೂ ಈವರೆಗೆ ಅದು ಈಡೇರಿಲ್ಲ.

ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀಡುತ್ತಿರುವ ಕಿಸಾನ್ ಸಮ್ಮಾನ್ ನಿಧಿಯನ್ನು ದುಪ್ಪಟ್ಟು ಮಾಡಲಾಗುವುದು. ನೀರಾವರಿಗೆ ವಿದ್ಯುತ್ ಅನ್ನು ಮುಂದಿನ ಐದು ವರ್ಷ ಉಚಿತವಾಗಿ ನೀಡಲಾಗುವುದು ಎಂಬ ಭರವಸೆಗಳನ್ನೂ ನೀಡಲಾಗಿದೆ.

ರಾಜ್‌ಭರ್ ಸಮುದಾಯದ ರಾಜ ಸುಹೇಲ್‌ದೇವ್ ಅವರ ಹೆಸರಿನಲ್ಲಿ ಭವ್ಯ ಸ್ಮಾರಕ ನಿರ್ಮಿಸಲಾಗುವುದು ಎಂದು ಪ್ರಣಾಳಿಕೆಯಲ್ಲಿ ಹೇಳಲಾಗಿದೆ. ಒಬಿಸಿಯ ರಾಜ್‌ಭರ್ ಸಮುದಾಯವನ್ನು ಓಲೈಸುವುದು ಇದರ ಉದ್ದೇಶ. ಈ ಹಿಂದೆ, ಬಿಜೆಪಿ ಜತೆಗೆ ಇದ್ದ ಓಂ ಪ್ರಕಾಶ್ ರಾಜ್‌ಭರ್ ಅವರು ಈಗ ಸಮಾಜವಾದಿ ಪಕ್ಷದ ಜತೆಗೆ ಮೈತ್ರಿ ಮಾಡಿಕೊಂಡಿದ್ದಾರೆ.

ರಾಜ್ಯದ ಪ್ರತಿಯೊಂದು ವಿಭಾಗದಲ್ಲಿಯೂ ಕನಿಷ್ಠ ಒಂದು ವಿಶ್ವವಿದ್ಯಾಲಯ ಇರುವಂತೆ ನೋಡಿಕೊಳ್ಳಲಾಗುವುದು. ಪ್ರತಿ ಕುಟುಂಬದಲ್ಲಿಯೂ ಕನಿಷ್ಠ ಒಬ್ಬರಿಗೆ ಉದ್ಯೋಗ ನೀಡುವ ಭರವಸೆಯನ್ನೂ ನೀಡಲಾಗಿದೆ.

ಲತಾ ಮಂಗೇಶ್ಕರ್ ಹೆಸರಿನಲ್ಲಿ ಅಕಾಡೆಮಿಯೊಂದನ್ನು ಸ್ಥಾಪಿಸಲಾಗುವುದು. ಸರ್ಕಾರಿ ಉದ್ಯೋಗದಲ್ಲಿರುವ ಮಹಿಳೆಯರ ಸಂಖ್ಯೆಯನ್ನು ದುಪ್ಪಟ್ಟುಗೊಳಿಸಲಾಗುವುದು ಎಂದು ಹೇಳಲಾಗಿದೆ.

ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಪ್ರಭಾವಿಯಾಗಿರುವ ಜಾಟ್ ಸಮುದಾಯವು ಬಿಜೆಪಿ ವಿರುದ್ಧ ತಿರುಗಿ ಬಿದ್ದಿದೆ ಎಂಬ ಭಾವನೆ ಇದೆ. ಹಾಗಾಗಿಯೇ ರೈತರು ಮತ್ತು ಒಬಿಸಿಯ ಕಡೆಗೆ ಪ್ರಣಾಳಿಕೆಯು ಗಮನ ಕೇಂದ್ರೀಕರಿಸಿದೆ. ರಾಜ್ಯದ ಪಶ್ಚಿಮ ಭಾಗದಲ್ಲಿ ಇದೇ 10 ಮತ್ತು 14ರಂದು ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ.



## ಫೆ.11ರಂದು ಕಿರಿಯ ವಿಜ್ಞಾನಿ ಗೀತಾಂಜಲಿ ರಾವ್ ಸಂವಾದ



ಚೆನ್ನೈ: ಕೋಲ್ಕತ್ತ ಮತ್ತು ಮುಂಬೈನಲ್ಲಿರುವ ಅಮೆರಿಕ ರಾಯಭಾರ ಕಚೇರಿಗಳ ಸಮನ್ವಯದಲ್ಲಿ ಫೆ.11ರಂದು ಆಯೋಜಿಸಿರುವ ಅಂತರರಾಷ್ಟ್ರೀಯ ಮಹಿಳೆಯರ ದಿನಾಚರಣೆಯಲ್ಲಿ ಭಾರತ ಮೂಲದ ಅಮೆರಿಕನ್ ವಿಜ್ಞಾನಿ ಗೀತಾಂಜಲಿ ರಾವ್ ಅವರು ಭಾಗವಹಿಸಲಿದ್ದಾರೆ. 'ವಾಟರ್ ಗರ್ಲ್ ಆಫ್ ಇಂಡಿಯಾ' ಎಂದೇ ಹೆಸರಾಗಿರುವ ಬೆಂಗಳೂರಿನ ಪರಿಸರ ಹೋರಾಟಗಾರ್ತಿ ಗರ್ವಿತಾ ಗುಲ್ಹಾಟಿ ಅವರು ಗೀತಾಂಜಲಿ ಅವರ ಸಂದರ್ಶನ ನಡೆಸಲಿದ್ದಾರೆ.

ಎಸ್‌ಟಿಇಎಂ ಪ್ರವರ್ತಕಿಯೂ ಆಗಿರುವ ಗೀತಾಂಜಲಿ ಅವರು ಈ ಸಂವಾದದಲ್ಲಿ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತದ (ಎಸ್‌ಟಿಇಎಂ) ಬಗ್ಗೆ ಮಾತನಾಡಲಿದ್ದಾರೆ. ಈ ವರ್ಚುವಲ್ ಕಾರ್ಯಕ್ರಮದಲ್ಲಿ ಭಾಗವಹಿಸಲು ಉಚಿತವಾಗಿ ನೊಂದಾಯಿಸಿಕೊಳ್ಳಲು ಈ ಲಿಂಕ್ ಬಳಸಬಹುದು.

https://statedept zoomgov.com/webinar/registerWN_3SIL5VmtSBGCeopr4RgfLw

ಬಿಜೆಪಿ, ಶಿರೋಮಣಿ ಅಕಾಲಿದಳ (ಸಂಯುಕ್ತ), ಪಿಎಲ್‌ಸಿ ಪಕ್ಷಗಳ ಮೈತ್ರಿಕೂಟದಿಂದ ಪ್ರಕಟ

# ಪಂಜಾಬ್: 11 ಅಂಶಗಳ ಸಂಕಲ್ಪಸೂತ್ರ

ಚಂಡೀಗಢ (ಪಿಟಿಐ): ಪಂಜಾಬ್ ವಿಧಾನಸಭಾ ಚುನಾವಣೆಗೆ ಬಿಜೆಪಿ-ಅಕಾಲಿದಳ (ಸಂಯುಕ್ತ) ಹಾಗೂ ಪಂಜಾಬ್ ಲೋಕಕಾಂಗ್ರೆಸ್ (ಪಿಎಲ್‌ಸಿ) ಪಕ್ಷಗಳು 11 ಅಂಶಗಳ 'ಸಂಕಲ್ಪ ಸೂತ್ರ'ವನ್ನು ಮಂಗಳವಾರ ಪ್ರಕಟಿಸಿವೆ.

ಕೇಂದ್ರ ಸಚಿವ ಹಾಗೂ ಪಂಜಾಬ್ ಉಸ್ತುವಾರಿ ಗಜೇಂದ್ರ ಸಿಂಗ್ ಶೇಖಾವತ್, ಅಕಾಲಿದಳ (ಸಂಯುಕ್ತ) ಮುಖ್ಯಸ್ಥ ಸುಖದೇವ್ ಸಿಂಗ್ ಧಿಂಡ್ಸಾ, ಬಿಜೆಪಿ ಮುಖಂಡರಾದ ಹರ್ಜಿತ್ ಸಿಂಗ್ ಘೆವಾಲ್ ಮತ್ತು ಸುಭಾಷ್ ಶರ್ಮಾ ಅವರು ಪ್ರಣಾಳಿಕೆ ಬಿಡುಗಡೆ ಮಾಡಿದರು.

ಪಿಎಲ್‌ಸಿ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಸುಸ್ಥಿರ ಕೃಷಿ ಹಾಗೂ ನೈಸರ್ಗಿಕ ಕೃಷಿಗೆ ₹5 ಸಾವಿರ ಕೋಟಿ ಬಜೆಟ್ ಮೀಸಲಿರಿಸುವ ಪ್ರಸ್ತಾಪ ಮಾಡಿದೆ.

ಸೌರ ಕೊಳವೆಬಾವಿಗಳು ಮತ್ತು ಕಾಲುವೆಗಳ ಮೇಲೆ ಸೌರ ಫಲಕಗಳನ್ನು ಅಳವಡಿಸಿಕೊಳ್ಳಲು ರೈತರಿಗೆ ಸಬ್ಸಿಡಿ ನೀಡುವುದಾಗಿ ಮಾತು ಕೊಟ್ಟಿದೆ. ಮೈತ್ರಿಕೂಟ ಅಧಿಕಾರಕ್ಕೆ ಬಂದರೆ, ರಾಜ್ಯದ ಸಾಂಪ್ರದಾಯಿಕ ಧಾನ್ಯಗಳನ್ನು ಸಂರಕ್ಷಿಸುವ ಉದ್ದೇಶದಿಂದ ವಿವಿಧ ಕಡೆಗಳಲ್ಲಿ ಬಿತ್ತನೆ ಬೀಜ ಬ್ಯಾಂಕ್ ತಲೆ ಎತ್ತಲಿವೆ ಎಂದು ಪ್ರಣಾಳಿಕೆಯಲ್ಲಿ ಉಲ್ಲೇಖಿಸಿದೆ.

### ಪ್ರಮುಖ ಭರವಸೆಗಳು

- ಗ್ರಾಮೀಣ ಭಾಗಗಳಲ್ಲಿ ಕ್ರೀಡೆಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ, ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆದ್ದ ರಾಜ್ಯದ ಕ್ರೀಡಾಪಟುಗಳಿಗೆ ಹರಿಯಾಣ ಮಾದರಿಯಲ್ಲಿ ನಗದು ಪುರಸ್ಕಾರ
- ಬಾಕಿಯಿರುವ ನೀರಾವರಿ ಯೋಜನೆ ಪೂರ್ಣ ಹಾಗೂ ಪ್ರಧಾನಮಂತ್ರಿ ಕಿಸಾನ್ ಸಂಚಯ ಯೋಜನೆಯಡಿ ಹೊಸ ಯೋಜನೆ ಆರಂಭ
- ರಾಜ್ಯದಲ್ಲಿ ನೀರಿನ ಕೊರತೆ ನೀಗಿಸಲು ಉಚಿತವಾಗಿ ಮಳೆನೀರು ಸಂಗ್ರಹ ಘಟಕ ಸ್ಥಾಪನೆ. ನೀರಿನ ಸಂರಕ್ಷಣೆಗೆ ಸಹಾಯ ಮಾಡುವ ಸ್ವಯಂಚಾಲಿತ ಮತ್ತು ಸ್ಮಾರ್ಟ್ ನೀರಾವರಿ ವ್ಯವಸ್ಥೆಗಳಿಗೆ ಸಹಾಯಧನ
- ಹೈನುಗಾರಿಕೆ, ಕೋಳಿ ಸಾಕಾಣಿಕೆ ಸೇರಿದಂತೆ ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ಉತ್ತೇಜನ; ಹೊಸ ಶೀತಲೀಕರಣ ಘಟಕಗಳ ಸ್ಥಾಪನೆ

ಸಮಾಜವಾದಿ ಪಕ್ಷದ ಪರವಾಗಿ ಟಿಎಂಸಿ ಮುಖ್ಯಸ್ಥೆ ಮಮತಾ ಪ್ರಚಾರ

# 'ಉತ್ತರ ಪ್ರದೇಶದಲ್ಲಿ ಈ ಬಾರಿ ಎಸ್‌ಪಿ ಸರ್ಕಾರ'

ಲಖನೌ (ಪಿಟಿಐ): 'ಉತ್ತರ ಪ್ರದೇಶದಲ್ಲಿ ಈ ಬಾರಿ ಸಮಾಜವಾದಿ ಪಕ್ಷದ ಸರ್ಕಾರ ಬರಲಿದೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮತ್ತು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಹೇಳಿದ್ದಾರೆ.

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದ ಪರವಾಗಿ ಪ್ರಚಾರ ನಡೆಸಲು ಅವರು ಲಖನೌಗೆ ಮಂಗಳವಾರ ಬಂದಿಳಿದಿದ್ದಾರೆ. ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು, ಮಮತಾ ಅವರನ್ನು ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು. ನಂತರ ಇಬ್ಬರೂ ಜಂಟಿ ಸುದ್ದಿಗೋಷ್ಠಿ ನಡೆಸಿದರು. ಮಮತಾ ಅವರು ಎಸ್‌ಪಿ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಿದರು.

'ಪಶ್ಚಿಮ ಬಂಗಾಳದಲ್ಲಿ ನಾವು ಆಟ ಶುರು ಮಾಡಿದ್ದೆವು (ಖೇಲಾ ಹೋಬೆ). ಇಲ್ಲಿಯೂ ಆಟ ಶುರುವಾಗಿದೆ' ಎಂದು ಮಮತಾ ತಮ್ಮ ಚುನಾವಣಾ ಪ್ರಚಾರದ ಘೋಷಣೆಯನ್ನು ಮೊಳಗಿಸಿದರು. 'ನೋಡಿ, ಯೋಗೀಜಿ ಅವರು ಅಧಿಕಾರಕ್ಕೆ ಬಂದರೆ ಅವರು ನಿಮ್ಮನ್ನು ರಾಜಕೀಯವಾಗಿ ಮುಗಿಸಿಬಿಡುತ್ತಾರೆ. ರಾಜ್ಯದ ಆರ್ಥಿಕತೆಯನ್ನೂ ಹಾಳು ಮಾಡುತ್ತಾರೆ. ಅವರು ಈ ಬಾರಿ ಮನೆಗೆ ಹೋಗುತ್ತಾರೆ ಎಂಬುದು ಅವರಿಗೇ ಗೊತ್ತಿಲ್ಲ. ಅವರು ಮನೆಗೆ ಹೋಗಲು ಬಯಸಿದ್ದಾರೆ, ಅವರು ಹೋಗಲು ನೀವು (ಮತದಾರರು) ಅನುವು ಮಾಡಿಕೊಡಿ' ಎಂದು ಮಮತಾ ಕರೆ ನೀಡಿದ್ದಾರೆ.


ಲಖನೌನಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಮತಾ ಬ್ಯಾನರ್ಜಿ ಮತ್ತು ಅಖಿಲೇಶ್ ಯಾದವ್ ಭಾಗವಹಿಸಿದ್ದರು –ಪಿಟಿಐ ಚಿತ್ರ

'ಬಿಜೆಪಿ ಚುನಾವಣೆ ಸಂದರ್ಭದಲ್ಲಿ ಎಲ್ಲೆಡೆಯೂ ಜಾತಿ, ಮತಗಳ ಹೆಸರಿನಲ್ಲಿ ಮತದಾರರನ್ನು ವಿಭಜಿಸುತ್ತದೆ. ನಾನು ಅವರ ಚುನಾವಣೆಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇನೆ. ನಾನು ಏಳು ಬಾರಿ ಸಂಸದೆಯಾಗಿದ್ದೆ ಮತ್ತು ಮೂರು ಅವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದೇನೆ. ಭಾರತವನ್ನೂ ನಾನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೇನೆ. ಈ ಬಾರಿ ಉತ್ತರ ಪ್ರದೇಶದಲ್ಲಿ ಜಾತಿಗಳ ಹೆಸರಿನಲ್ಲಿ ಮತಗಳು ವಿಭಜನೆಯಾಗುವುದಿಲ್ಲ' ಎಂದು ಅವರು ಹೇಳಿದ್ದಾರೆ.

> **ಬಿಜೆಪಿಯನ್ನು ಅಧಿಕಾರದಿಂದ ಕಿತ್ತೊಗೆಯಬೇಕು. ಪಶ್ಚಿಮ ಬಂಗಾಳದಲ್ಲಿ ಇದು ಸಾಧ್ಯವಾಗುವುದಾದರೆ, ಉತ್ತರ ಪ್ರದೇಶದಲ್ಲೂ ಸಾಧ್ಯವಾಗುತ್ತದೆ**
> **ಮಮತಾ ಬ್ಯಾನರ್ಜಿ**
> ಪಶ್ಚಿಮ ಬಂಗಾಳ ಮುಖ್ಯಮಂತ್ರಿ

'ಉತ್ತರ ಪ್ರದೇಶದಲ್ಲಿ ಈಗ ನೇರಾನೇರ ಸ್ಪರ್ಧೆ ಇರುವುದು ಸಮಾಜವಾದಿ ಪಕ್ಷ ಮತ್ತು ಬಿಜೆಪಿ ಮಧ್ಯೆ ಮಾತ್ರ. ಈ ಚುನಾವಣೆಯಲ್ಲಿ ಸಮಾಜವಾದಿ ಪಕ್ಷವೇ ಗೆಲ್ಲಲಿದೆ. 300ಕ್ಕೂ ಹೆಚ್ಚು ಸ್ಥಾನಗಳಲ್ಲಿ ಆರಿಸಿಬರಲಿದೆ' ಎಂದಿದ್ದಾರೆ.

### ಬಹಿರಂಗ ಪ್ರಚಾರ ಅಂತ್ಯ

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಮೊದಲ ಹಂತದಲ್ಲಿ ಮತದಾನ ನಡೆಯಲಿರುವ 58 ಕ್ಷೇತ್ರಗಳಲ್ಲಿ ಮಂಗಳವಾರ ಸಂಜೆ 6ಕ್ಕೆ ಬಹಿರಂಗ ಪ್ರಚಾರ ಅಂತ್ಯವಾಗಿದೆ. ಉತ್ತರ ಪ್ರದೇಶದ ಪಶ್ಚಿಮ ಭಾಗದ 11 ಜಿಲ್ಲೆಗಳಲ್ಲಿ ಮೊದಲ ಹಂತದ ಮತದಾನ ನಡೆಯಲಿದೆ. ಇಲ್ಲಿ ಬಹಿರಂಗ ಪ್ರಚಾರಕ್ಕೆ ಕೊನೆಯ ದಿನವಾಗಿದ್ದ ಮಂಗಳವಾರ ಬಿಜೆಪಿ, ಸಮಾಜವಾದಿ ಪಕ್ಷ–ಆರ್‌ಎಲ್‌ಡಿ ಭಾರಿ ಪ್ರಚಾರ ನಡೆಸಿವೆ.

ಈ ಕ್ಷೇತ್ರಗಳಲ್ಲಿ ಫೆಬ್ರುವರಿ 10ರಂದು ಮತದಾನ ನಡೆಯಲಿದೆ.



## ನಗರದ ಬಡವರಿಗೆ ಉದ್ಯೋಗ ಖಾತರಿ

ಲಖನೌ (ಪಿಟಿಐ): ನರೇಗಾ ಯೋಜನೆಯ ಮಾದರಿಯಲ್ಲಿ 'ನಗರದ ಬಡವರಿಗೆ ಉದ್ಯೋಗ ಖಾತರಿ ಯೋಜನೆ' ಜಾರಿಗೊಳಿಸುವ ಭರವಸೆಯನ್ನು ಸಮಾಜವಾದಿ ಪಕ್ಷ (ಎಸ್‌ಪಿ) ನೀಡಿದೆ. ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಮಂಗಳವಾರ ಪಕ್ಷದ ಪ್ರಣಾಳಿಕೆಯನ್ನು ಬಿಡುಗಡೆ ಮಾಡಲಾಗಿದ್ದು, ಸರ್ಕಾರಿ ನೌಕರಿಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ಭರವಸೆಯನ್ನು ನೀಡಿದೆ.

ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಮಾತನಾಡಿ, 'ಉತ್ತರ ಪ್ರದೇಶವನ್ನು ಮುಂದಿನ ದಿನಗಳಲ್ಲಿ ಸಮೃದ್ಧ, ಅಭಿವೃದ್ಧಿಯ ಹಾದಿಯಲ್ಲಿ ಕೊಂಡೊಯ್ಯುವ ಉದ್ದೇಶವನ್ನು ಪ್ರಣಾಳಿಕೆ ಹೊಂದಿದೆ' ಎಂದರು.

ರಾಷ್ಟ್ರಪತಿಯವರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ: ಪ್ರಧಾನಿಯವರ ಉತ್ತರಕ್ಕೆ ಆಕ್ಷೇಪ

# ಮೋದಿ ಭಾಷಣ ಕಾಂಗ್ರೆಸ್ ಟೀಕೆಗೆ ಸೀಮಿತ: ಖರ್ಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನಲ್ಲಿ ತಾವು ಎತ್ತಿರುವ ಪ್ರಶ್ನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರಿಸಿಯೇ ಇಲ್ಲ. ಅವರು ಕಾಂಗ್ರೆಸ್ ಪಕ್ಷ ಮತ್ತು ಜವಾಹರ ಲಾಲ್ ನೆಹರೂ ಮೇಲೆ ವಾಗ್ದಾಳಿ ನಡೆಸಿದರು. ಏಕೆಂದರೆ, ಕಾಂಗ್ರೆಸ್ ಪಕ್ಷವು ಸತ್ಯ ಹೇಳುತ್ತಿದೆ ಎಂಬ ಭಯ ಮೋದಿ ಅವರಿಗೆ ಇದೆ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹೇಳಿದ್ದಾರೆ.

ರಾಷ್ಟ್ರಪತಿಯವರ ಭಾಷಣದ ವಂದನಾ ನಿರ್ಣಯಕ್ಕೆ ಪ್ರಧಾನಿಯವರ ಉತ್ತರದಲ್ಲಿ ಹಿಂದಿನ ವರ್ಷ ಸರ್ಕಾರ ಮಾಡಿದ ಸಾಧನೆ ಮತ್ತು ಮುಂದಿನ ವರ್ಷದ ಗುರಿಗಳನ್ನು ವಿವರಿಸಬೇಕು. ಆದರೆ, ಕಾಂಗ್ರೆಸ್ ಪಕ್ಷ ಮತ್ತು ಅದರ ನಾಯಕರ ಮೇಲೆ ಆರೋಪಗಳನ್ನು ಹೊರಿಸುವುದಕ್ಕೆ ಪ್ರಧಾನಿ ಭಾಷಣ ಸೀಮಿತವಾಗಿತ್ತು ಎಂದು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

'ಕಾಂಗ್ರೆಸ್ ಪಕ್ಷ ಮತ್ತು ನೆಹರೂ ಅವರನ್ನು ತೆಗಳುವ ಬಯಕೆ ಇದ್ದರೆ ನನ್ನ ಅತಿಥಿಯಾಗಿ ಬನ್ನಿ' ಎಂದು ರಾಹುಲ್ ಹೇಳಿದ್ದಾರೆ. ಕಾಂಗ್ರೆಸ್ ಮತ್ತು ನೆಹರೂ ಅವರನ್ನು ಮೋದಿ ಅವರು ಟೀಕಿಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳನ್ನು ಉದ್ದೇಶಿಸಿ ರಾಹುಲ್ ಮಾತನಾಡಿದರು.

ತಾವು ಎತ್ತಿರುವ ಯಾವ ಪ್ರಶ್ನೆಗೂ ಮೋದಿ ಅವರು ಉತ್ತರಿಸಿಲ್ಲ. ಎರಡು ಭಾರತಗಳ ಸೃಷ್ಟಿ, ಭಾರತೀಯ ಸಂಸ್ಥೆಗಳ ಅತಿಕ್ರಮಣ, ಚೀನಾ ಮತ್ತು ಪಾಕಿಸ್ತಾನ ಒಟ್ಟಾಗಲು ಕಾರಣವಾದ ದಿವಾಳಿ ವಿದೇಶ ನೀತಿಗಳ ಬಗ್ಗೆ ಮೋದಿ ಏನನ್ನೂ ಹೇಳಿಲ್ಲ. ಕೋವಿಡ್ ಸಾಂಕ್ರಾಮಿಕದ ಬಗೆಗಿನ ಪ್ರಶ್ನೆಗೂ ಮೋದಿ ಉತ್ತರಿಸಿಲ್ಲ ಎಂದರು.

'ನನ್ನ ಮುತ್ತಜ್ಜ ಈ ದೇಶದ ಸೇವೆ ಮಾಡಿದ್ದಾರೆ. ತಮ್ಮ ಇಡೀ ಜೀವನವನ್ನು ದೇಶಕ್ಕಾಗಿ ಮುಡಿಪಾಗಿ ಇಟ್ಟಿದ್ದಾರೆ. ನನ್ನ ಮುತ್ತಜ್ಜನ ಬಗ್ಗೆ ಯಾರಿಂದಲೂ ಪ್ರಮಾಣಪತ್ರ ಬೇಕಾಗಿಲ್ಲ. ಅವರು ಏನು ಮಾಡಬೇಕಿತ್ತೋ ಅದನ್ನು ಮಾಡಿದ್ದಾರೆ. ಅವರ ಬಗ್ಗೆ ಯಾರಾದರು ಏನನ್ನಾದರೂ ಹೇಳಿದರೆ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ' ಎಂದು ರಾಹುಲ್ ಹೇಳಿದ್ದಾರೆ.

ಮೋದಿ ಮತ್ತು ಪಕ್ಷದ ಬಗ್ಗೆ ಕಾಂಗ್ರೆಸ್ ಪಕ್ಷವು ಸತ್ಯ ಹೇಳುತ್ತದೆ ಎಂಬ ಭಯ ಬಿಜೆಪಿಯಲ್ಲಿ ಇದೆ. ಸಂಸತ್ತಿನಲ್ಲಿ ಮೋದಿ ಅವರು ಮಾಡಿದ ಭಾಷಣದಲ್ಲಿ ಕಾಂಗ್ರೆಸ್ ಏನು ಮಾಡಿಲ್ಲ ಮತ್ತು ನೆಹರೂ ಏನು ಮಾಡಿಲ್ಲ ಎಂಬ ವಿಚಾರಗಳೇ ಇದ್ದವು. ಬಿಜೆಪಿ ತನ್ನ ಭರವಸೆಗಳಲ್ಲಿ ಎಷ್ಟನ್ನು ಈಡೇರಿಸಿದೆ ಎಂಬ ಬಗ್ಗೆ ಪ್ರಧಾನಿ ಏನನ್ನೂ ಹೇಳಿಲ್ಲ ಎಂದು ರಾಹುಲ್ ಹೇಳಿದ್ದಾರೆ.

ಪ್ರಧಾನಿ ಏನು ಮಾಡುತ್ತಿದ್ದಾರೆ ಎಂಬುದನ್ನು ಜನರು ತಿಳಿದುಕೊಳ್ಳುವುದು ಬಹಳ ಮುಖ್ಯ ಎಂದು ಅವರು ಪ್ರತಿಪಾದಿಸಿದ್ದಾರೆ.

ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರ ಟೀಕೆಗೂ ರಾಹುಲ್ ಪ್ರತಿಕ್ರಿಯೆ ನೀಡಿದರು. 'ಅವರಿಗೆ ಅವರ ಕೆಲಸವೇ ಸರಿಯಾಗಿ ಗೊತ್ತಿಲ್ಲ. ಭಾರತವು ಸೈಬರ್ ಸೂಪರ್ ಪವರ್ ಆಗಿರುವ ಚೀನಾವನ್ನು ಎದುರಿಸಬೇಕಿದೆ. ಚೀನಾ ಮತ್ತು ಪಾಕಿಸ್ತಾನ ಒಂದಾಗಿದೆ. ನೀವು ನಿದ್ದೆ ಮಾಡುತ್ತಿದ್ದೀರಿ. ಸತ್ಯಾಂಶಗಳನ್ನು ನಿರ್ಲಕ್ಷಿಸುತ್ತಿದ್ದೀರಿ, ಬೇಗ ಎಚ್ಚರಗೊಳ್ಳಿ' ಎಂದು ರಾಹುಲ್ ಹೇಳಿದ್ದಾರೆ.

**'ರಾಷ್ಟ್ರಹಿತವಿಲ್ಲದ ಭಾಷಣ':** 'ಸಭಾತ್ಯಾಗ ಮಾಡುವ ಮೊದಲು ಸುಮಾರು ಒಂದು ತಾಸು ಪ್ರಧಾನಿಯವರ ಭಾಷಣವನ್ನು ಕೇಳಿದ್ದೇವೆ. ಅವರ ಭಾಷಣವು ರಾಷ್ಟ್ರದ ಹಿತವನ್ನು ಹೊಂದಿರಲಿಲ್ಲ' ಎಂದು ಖರ್ಗೆ ಹೇಳಿದ್ದಾರೆ. ಮಹಾತ್ಮ ಗಾಂಧಿಯ ಹಂತಕ ನಾಥೂರಾಂ ಗೋಡ್ಸೆಯನ್ನು ಹೊಗಳುವ ಜನರು ಈಗ ಮಹಾತ್ಮ ಗಾಂಧಿ ಹೆಸರು ಹೇಳುತ್ತಿದ್ದಾರೆ ಎಂದರು.

ಸಭ್ಯತೆ, ಘನತೆ, ಭಾಷೆಯ ಸಂಯಮ, ಸತ್ಯಾಂಶಗಳ ಕೊರತೆ ಎಲ್ಲದರ ಮೂಲಕ ಪ್ರಧಾನಿಯವರು ರಾಜ್ಯಸಭೆಯಲ್ಲಿ ಇನ್ನಷ್ಟು ಪಾತಾಳಕ್ಕೆ ಕುಸಿದರು. ವಿರೋಧ ಪಕ್ಷವು ಸಭಾತ್ಯಾಗ ಮಾಡಲು ಕಾರಣರಾದರು ಎಂದು ಕಾಂಗ್ರೆಸ್‌ನ ಮುಖ್ಯ ಸಚೇತಕ ಜೈರಾಮ್ ರಮೇಶ್ ಹೇಳಿದ್ದಾರೆ.

ಚುನಾವಣೆಯಲ್ಲಿ ಏನು ಮಾಡಬೇಕು ಎಂದು ಪಕ್ಷದ ಕಾರ್ಯಕರ್ತರ ಮುಂದೆ ಮಾಡಿದ ಭಾಷಣದಂತೆ ಮೋದಿ ಮಾತು ಇತ್ತು ಎಂದು ಲೋಕಸಭೆಯಲ್ಲಿ ಕಾಂಗ್ರೆಸ್‌ನ ಉಪ ನಾಯಕ ಗೌರವ್ ಗೊಗೊಯಿ ಹೇಳಿದ್ದಾರೆ. ಸಂಸತ್ತನ್ನು ಬಿಜೆಪಿಯ ತರಬೇತಿ ಶಿಬಿರವಾಗಿ ಪರಿವರ್ತಿಸಿದ್ದಾರೆ ಎಂದು ಅವರು ಟೀಕಿಸಿದ್ದಾರೆ.

### 'ಸರ್ಕಾರದ ಬಳಿ ಯಾವ ಮಾಹಿತಿಯೂ ಇಲ್ಲ'

ಕೋವಿಡ್‌ಗೆ ಸಂಬಂಧಿಸಿದ ಪ್ರಶ್ನೆ ಕೇಳಿದಾಗ, ಮಾಹಿತಿಯೇ ಇಲ್ಲ ಎಂದು ಸಂಸತ್ತಿನಲ್ಲಿ ಸಚಿವರು ಹೇಳಿದ್ದರು. ಆಮ್ಲಜನಕ ಕೊರತೆಯಿಂದ ಸತ್ತವರ ಮಾಹಿತಿ ಇಲ್ಲ. ನದಿಯಲ್ಲಿ ತೇಲಿ ಹೋದ ಮೃತ ದೇಹಗಳ ಮಾಹಿತಿ ಇಲ್ಲ. ಲಾಕ್‌ಡೌನ್ ಸಮಯದಲ್ಲಿ ಮನೆಗೆ ನಡೆದು ಹೋದ ವಲಸಿಗರ ಬಗೆಗಿನ ಮಾಹಿತಿ ಇಲ್ಲ. 2022ರಲ್ಲಿ ರೈತರ ಆದಾಯ ದುಪ್ಪಟ್ಟು ಆಗಬೇಕಿತ್ತು. ಆದರೆ, ಸರ್ಕಾರದ ಬಳಿ ಅದರ ಬಗ್ಗೆಯೂ ಮಾಹಿತಿ ಇಲ್ಲ ಎಂದು ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ ಅವರು ಹೇಳಿದ್ದಾರೆ.

ತಮ್ಮ ಬಳಿ ಕೆಲವು ದತ್ತಾಂಶಗಳು ಇವೆ. ಕಳೆದ ವರ್ಷ ವಿತ್ತೀಯ ಕೊರತೆಯ ಪ್ರಮಾಣವು ಶೇ 6.8ರಷ್ಟಕ್ಕೆ ನಿಗದಿ ಮಾಡಲಾಗಿತ್ತು. ಅದರ ಬಗ್ಗೆ ಆಗಲೇ ಎಚ್ಚರಿಕೆ ನೀಡಿದ್ದೆ. ಕೊನೆಗೆ ಅದು ಶೇ 6.9ಕ್ಕೆ ಏರಿತು ಎಂದು ಅವರು ಹೇಳಿದರು. ಬಂಡವಾಳ ಹಿಂದೆಗೆತದ ಮೂಲಕ ₹1.75 ಲಕ್ಷ ಕೋಟಿ ಸಂಗ್ರಹಿಸುವ ಗುರಿಯನ್ನು ಸರ್ಕಾರ ಇರಿಸಿಕೊಂಡಿತ್ತು. 'ವಿವೇಚನಾರಹಿತ' ಬಂಡವಾಳ ಹಿಂದೆಗೆತದ ಮೂಲಕ ಮಾತ್ರ ಇದು ಸಾಧ್ಯ ಎಂದು ಆಗಲೇ ಎಚ್ಚರಿಸಿದ್ದೆ. ಕೊನೆಗೆ, ಸರ್ಕಾರವು ಸಂಗ್ರಹಿಸಲು ಸಾಧ್ಯವಾಗಿದ್ದು ₹78 ಸಾವಿರ ಕೋಟಿ ಮಾತ್ರ ಎಂದು ಚಿದಂಬರಂ ಹೇಳಿದ್ದಾರೆ.

### ಕಾಂಗ್ರೆಸ್‌ನಲ್ಲಿ ಪ್ರಜಾಪ್ರಭುತ್ವ ಇಲ್ಲ: ಮೋದಿ

ನವದೆಹಲಿ (ಪಿಟಿಐ): 'ಕಾಂಗ್ರೆಸ್ ಪಕ್ಷವು ಇಲ್ಲದೇ ಇದ್ದಿದ್ದರೆ, ದೇಶದಲ್ಲಿ ಸಿಖ್ಖರ ಹತ್ಯಾಕಾಂಡ ನಡೆಯುತ್ತಿರಲಿಲ್ಲ. ಭಯೋತ್ಪಾದನೆಯ ಉರಿಯಲ್ಲಿ ಪಂಜಾಬ್ ಬೇಯುತ್ತಿರಲಿಲ್ಲ. ಕಾಶ್ಮೀರಿ ಪಂಡಿತರು ತಮ್ಮ ರಾಜ್ಯವನ್ನು ತೊರೆಯಬೇಕಿರಲಿಲ್ಲ. ನಮ್ಮ ಹೆಣ್ಣು ಮಕ್ಕಳು ತಂದೂರಿ ಒಲೆಗಳಲ್ಲಿ ಬೇಯಬೇಕಿರಲಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ವಿರುದ್ಧ ಹರಿಹಾಯ್ದಿದ್ದಾರೆ.

ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಉತ್ತರಿಸುತ್ತಾ, ರಾಜ್ಯಸಭೆಯಲ್ಲಿ ಮೋದಿ ಅವರು ಕಾಂಗ್ರೆಸ್ ಅನ್ನು ಹಿಗ್ಗಾಮುಗ್ಗಾ ಟೀಕಿಸಿದ್ದಾರೆ.

ಕಾಂಗ್ರೆಸ್‌ನಲ್ಲಿ ಪ್ರಜಾಪ್ರಭುತ್ವವೇ ಇಲ್ಲ. ಕಾಂಗ್ರೆಸ್‌ನ ಪ್ರಧಾನಿಯೊಬ್ಬರು, ಆಂಧ್ರಪ್ರದೇಶಕ್ಕೆ ಭೇಟಿ ನೀಡಿದ್ದಾಗ ತಮ್ಮನ್ನು ಸರಿಯಾಗಿ ಸ್ವಾಗತಿಸಲಿಲ್ಲ ಎಂಬ ಒಂದೇ ಕಾರಣಕ್ಕೆ ಅಲ್ಲಿನ ಸರ್ಕಾರವನ್ನು ವಜಾ ಮಾಡಿದ್ದರು. ಪ್ರಜಾಸತ್ತಾತ್ಮಕ ನಿಲುವುಗಳನ್ನು ಕಾಂಗ್ರೆಸ್ ಬೆಳೆಸಿಕೊಳ್ಳಬೇಕು ಎಂದು ಅವರು ಹೇಳಿದ್ದಾರೆ.

'ಬಿಜೆಪಿ ದೇಶದ ಇತಿಹಾಸವನ್ನು ತಿರುಚುತ್ತಿದೆ ಎಂದು ಕೆಲವರು ಆರೋಪಿಸಿದ್ದಾರೆ. ಕೇವಲ 50 ವರ್ಷಗಳ ಹಿಂದೆ ಇತಿಹಾಸ ಆರಂಭವಾದವರಿಗೆ ನಾವು ನಿಜವಾದ ಇತಿಹಾಸವನ್ನು ಹೇಳುತ್ತಿದ್ದೇವೆ ಅಷ್ಟೆ. ಜವಾಹರ ಲಾಲ್ ನೆಹರೂ ಅವರಿಗೆ ತಮ್ಮ ಜಾಗತಿಕ ವರ್ಚಸ್ಸು ಮಾತ್ರವೇ ಮುಖ್ಯವಾಗಿತ್ತು. ಹೀಗಾಗಿ ಅವರು, ಗೋವಾ ವಿಮೋಚನೆಗಾಗಿ ರಾಮ ಮನೋಹರ್ ಲೋಹಿಯಾ ಅವರ ಅನುಯಾಯಿಗಳು ನಡೆಸುತ್ತಿದ್ದ ಸತ್ಯಾಗ್ರಹಕ್ಕೆ ಸೇನೆಯನ್ನು ಕಳುಹಿಸಲಿಲ್ಲ. ನೆಹರೂ ಅವರ ಕಾರಣದಿಂದಲೇ ಗೋವಾ ಸ್ವಾತಂತ್ರ್ಯ 15 ವರ್ಷ ವಿಳಂಬವಾಯಿತು' ಎಂದು ಪ್ರಧಾನಿ ಟೀಕಿಸಿದ್ದಾರೆ.

ಕಾಂಗ್ರೆಸ್ ಅಭಿವ್ಯಕ್ತಿ ಸ್ವಾತಂತ್ರ್ಯ ಬಗ್ಗೆ ಮಾತನಾಡುತ್ತದೆ. ಕಾಂಗ್ರೆಸ್ ಆಡಳಿತವಿದ್ದಾಗ ಗಾಯಕಿ ಲತಾ ಮಂಗೇಷ್ಕರ್ ಅವರ ಸೋದರ ಹೃದಯನಾಥ ಮಂಗೇಷ್ಕರ್ ಅವರು ಆಲ್ ಇಂಡಿಯಾ ರೇಡಿಯೊದಲ್ಲಿ ವೀರ ಸಾವರ್ಕರ್ ಕುರಿತ ಕವಿತೆ ವಾಚನ ಮಾಡಿದ್ದರು. ಹೃದಯನಾಥ ಅವರನ್ನು ನೌಕರಿಯಿಂದ ವಜಾ ಮಾಡಲಾಯಿತು. ನೆಹರೂ ಅವರನ್ನು ಟೀಕಿಸಿದ ಕಾರಣಕ್ಕೆ ಕವಿ ಮಜ್ರೂ ಸುಲ್ತಾನಪುರಿ ಅವರನ್ನು ಜೈಲಿಗೆ ಹಾಕಲಾಗಿತ್ತು. ಕಾಂಗ್ರೆಸ್‌ನ ಒಂದು ಕುಟುಂಬದ ವಿರುದ್ಧ ದನಿ ಎತ್ತಿದ ಕಾರಣಕ್ಕೆ ಪಕ್ಷದ ಅಧ್ಯಕ್ಷ ಸ್ಥಾನದಿಂದ ಸೀತಾರಾಂ ಕೇಸರಿ ಅವರನ್ನು ವಜಾ ಮಾಡಲಾಗಿತ್ತು ಎಂದು ಮೋದಿ ಟೀಕಿಸಿದ್ದಾರೆ.

## ಹೈಕೋರ್ಟ್ ತಾಕೀತು

ಒಂದನೇ ಪುಟದಿಂದ

ಅರ್ಜಿದಾರರ ಪರ ಸುದೀರ್ಘ ವಾದ ಮಂಡಿಸಿದ ಹಿರಿಯ ವಕೀಲ ದೇವದತ್ತ ಕಾಮತ್, 'ವಸ್ತ್ರಸಂಹಿತೆ ಹೆಸರಿನಲ್ಲಿ ಸರ್ಕಾರ ಹೊರಡಿಸಿರುವ ಆದೇಶ ಕಾನೂನು ಬಾಹಿರ. ಹಿಜಾಬ್ ಧರಿಸಿ ಕಾಲೇಜು ತರಗತಿಗೆ ಪ್ರವೇಶಿಸುವುದನ್ನು ತಡೆಯವುದು, ಸಂವಿಧಾನ ಈ ದೇಶದ ಪ್ರತಿಯೊಬ್ಬ ಪ್ರಜೆಗೆ ಕೊಡಮಾಡಿರುವ ಮೂಲಭೂತ ಹಕ್ಕಿನ ಉಲ್ಲಂಘನೆ. ಹಿಜಾಬ್‌ಗೆ ಲಗಾಮು ಹಾಕುವ ಮೂಲಕ ಮುಸ್ಲಿಂ ವಿದ್ಯಾರ್ಥಿನಿಯರ ಅಗತ್ಯ ಧಾರ್ಮಿಕ ಆಚರಣೆಯ ಹಕ್ಕನ್ನು ಕಸಿದುಕೊಂಡಂತಾಗಿದೆ' ಎಂದು ಆಕ್ಷೇಪಿಸಿದರು.

'ಹಿಜಾಬ್ ಧರಿಸುವುದು ಸಂವಿಧಾನದ 19 (1) ಎ ವಿಧಿಯ ಅನುಸಾರ ಅಭಿವ್ಯಕ್ತಿ ಹಾಗೂ 25ನೇ ವಿಧಿಯ ಪ್ರಕಾರ ವೈಯಕ್ತಿಕ ಸ್ವಾತಂತ್ರ್ಯದ ವ್ಯಾಪ್ತಿಗೆ ಒಳಪಟ್ಟ ವಿಚಾರ. ಹೀಗಾಗಿ, ಈ ಅಂಶಕ್ಕೆ ಪೂರಕವಾಗಿ ಕೇರಳ, ಮದ್ರಾಸ್ ಮತ್ತು ಬಾಂಬೆ ಹೈಕೋರ್ಟ್‌ಗಳು ನೀಡಿರುವ ತೀರ್ಪುಗಳನ್ನು ನ್ಯಾಯಪೀಠ ಪರಿಗಣಿಸಬೇಕು' ಎಂದು ಕೋರಿದರು. ವಿಚಾರಣೆಯನ್ನು ಬುಧವಾರ ಮಧ್ಯಾಹ್ನದ ಕಲಾಪಕ್ಕೆ ಮುಂದೂಡಲಾಗಿದೆ.

## ₹ 118.26 ಕೋಟಿ ಅಕ್ರಮ


ಒಂದನೇ ಪುಟದಿಂದ

'ಒಟ್ಟು ಕಾಮಗಾರಿಗಳ ಪೈಕಿ 114 ಕಾಮಗಾರಿಗಳ ಅನುಷ್ಠಾನದಲ್ಲಿ ಭಾರಿ ಪ್ರಮಾಣದ ಲೋಪಗಳನ್ನು ಪತ್ತೆ ಹಚ್ಚಲಾಗಿದೆ. ಕಾಮಗಾರಿ ಅನುಷ್ಠಾನಗೊಳಿಸದೇ ಇದ್ದರೂ ಕೆಆರ್‌ಐಡಿಎಲ್‌ಗೆ ₹ 118.25 ಕೋಟಿ ಹೆಚ್ಚುವರಿಯಾಗಿ ಪಾವತಿಸಿ ಸರ್ಕಾರಕ್ಕೆ ನಷ್ಟ ಉಂಟು ಮಾಡಲಾಗಿದೆ' ಎಂದು ವರದಿ ಉಲ್ಲೇಖಿಸಿದೆ.

ಕೆಲವು ಕಾಮಗಾರಿಗಳ ಅನುಷ್ಠಾನವೇ ಆಗಿಲ್ಲ. ಕೆಲವು ಕಾಮಗಾರಿಗಳಲ್ಲಿ ಹೆಚ್ಚುವರಿ ಅಳತೆ ನಮೂದಿಸಲಾಗಿದೆ, ಕೆಲವು ಕಳಪೆ ಗುಣಮಟ್ಟದಿಂದ ಕೂಡಿದ್ದು, ಇನ್ನೂ ಕೆಲವು ಕಾಮಗಾರಿಗಳನ್ನು ಟೆಂಡರ್‌ನಲ್ಲಿ ನಿರ್ದಿಷ್ಟಪಡಿಸಿದ ಅಂಶಗಳಂತೆ ಅನುಷ್ಠಾನಗೊಳಿಸದಿರುವ ಬಗ್ಗೆ ತನಿಖಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಅಲ್ಲದೆ, ಪ್ರತಿ ಕಾಮಗಾರಿಯಲ್ಲಿ ಆಗಿರುವ ಬಹುಕೋಟಿ ಹಣ ದುರುಪಯೋಗದ ಬಗ್ಗೆಯೂ ವಿವರಿಸಲಾಗಿದೆ.

'ಆಪಾದಿತ ನೌಕರರು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ. ಕೆಲಸ ನಿರ್ವಹಿಸದೇ ಇದ್ದರೂ ಹಣ ಪಾವತಿ ಮಾಡಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಬೇಕು. ಕರ್ನಾಟಕ ನಾಗರಿಕ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 14–ಎ ಅಡಿ ಇಲಾಖಾ ವಿಚಾರಣೆಗೆ ಅನುಮತಿ ನೀಡಬೇಕು' ಎಂದು ಸೂಚಿಸಿದ್ದಾರೆ.

ವರದಿ ತಲುಪಿದ ಎರಡು ತಿಂಗಳ ಒಳಗೆ ಎಲ್ಲ ಆಪಾದಿತರ ಮೇಲೆ ತೆಗೆದುಕೊಂಡ ಕ್ರಮ ಅಥವಾ ತೆಗೆದುಕೊಳ್ಳಲು ಉದ್ದೇಶಿಸಿದ ಕ್ರಮಗಳ ಬಗ್ಗೆ ಲೋಕಾಯುಕ್ತಕ್ಕೆ ಮಾಹಿತಿ ನೀಡಬೇಕು ಎಂದೂ ತನಿಖಾ ವರದಿಯಲ್ಲಿ ಆದೇಶಿಸಿದ್ದಾರೆ.





# ದೈಹಿಕ ಕ್ಷಮತೆಗೆ ಸ್ಮಾರ್ಟ್ ವಾಚ್

ಅವಿನಾಶ್ ಬಿ.

2022ರ ಒಂದು ತಿಂಗಳು ಕಳೆದರೂ, ಹೊಸ ವರ್ಷಕ್ಕೇನು ಸಂಕಲ್ಪ ಮಾಡಿಕೊಳ್ಳುವುದು ಎಂದು ಕೆಲವರಿನ್ನೂ ಯೋಚಿಸುತ್ತಿದ್ದಾರೆ. ಕೊರೊನಾ ಕಾಲದಲ್ಲಿ ವಿಶೇಷವಾಗಿ ಎಲ್ಲರ ಗಮನ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಮೇಲೆ ತುಸು ಹೆಚ್ಚೇ ಹರಿದಿದೆ. ಉತ್ತಮ ಫಿಟ್ನೆಸ್ ಅಥವಾ ದೈಹಿಕ ಕ್ಷಮತೆ ಕಾಪಾಡಿಕೊಳ್ಳಲು ನಮ್ಮ ಶರೀರಕ್ಕೆ ಯಾವಾಗ ಏನು ಬೇಕು ಎಂದು ತಿಳಿಸಿಕೊಡುವವರಿದ್ದರೆ ಅನುಕೂಲ. ಈ ಕಾಲದಲ್ಲಿ ತಂತ್ರಜ್ಞಾನ ಸಾಕಷ್ಟು ಮುಂದುವರೆದಿರುವುದರಿಂದ, ನಾವೇನು ಮಾಡಬೇಕು, ಎಷ್ಟು ಮಾಡಬೇಕು ಅಂತೆಲ್ಲ ನೆನಪಿಡುವುದಕ್ಕೆ ಡಿಜಿಟಲ್ ಸಹಾಯಕದ ನೆರವು ಪಡೆಯಬಹುದು.

ದೈಹಿಕ ಸ್ವಾಸ್ಥ್ಯ ಕಾಪಾಡಿಕೊಳ್ಳುವಲ್ಲಿ ನಮ್ಮ ನೆರವಿಗೆ ಬರುವುದೇ ಸ್ಮಾರ್ಟ್ ವಾಚ್‌ಗಳು ಅಥವಾ ಸ್ಮಾರ್ಟ್ ಬ್ಯಾಂಡ್‌ಗಳು. ಆಂಡ್ರಾಯ್ಡ್ ಹಾಗೂ ಆ್ಯಪಲ್ (ಐಒಎಸ್) ಸಾಧನಗಳು ಈಗ ಕೈಗೆಟಕುವಂತಿವೆ. ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಬಿಡುಗಡೆಯಾದ, ಆರೋಗ್ಯದ ಕ್ಷಮತೆ ಕಾಪಾಡುವಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಬಳಸುತ್ತಿರುವ ಆ್ಯಪಲ್ ವಾಚ್ ಸೀರೀಸ್ 7ರಲ್ಲಿನ ವೈಶಿಷ್ಟ್ಯಗಳು ಇಲ್ಲಿವೆ. ಬಹುತೇಕ ಎಲ್ಲ ಸ್ಮಾರ್ಟ್ ವಾಚ್‌ಗಳಲ್ಲಿ ಈ ರೀತಿಯ ವೈಶಿಷ್ಟ್ಯಗಳಿರುತ್ತವೆ ಎಂಬುದು ಗಮನದಲ್ಲಿರಲಿ. ಹೀಗಾಗಿ, ನಮಗೆ ಸ್ಮಾರ್ಟ್‌ವಾಚ್ ಯಾಕೆ ಬೇಕು ಎಂಬುದರ ಬಗ್ಗೆ ತಿಳಿದುಕೊಳ್ಳಬಹುದು.



ಆ್ಯಪಲ್ ವಾಚ್ 7



## ಫಿಟ್ನೆಸ್

ಪ್ರತಿದಿನ ದೈಹಿಕ ಕ್ಷಮತೆ ಕಾಯ್ದುಕೊಳ್ಳಲು ಇದರಲ್ಲಿ ಮೂರು ರಿಂಗ್‌ಗಳಿವೆ. ಗುರಿ ದಾಖಲಿಸಿ, ಅವುಗಳನ್ನು ಪೂರ್ಣಗೊಳಿಸಿದರೆ ಆರೋಗ್ಯವಂತರಾಗಿ ಬಾಳಬಹುದು. ಎಷ್ಟು ಹೆಜ್ಜೆ ನಡೆದೆವು, ವ್ಯಾಯಾಮ ಎಷ್ಟು ಮಾಡಿದೆವು ಮತ್ತು ಕುಳಿತೇ ಕೆಲಸ ಮಾಡುವ ಸಂದರ್ಭದಲ್ಲಿ ಎಷ್ಟು ಸಲ ಎದ್ದೆವು ಎಂಬುದನ್ನು ಆ್ಯಪಲ್ ವಾಚ್ ಲೆಕ್ಕ ಇಟ್ಟುಕೊಳ್ಳುತ್ತದೆ. ಅದರಲ್ಲಿರುವ ಸೆನ್ಸರ್‌ಗಳು ಈ ಚಲನೆಗಳನ್ನು ಗುರುತಿಸಿ, ಐಫೋನ್‌ನಲ್ಲಿರುವ ಫಿಟ್ನೆಸ್ ಆ್ಯಪ್ ಮೂಲಕವಾಗಿ, ಆ ದಿನದ ಗುರಿ ತಲುಪಿದಿರಾ ಎಂದು ಆಗಾಗ್ಗೆ ನಮಗೆ ಎಚ್ಚರಿಸುತ್ತದೆ. ನೋಟಿಫಿಕೇಶನ್ ಮೂಲಕ ಸದಾ ಕಾಲ ಅದು ಉತ್ತೇಜನ ನೀಡುತ್ತಿರುತ್ತದೆ. ಕಳೆದ ಮೂರು ತಿಂಗಳಲ್ಲಿ ನಾವು ಸಾಧಿಸಿದ ಪ್ರಗತಿಯನ್ನು ಹೋಲಿಸಿ ತೋರಿಸುತ್ತದೆ. ಹಿಂದಿನ ವರ್ಷದ ಗುರಿಗಿಂತ ಈ ವರ್ಷ ಯಾವ ಮಟ್ಟ ತಲುಪಬಲ್ಲೆವು ಎಂಬುದನ್ನೂ ಲೆಕ್ಕಾಚಾರ ಹಾಕಿ ತೋರಿಸುತ್ತದೆ.

ಕೋವಿಡ್ ಕಾಲದಲ್ಲಿ ಮನೆಯಿಂದಲೇ ಕೆಲಸ ಮಾಡುವವರೆಲ್ಲರೂ ಹೆಚ್ಚು ಸಮಯ ಕುಳಿತಿರಬೇಕಾದ ಅನಿವಾರ್ಯತೆಯಿದೆ. ಗಂಟೆಗೊಮ್ಮೆ ಎದ್ದು ನಾಲ್ಕು ಹೆಜ್ಜೆ ನಡೆಯುವುದು ನಮ್ಮ ಆರೋಗ್ಯ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುವ ಚಲನೆ. ಹೀಗೆ ಚಟುವಟಿಕೆಯಿಂದಿದ್ದರೆ, ದೇಹದ ರಕ್ತಪರಿಚಲನೆ ಸರಾಗವಾಗಿ, ದೇಹವೂ ಉಲ್ಲಸಿತವಾಗುತ್ತದೆ.

## ವ್ಯಾಯಾಮಕ್ಕೆ ಸಹಕಾರಿ

ಸೈಕ್ಲಿಂಗ್, ಯೋಗ, ಈಜು, ಹೈಕಿಂಗ್, ನೃತ್ಯ, ದೈಹಿಕ ಶ್ರಮ - ಇವೆಲ್ಲವುಗಳಿಗೂ ಗುರಿಯನ್ನು ದಾಖಲಿಸಿದರೆ, ವಾಚ್‌ಒಎಸ್ 8 ಎಲ್ಲ ರೀತಿಯಲ್ಲೂ ಅವೆಲ್ಲವನ್ನೂ ನೆನಪಿಟ್ಟುಕೊಂಡು, ನಾವೆಷ್ಟು ಗುರಿ ಸಾಧಿಸಿದೆವು, ಇನ್ನೆಷ್ಟು ಬಾಕಿ ಇದೆ ಎಂಬುದನ್ನು ಫಿಟ್ನೆಸ್ ಆ್ಯಪ್ ಮೂಲಕ ನಮಗೆ ತೋರಿಸುತ್ತದೆ. ಇವುಗಳಿಂದ ಎಷ್ಟು ಕ್ಯಾಲೊರಿ ನಷ್ಟವಾಯಿತು ಎಂಬುದನ್ನೂ ಅದು ಅಂದಾಜು ಲೆಕ್ಕಾಚಾರ ಹಾಕಿ ಕಾಣಿಸುತ್ತದೆ. ಇದು 50 ಮೀಟರ್‌ವರೆಗೆ ಜಲನಿರೋಧಕವಾಗಿರುವುದರಿಂದ ಇದನ್ನು ಧರಿಸಿಯೇ ಈಜುವುದಕ್ಕೆ, ಸಮುದ್ರದಲ್ಲಿ ಅಥವಾ ಶವರ್ ಸ್ನಾನ ಮಾಡುವುದಕ್ಕೆ ಯಾವುದೇ ಸಮಸ್ಯೆಯಾಗದು. ಹೀಗೆ, ಚಲನೆ, ನಡಿಗೆ ಮತ್ತು ಎದ್ದು ನಿಲ್ಲುವ ಗುರಿಯನ್ನು ಸಾಧಿಸಿದರೆ, ಮೂರೂ ಬಣ್ಣದ ರಿಂಗ್‌ಗಳು ಪೂರ್ಣಗೊಳ್ಳುತ್ತವೆ.

## ಕ್ಷೇಮ-ಸೌಖ್ಯಕ್ಕೆ ಮತ್ತಷ್ಟು ಮಾರ್ಗಗಳು

ಇಸಿಜಿ (ಎಲೆಕ್ಟ್ರೋಕಾರ್ಡಿಯೋಗ್ರಾಮ್), ರಕ್ತದ ಆಮ್ಲಜನಕ ಮಟ್ಟ, ಹೃದಯಬಡಿತದ ವೇಗ ಮತ್ತು ವಿಳಂಬ, ಆಯತಪ್ಪಿ ಬಿದ್ದರೆ ಗುರುತಿಸುವ, ಸೈಕ್ಲಿಂಗ್ ಲೆಕ್ಕಾಚಾರ ಹಾಕುವ, ನಿರ್ದಿಷ್ಟ ಡೆಸಿಬೆಲ್‌ಗಿಂತ ಶಬ್ದ ಹೆಚ್ಚಿದ್ದರೆ ಆ ಬಗ್ಗೆ ಎಚ್ಚರಿಸುವ ವೈಶಿಷ್ಟ್ಯಗಳು ಆರೋಗ್ಯ ಕಾಯ್ದುಕೊಳ್ಳಲು ಅನುಕೂಲಕರ. ಕೋವಿಡ್ ಕಾಲದಲ್ಲಿ ರಕ್ತದ ಆಮ್ಲಜನಕ ಮಟ್ಟವನ್ನು ಪತ್ತೆ ಮಾಡುವುದು ಅತ್ಯಗತ್ಯ. ವಾಚ್ ಹಿಂಭಾಗದಲ್ಲಿರುವ ಹಸಿರು, ಕೆಂಪು ಮತ್ತು ನೇರಳಾತೀತ ಎಲ್‌ಇಡಿ ದೀಪಗಳು, ನಾಲ್ಕು ಫೋಟೋ-ಡಯೋಡ್‌ಗಳನ್ನು ಒಳಗೊಂಡಿರುವ ಸೆನ್ಸರ್‌ಗಳಿಂದ ಇದು ಸಾಧ್ಯವಾಗುತ್ತದೆ. ಬಹುತೇಕ ಸ್ಮಾರ್ಟ್ ವಾಚ್‌ಗಳಲ್ಲಿ ಈ ವೈಶಿಷ್ಟ್ಯಗಳಿವೆಯಾದರೂ, ಇದರ ರೀಡಿಂಗ್ ಅಂತಿಮವಲ್ಲ. ನಮಗೊಂದು ಅಂದಾಜು ದೊರೆಯುತ್ತದೆ. ಹೀಗಾಗಿ ಯಾವುದಕ್ಕೂ ವೈದ್ಯರ ಸಲಹೆ ಮುಖ್ಯ.

ಇಷ್ಟಲ್ಲದೆ, ಸ್ಮಾರ್ಟ್‌ಫೋನ್‌ನ ಎಲ್ಲ ಕೆಲಸಗಳನ್ನು ಕೂಡ ಸ್ಮಾರ್ಟ್‌ವಾಚ್‌ನಲ್ಲಿ ನೋಡಬಹುದಾದ ತಂತ್ರಜ್ಞಾನವೂ ಇದೆ. ಫೋನ್ ನೋಟಿಫಿಕೇಶನ್ ಅನ್ನು ವಾಚ್‌ನಲ್ಲೇ ನೋಡಬಹುದು, ಕೆಲವು ವಾಚ್‌ಗಳಿಂದ ಕರೆಗಳನ್ನೂ ಮಾಡಬಹುದು. ಹೀಗಾಗಿ, ಸ್ಮಾರ್ಟ್ ವಾಚ್ ಈಗ ಬರೇ ಶೋಕಿಗಾಗಿ ಅಲ್ಲ; ನಮ್ಮ ಆರೋಗ್ಯದ ಕಾಳಜಿಯನ್ನು ನೆನಪಿಸುವ ಡಿಜಿಟಲ್ ಸ್ನೇಹಿತ ಅದು.

# ಇಮೋಜಿ ನಮ್ಮ ಕಾಲದ ಚಿತ್ರಲಿಪಿ

ಶರತ್ ಭಟ್ ಸೇರಾಜೆ

> ಶೈಲಿ, ಸ್ವರದ ಏರಿಳಿತ, ಬಾಡಿ ಲ್ಯಾಂಗ್ವೇಜ್ ಇವೆಲ್ಲ ಮಾಡುವ ಕೆಲಸವನ್ನು ಇಮೋಜಿಗಳು ಮಾಡುತ್ತವೆ ಎಂಬ ಕಾರಣಕ್ಕೆ ಅವುಗಳಿಗೆ ಅಷ್ಟೊಂದು ಪ್ರಸಿದ್ಧಿ ಸಿಕ್ಕಿರಬೇಕು.

**ನಮ್ಮ ವರ್ಣಮಾಲೆಯಲ್ಲಿ** ಎಷ್ಟು ಅಕ್ಷರಗಳಿವೆ – ಎಂದು ಕೇಳಿದರೆ, ನಮ್ಮ ವರ್ಣಮಾಲೆಯಲ್ಲಿ 49 ಅಕ್ಷರಗಳಿವೆ ಮತ್ತು ನೂರಿಪ್ಪತ್ತೈದು ಇಮೋಜಿಗಳಿವೆ ಎಂದು ಹೊಸಕಾಲದ ಯಾರು ಬೇಕಾದರೂ ಹೇಳಿಯಾರು! ನಾವು ಹೇಳಬೇಕಾದ್ದನ್ನು ನಮ್ಮ ಭಾಷೆಯಲ್ಲೇ ಹೇಳಿದರಾಗದೇ? ಇಮೋಜಿಯ ಊರುಗೋಲು ಬೇಕಾಗುವುದು ಭಾವ ಕುಂಟಿದರೆ ಮಾತ್ರ ಎನ್ನುವವರೂ ಇದ್ದಾರು. ಆಶ್ಚರ್ಯ ಸೂಚಕ ಚಿಹ್ನೆಯನ್ನು ಬಳಸುವುದು ಅಂದರೆ ನಮ್ಮ ಜೋಕಿಗೆ ನಾವೇ ನಕ್ಕ ಹಾಗೆ ಎಂದು Scott Fitzgerald ಹೇಳಿದ್ದೂ ಈ ತರಹದ್ದೇ ನಂಬಿಕೆಯಿಂದ. ಇಮೋಜಿಗಳನ್ನು ಬಳಸಲು ಹಿಂಜರಿಯುತ್ತಿದ್ದ ನಾನೂ 'ನಿಮ್ಮ ಜೋಕು ಅರ್ಥವೇ ಆಗುವುದಿಲ್ಲ' ಎಂಬ ಆರೋಪದಿಂದ ತಪ್ಪಿಸಿಕೊಳ್ಳಲಿಕ್ಕೇ ಮೊದಮೊದಲು ಅವುಗಳಿಗೆ ಶರಣಾಗಿ, 'ಜೋಕೆ! ಹಿಂದೆ ಒಂದು ತಮಾಷೆಯ ವಾಕ್ಯವಿದೆ' ಎಂಬ ಸೂಚನಾಫಲಕದಂತೆ ನಕ್ಕು ನಾಲಗೆ ಹೊರಚಾಚುವ ಇಮೋಜಿಯ ಅಸ್ತ್ರ ಪ್ರಯೋಗಿಸುತ್ತಿದ್ದೆ. ನನಗೆ ಆಗ ಗೊತ್ತಿರದೇ ಇದ್ದ ತಮಾಷೆ ಎಂದರೆ ಈ ಇಮೋಜಿಗಳ ಪೂರ್ವಜನಾದ 'ಇಮೋಟಿಕಾನ್' ಹುಟ್ಟಿದ್ದು ಇಂತಹದ್ದೇ ಕಾರಣಕ್ಕೆ ಎಂಬ ವಿಚಾರ.

ಕಾರ್ನೆಗಿ ಮೆಲನ್ ವಿಶ್ವವಿದ್ಯಾಲಯದ ಸ್ಕಾಟ್ ಫಾಲ್‌ಮನ್ ಎಂಬ ತಂತ್ರಜ್ಞರು ಎಂಬತ್ತರ ದಶಕದಲ್ಲಿ ಕಾಲೇಜಿನ ಬುಲೆಟಿನ್ ಬೋರ್ಡಿನಲ್ಲಿ ಲೇಖನಗಳನ್ನು ಹಾಕುವಾಗ, ಅವರ ಜೋಕುಗಳು ಪಕ್ಕನೆ ಓದುವವರ ತಲೆಗೇ ಹೋಗುತ್ತಿರಲಿಲ್ಲವಂತೆ. ಹೀಗಾಗಿ 'ಇದನ್ನು ಓದಿ ಯಾರೂ ಸಿಟ್ಟಾಗಬೇಡಿ ಸ್ವಾಮೀ, ಇದು ಗಂಭೀರವಾಗಿ ಹೇಳಿದ್ದಲ್ಲ, ತಮಾಷೆಗೆ, ವ್ಯಂಗ್ಯವಾಗಿ ಹೇಳಿದ್ದು' ಎಂಬ ಸುಳಿವು ಕೊಡಲಿಕ್ಕೆ, ಒಂದು ನಗುಮುಖದ ಚಿತ್ರರೂಪದ ಸಂಕೇತವನ್ನು ಹಾಕಿದರೆ ಹೇಗೆ ಎಂಬ ಹೊಳಹು ಅವರ ತಲೆಗೆ ಬಂತು. ಹೀಗೆ, ಟಿವಿ ಧಾರಾವಾಹಿಗಳಲ್ಲಿ ಹಿನ್ನೆಲೆಯಲ್ಲಿ ನಗುವ ಟ್ರ್ಯಾಕ್ ಇರುವ ಹಾಗೆ, ಜೋಕು, ಬೇಸರಗಳ ತೋರುಗಂಬಗಳಾಗಿ ನಗುಮುಖ, ಅಳುಮುಖಗಳನ್ನು ತೋರಿಸುವ 'ಇಮೋಟಿಕಾನ್' ಹುಟ್ಟಿತು.

ಇಮೋಶನ್ ಹಾಗೂ ಐಕನ್ ಎಂಬ ಎರಡು ಪದಗಳನ್ನು ಸೇರಿಸಿ 'ಇಮೋಟಿಕಾನ್' ಎಂಬ ಪದ ಇರುವಂತೆ ಇಮೋಜಿಯಲ್ಲೂ ಇರುವುದು ಇಮೋಶನ್ ಎಂಬ ಪೂರ್ವಪದ ಎಂದು ನೀವಂದುಕೊಂಡಿದ್ದರೆ ಅದು ಸರಿಯಲ್ಲ; ಅದು ಜಪಾನೀಭಾಷೆಯ 'ಇ' ಮತ್ತು 'ಮೋಜಿ' ಎಂಬ ಪದಗಳ ಜೋಡಣೆಯಿಂದ ಆಗಿರುವ ಪದ. 'ಇ' ಅಂದರೆ ಚಿತ್ರ ಹಾಗೂ 'ಮೋಜಿ' ಅಂದರೆ ಅಕ್ಷರ. ಇದಕ್ಕೆ ಜಪಾನೀಭಾಷೆಯ ಹೆಸರು ಯಾಕೆ ಎಂಬ ಪ್ರಶ್ನೆಗೆ ಉತ್ತರ ಸುಲಭ. ಜಪಾನಿನ ಎನ್‌ಟಿಟಿ ಡೊಕೊಮೊ ಕಂಪನಿಯ ಶಿಗೆಟಾಕಾ ಕುರಿತಾ ಎಂಬ ಎಂಜಿನಿಯರನೇ ಮೊದಲ ಇಮೋಜಿಗಳನ್ನು ವಿನ್ಯಾಸ ಮಾಡಿದವನು. ದೂರದರ್ಶನದ ಹವಾಮಾನ ವರದಿಯಲ್ಲಿ ಸೂರ್ಯನ ಚಿತ್ರ, ಮೋಡದ ಚಿತ್ರಗಳನ್ನು ತೋರಿಸಿ, 'ಮೋಡ ಕವಿದ ವಾತಾವರಣ'ವನ್ನೋ ಬಿರುಬಿಸಿಲನ್ನೋ ಭಾರೀಮಳೆಯನ್ನೋ ಸೂಚಿಸುವುದನ್ನು ನೋಡಿ, ಭಾವನೆಗಳಿಗೆ ಮೋಡ ಕವಿಯುವುದನ್ನೂ, ಬಿರುಬಿಸಿಲಿನಂತಹ ಮೂಡನ್ನೂ, ಭಾರೀ ಮಳೆಯಂತಹ ಮೆಸೇಜನ್ನೂ ಚಿತ್ರಗಳಿಂದ ಯಾಕೆ ತೋರಿಸಿಕೊಡಬಾರದು ಎಂಬ ಕಲ್ಪನೆ ಅವನಿಗೆ ಬಂತು. ಜೊತೆಗೆ ಚಿತ್ರಗಳಲ್ಲೇ ಕಥೆ ಹೇಳುವ ಮಾಂಗಾ ಕಾಮಿಕ್ಸ್ ಅನ್ನೂ ಓದಿದ ನೆನಪು ಅವನಿಗಿತ್ತು. ಹೀಗೆ, ಮನುಷ್ಯ ಶಿಲಾಯುಗಗಳಲ್ಲಿ ಗುಹೆಗಳಲ್ಲಿ ಚಿತ್ರರೂಪದ ಸಂದೇಶಗಳನ್ನು ಬಿಡಿಸಿ, ಕ್ರಮೇಣ ಶತಶತಮಾನಗಳಲ್ಲಿ ನೂರಾರು ಸಂಕೀರ್ಣ ಲಿಪಿಗಳನ್ನು ಬಳಸಿ ಈಗ ಒಂದು ಸುತ್ತು ಮುಗಿಸಿ ಮತ್ತೆ ಚಿತ್ರಲಿಪಿಗೆ ಬರುವ ಕಾರ್ಯಕ್ರಮಕ್ಕೆ ನಾಂದಿಯಾಯಿತು!

ಆ್ಯಪಲ್ ಕಂಪನಿಯವರು ಜಪಾನಿನಲ್ಲಿ ಬಿಟ್ಟರೆ ಬೇರೆಲ್ಲೂ ಇದು ಕೆಲಸಕ್ಕೆ ಬರಲಾರದು ಎಂದು ಇವುಗಳನ್ನು ಆರಂಭದ ವರ್ಷಗಳಲ್ಲಿ ಬೇರೆ ದೇಶದ ಗ್ರಾಹಕರಿಗೆ ಕಾಣದಂತೆ ಮಾಡಿದ್ದರಂತೆ! ಗೂಗಲ್ಲಿನವರು ಜಪಾನಿನ ಮಾರುಕಟ್ಟೆಯ ಮೇಲೆ ಕಣ್ಣಿಟ್ಟಾಗಲೂ ಜಿಮೇಲಿನಲ್ಲಿ ಈ ಇಮೋಜಿಗಳು ಇರಬೇಕೇ? ಇದ್ದರೆ ಎಷ್ಟು ಇರಬೇಕು ಎಂದು ತಜ್ಞರ ಸಮಿತಿಯಲ್ಲಿ ಚರ್ಚೆಗಳನ್ನು ಮಾಡಿದ್ದರಂತೆ. ಐಸ್ಕ್ರೀಮಿನ ಕೋನಿನ ರೂಪದ ಮಲದ ಇಮೋಜಿ ಯಾಕೆ ಬೇಕು ಎಂದು ಈ ತಜ್ಞರಿಗೆ ಅರ್ಥವೇ ಆಗಲಿಲ್ಲವಂತೆ. ಕಡೆಗೆ ಅದಿಲ್ಲದಿದ್ದರೆ ವರ್ಣಮಾಲೆಯಿಂದ ಒಂದು ಅಕ್ಷರವನ್ನೇ ತೆಗೆದಂತೆ ಅಂತ ಜಪಾನೀಯರು ಹೇಳಿದ್ದರಿಂದ ಅದು ಉಳಿದುಕೊಂಡಿತಂತೆ!

ನಾವು ಮಾತಾಡುವಾಗ ಶೇ. ಏಳರಷ್ಟು ಮಾತ್ರ ಶಬ್ದಗಳಿಂದ ಸಂವಹನವಾಗುವುದು; ಹೇಳಿದ ಶೈಲಿ, ಸ್ವರದ ಏರಿಳಿತ ಇವುಗಳಿಂದ ಶೇ. ಮೂವತ್ತೆಂಟರಷ್ಟು ಅರ್ಥ ಹೊರಡುವುದು; ಕಣ್ಣಿನ ಭಾವ, ಹುಬ್ಬು, ಕೈಕರಣ ಇವುಗಳಿಂದ ಶೇ. ಐವತ್ತೈದರಷ್ಟು ಸಂವಹನ ಆಗುವುದು ಎಂದು ಅಧ್ಯಯನವೊಂದು ತಿಳಿಸಿದೆ. ಶೈಲಿ, ಸ್ವರದ ಏರಿಳಿತ, ಬಾಡಿ ಲ್ಯಾಂಗ್ವೇಜ್ ಇವೆಲ್ಲ ಮಾಡುವ ಕೆಲಸವನ್ನು ಇಮೋಜಿಗಳು ಮಾಡುತ್ತವೆ ಎಂಬ ಕಾರಣಕ್ಕೆ ಅವುಗಳಿಗೆ ಅಷ್ಟೊಂದು ಪ್ರಸಿದ್ಧಿ ಸಿಕ್ಕಿರಬೇಕು. ಹೇಳಿದ್ದರ ಸನ್ನಿವೇಶದ ಭಾವವನ್ನು ಪರಿಣಾಮಕಾರಿಯಾಗಿ ಹೇಳುವಷ್ಟು ಭಾಷಾಸಾಮರ್ಥ್ಯ ಇರದವರಿಗೆ, ಇಂತಹ ಭಾವಕ್ಕೆ ಇಂತಹ ಚಿತ್ರ ಎಂಬ ಸಿದ್ಧಸೂತ್ರದ ಪರಿಹಾರ ಈ ಮಟ್ಟಕ್ಕೆ ಒದಗಿ ಬಂದೀತು ಎಂದು ಯಾರಿಗೆ ಗೊತ್ತಿತ್ತು!



# ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

## ವೃತ್ತಗಳು

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಗಣಿತಶಾಸ್ತ್ರದ 'ಸರ್ಕಲ್' ಅಧ್ಯಾಯದ ಓದಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ಗಣಿತಶಾಸ್ತ್ರ — ಎಸ್ಸೆಸ್ಸೆಲ್ಸಿ

**ಅಧ್ಯಾಯ 4:**

- ವೃತ್ತವನ್ನು ಒಂದೇ ಒಂದು ಬಿಂದುವಿನಲ್ಲಿ ಛೇದಿಸುವ ರೇಖೆಯನ್ನು ಸ್ಪರ್ಶಕ ಎನ್ನುತ್ತೇವೆ.
- ಛೇದಕವೊಂದರ ಅನುರೂಪ ಜ್ಯಾದ ಎರಡು ಅಂತ್ಯ ಬಿಂದುಗಳು ಐಕ್ಯವಾದಾಗ ದೊರೆಯುವ ಛೇದಕದ ವಿಶೇಷ ಪ್ರಕರಣವೇ ವೃತ್ತ ಸ್ಪರ್ಶಕ.
- ಸ್ಪರ್ಶಕ ಮತ್ತು ವೃತ್ತಕ್ಕಿರುವ ಸಾಮಾನ್ಯ ಬಿಂದುವನ್ನು **ಸ್ಪರ್ಶ ಬಿಂದು** ಎಂದು ಕರೆಯುತ್ತಾರೆ.
- **ಪ್ರಮೇಯ 4.1:** ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು, ಸ್ಪರ್ಶ ಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ.
- **ಪ್ರಮೇಯ 4.2:** ಬಾಹ್ಯ ಬಿಂದುವಿನಿಂದ ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮನಾಗಿರುತ್ತದೆ.

**ಪ್ರಶ್ನೋತ್ತರಗಳು**

1. **0 ಕೇಂದ್ರವುಳ್ಳ ವೃತ್ತಕ್ಕೆ $\overline{ACB}$, $\overline{AE}$ ಮತ್ತು $\overline{BD}$ ಗಳು ಸ್ಪರ್ಶಕಗಳಾಗಿವೆ.** $AB = 12cm$ **ಮತ್ತು** $\overline{AE} = 3cm$ **ಆದರೆ** $\overline{BD}$ **ಯ ಉದ್ದ**




ಎ. 6 cm ಬಿ. 3 cm
ಸಿ. 8 cm ಡಿ. 9 cm


**ಉತ್ತರ: ಡಿ 9 cm**

2. **ಚಿತ್ರದಲ್ಲಿ, $\angle POQ = 110^0$ ಆಗಿರುವಂತೆ, O ಕೇಂದ್ರವುಳ್ಳ ವೃತ್ತಕ್ಕೆ TP ಮತ್ತು TQ ಸ್ಪರ್ಶಕಗಳಾಗಿವೆ. ಹಾಗಾದರೆ $\angle PTQ$ ದ ಅಳತೆಯನ್ನು ಕಂಡುಹಿಡಿಯಿರಿ.**

**ಪರಿಹಾರ:** TP ಮತ್ತು TQ ಸ್ಪರ್ಶಕಗಳ ಸ್ಪರ್ಶಬಿಂದುವಿನಲ್ಲಿ ಎಳೆದ ತ್ರಿಜ್ಯಗಳು OP ಮತ್ತು OQ

$OP \perp TP$ ಮತ್ತು $OQ \perp TQ$

(ಪ್ರಮೇಯ 4.1ರಿಂದ)




$\angle OPT = \angle OQT = 90^0$

$POQT$ ಚತುರ್ಭಜದಲ್ಲಿ

$\angle PTQ + \angle OPT + \angle POQ + \angle OQT = 360^0$

$\angle PTQ + 90^0 + 110^0 + 90^0 = 360^0$

$\angle PTQ = 70^0$

**ಅಧ್ಯಾಯ 5 :**

### ವೃತ್ತಗಳಿಗೆ ಸಂಬಂಧಿಸಿದ ವಿಸ್ತೀರ್ಣಗಳು

- ಒಂದು ವೃತ್ತದ ಎರಡು ತ್ರಿಜ್ಯಗಳು ಮತ್ತು ಅದರ ಅನುರೂಪ ಕಂಸದಿಂದ ಆವೃತ್ತವಾದ ವೃತ್ತಾಕಾರದಲ್ಲಿನ ಒಂದು ಭಾಗವನ್ನು 'ತ್ರಿಜ್ಯಾಂತರ ಖಂಡ' ಎಂದು ಕರೆಯುತ್ತೇವೆ
- ಒಂದು ಜ್ಯಾ ಹಾಗೂ ಅದರ ಅನುರೂಪ ಕಂಸದಿಂದ ಆವೃತ್ತವಾದ ವೃತ್ತಾಕಾರದ ಭಾಗವನ್ನು `ವೃತ್ತಖಂಡ' ಎನ್ನುತ್ತಾರೆ.
- $\theta$ ಕೋನವಿರುವ ತ್ರಿಜ್ಯಾಂತರ ಖಂಡದ ವಿಸ್ತೀರ್ಣ $= \frac{\theta}{360} x\pi r^2$
- $\theta$ ಕೋನವನ್ನು ಹೊಂದಿರುವ ತ್ರಿಜ್ಯಾಂತರ ಖಂಡದ ಕಂಸದ ಉದ್ದ $\frac{\theta}{360} x 2\pi r$

**ಪ್ರಶ್ನೋತ್ತರಗಳು**

1. ಎರಡು ವೃತ್ತಗಳ ಪರಿಧಿಗಳ ಅನುಪಾತವು 4:5 ಆದರೆ ಅವುಗಳ ವಿಸ್ತೀರ್ಣಗಳ ಅನುಪಾತವು

ಎ. 4:5 ಬಿ. 16:25 ಸಿ. 64:125 ಡಿ. 5:4

ಉತ್ತರ: ಬಿ. 16:25

2. ಪರಿಧಿಯು 22 cm ಇರುವ ಒಂದು ವೃತ್ತ ಚತುರ್ಥಕ ಭಾಗದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

**ಪರಿಹಾರ:**

ವೃತ್ತದ ಚತುರ್ಥಕ ಭಾಗ = ತ್ರಿಜ್ಯಾಂತರ ಖಂಡದ ಕೋನ $\theta = 90^0$

ವೃತ್ತದ ಪರಿಧಿ $C = 2\pi r = 22$ cm

ವೃತ್ತದ ತ್ರಿಜ್ಯ $r = \frac{22}{2\pi} cm = \frac{7}{2} cm$

ಕೋನ $\theta$ ಆಗಿರುವ ತ್ರಿಜ್ಯಾಂತರ ಖಂಡದ ವಿಸ್ತೀರ್ಣ $= \frac{\theta}{360^0} x\pi r^2$

$90^0$ ಆಗಿರುವ ತ್ರಿಜ್ಯಾಂತರ ಖಂಡದ ವಿಸ್ತೀರ್ಣ $= \frac{90^0}{360^0} x\pi r^2$


$= \frac{1}{4} x \frac{22}{7} x (\frac{7}{2})^2 = \frac{77}{8} cm^2$

**3. ಚಿತ್ರದಲ್ಲಿ, OABC ಚೌಕವು OPBQ ವೃತ್ತ ಚತುರ್ಥಕದಲ್ಲಿ ಅಂತಸ್ಥವಾಗಿದೆ. OA = 20cm ಆದರೆ ಛಾಯೆಗೊಳಿಸಿದ ಭಾಗದ ವಿಸ್ತೀರ್ಣವನ್ನು ಕಂಡುಹಿಡಿಯಿರಿ. ( $\pi$= 3.14 ಎಂದು ಬಳಸಿ).**

ಚೌಕದ ಬಾಹುವಿನ ಅಳತೆ = OA = AB = 20 cm

ವೃತ್ತ ಚತುರ್ಥಕದ ತ್ರಿಜ್ಯ = OB

OABಲಂಬಕೋನ ತ್ರಿಭುಜದಲ್ಲಿ,




$OB^2 = AB^2 + OA^2$ (ಪೈಥಾಗೊರಸ್ ಪ್ರಮೇಯ)

$OB^2 = 20^2 + 20^2$

$OB^2 = 400 + 400$

$OB^2 = 800$

$OB = 20\sqrt{2}$ cm

ವೃತ್ತ ಚತುರ್ಥಕದ ವಿಸ್ತೀರ್ಣ $= \frac{\pi R^2}{4}$

$= \frac{3.14 x (20\sqrt{2})^2}{4}$

$= \frac{3.14 x 400 x 2}{4}$

$= 3.14 x 200$

$= 628 cm^2$

ಚೌಕದ ವಿಸ್ತೀರ್ಣ = 20x 20 = 400 $cm^2$

ಛಾಯೆಗೊಳಿಸಿದ ಭಾಗದ ವಿಸ್ತೀರ್ಣ

= ವೃತ್ತ ಚತುರ್ಥಕದ ವಿಸ್ತೀರ್ಣ - ಚೌಕದ ವಿಸ್ತೀರ್ಣ

= 628 - 400 $cm^2$

= 228 $cm^2$

**ಶ್ರೀನಿವಾಸ ಡಿ. ಶೆಟ್ಟಿ,** ಶಿಕ್ಷಣ ಸಂಯೋಜಕರು ಬಿಇಒ ಕಚೇರಿ, ಅರಕಲಗೂಡು

## ಮಾತೃಕೆಗಳ ಗುಣಾಕಾರ

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಗಣಿತಶಾಸ್ತ್ರದ 'ಡಿಟರ್ಮಿನೆಂಟ್ಸ್' ಅಧ್ಯಾಯದ ಓದಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಗಣಿತಶಾಸ್ತ್ರ — ಪಿಯುಸಿ

1)

$$A = \begin{bmatrix} 6 & 9 \\ 2 & 3 \end{bmatrix} \text{ ಮತ್ತು } B = \begin{bmatrix} 2 & 6 & 0 \\ 7 & 9 & 8 \end{bmatrix}$$

ಆದರೆ AB ಯನ್ನು ಕಂಡುಹಿಡಿಯಿರಿ.

**ಪರಿಹಾರ:** ಮಾತೃಕೆ A ನಲ್ಲಿ 2 ಕಂಬಸಾಲುಗಳಿವೆ, ಅದು B ನಲ್ಲಿನ ಅಡ್ಡಸಾಲುಗಳ ಸಂಖ್ಯೆಗೆ ಸಮವಾಗಿದೆ. ಆದ್ದರಿಂದ AB ಯನ್ನು ಕಂಡುಹಿಡಿಯಬಹುದು.

$$\text{ಈಗ } AB = \begin{bmatrix} 6(2)+9(7) & 6(6)+9(9) & 6(0)+9(8) \\ 2(2)+3(7) & 2(6)+3(9) & 2(0)+3(8) \end{bmatrix}$$

$$= \begin{bmatrix} 12+63 & 36+81 & 0+72 \\ 4+21 & 12+27 & 0+24 \end{bmatrix} = \begin{bmatrix} 75 & 117 & 72 \\ 25 & 39 & 24 \end{bmatrix}$$

**ಗಮನಿಸಿ :** AB ಯನ್ನು ಕಂಡುಹಿಡಿಯಲು ಸಾಧ್ಯವಾದರೆ BA ಯನ್ನು ಕಂಡುಹಿಡಿಯಲು ಸಾಧ್ಯವಾಗಬೇಕೆಂದಿಲ್ಲ. ಮೇಲಿನ ಉದಾಹರಣೆಯಲ್ಲಿ AB ಯನ್ನು ಕಂಡುಹಿಡಿಯಲು ಸಾಧ್ಯವಿದೆ. ಆದರೆ BA ಯನ್ನು ಕಂಡುಹಿಡಿಯಲು ಸಾಧ್ಯವಿಲ್ಲ. ಏಕೆಂದರೆ, B ಮಾತೃಕೆಯಲ್ಲಿ 3 ಕಂಬ ಸಾಲುಗಳಿವೆ ಆದರೆ A ಮಾತೃಕೆಯಲ್ಲಿ ಕೇವಲ 2(ಮತ್ತು 3 ಅಲ್ಲ) ಅಡ್ಡಸಾಲುಗಳಿವೆ.

A ಮತ್ತು B ಗಳು ಕ್ರಮವಾಗಿ m x n ಮತ್ತು k x 1 ಮಾತೃಕೆಗಳಾಗಿದ್ದರೆ, AB ಮತ್ತು BAಗಳೆರಡನ್ನೂ ಕಂಡುಹಿಡಿಯಬೇಕಾದರೆ ಮತ್ತು ಆಗಬೇಕಿದ್ದರೆ n = k ಮತ್ತು 1 = m ಆಗಲೇಬೇಕು. ನಿರ್ದಿಷ್ಟವಾಗಿ ಹೇಳುವುದಾದರೆ A ಮತ್ತು B ಗಳೆರಡೂ ಒಂದೇ ದರ್ಜೆಯ ವರ್ಗ ಮಾತೃಕೆಗಳಾದಲ್ಲಿ AB ಮತ್ತು BA ಗಳೆರಡನ್ನೂ ಕಂಡುಹಿಡಿಯಬಹುದು.

**ಮಾತೃಕೆಯ ಗುಣಾಕಾರವು ಅಪರಿವರ್ತನೀಯ (Non-commutativity)**

ಈಗ AB ಮತ್ತು BA ಗಳೆರಡನ್ನೂ ಕಂಡುಹಿಡಿಯಲು ಸಾಧ್ಯವಾದರೂ AB = BA ಆಗಬೇಕು ಎಂದೇನಿಲ್ಲ ಎಂಬುದನ್ನು ಒಂದು ಉದಾಹರಣೆಯ ಮೂಲಕ ನಾವೀಗ ನೋಡೋಣ.

**ಸಮಸ್ಯೆ ಪರಿಹಾರ:**

$$A = \begin{bmatrix} 1 & -2 & 3 \\ -4 & 2 & 5 \end{bmatrix} \text{ ಮತ್ತು } B = \begin{bmatrix} 2 & 3 \\ 4 & 5 \\ 2 & 1 \end{bmatrix}$$

ಆದರೆ AB ಮತ್ತು BA ಗಳನ್ನು ಕಂಡುಹಿಡಿಯಿರಿ, ಮತ್ತು AB ≠ BA ಎಂದು ತೋರಿಸಿ.

ಪರಿಹಾರ: A ಯು 2 x 3 ಮಾತೃಕೆ ಮತ್ತು B ಯು 3 x 2 ಮಾತೃಕೆಗಳಾಗಿರುತ್ತವೆ. ಆದ್ದರಿಂದ AB ಮತ್ತು BA ಗಳೆರಡನ್ನೂ ಕಂಡುಹಿಡಿಯಬಹುದು ಮತ್ತು ಅವುಗಳು ಕ್ರಮವಾಗಿ 2 x 2 ಮತ್ತು 3 x 3 ದರ್ಜೆಯ ಮಾತೃಕೆಗಳಾಗಿರುತ್ತವೆ.

$$AB = \begin{bmatrix} 1 & -2 & 3 \\ -4 & 2 & 5 \end{bmatrix} \begin{bmatrix} 2 & 3 \\ 4 & 5 \\ 2 & 1 \end{bmatrix} = \begin{bmatrix} 2-8+6 & 3-10+3 \\ -8+8+10 & -12+10+5 \end{bmatrix} = \begin{bmatrix} 0 & -4 \\ 10 & 3 \end{bmatrix}$$

$$\text{ಮತ್ತು } BA = \begin{bmatrix} 2 & 3 \\ 4 & 5 \\ 2 & 1 \end{bmatrix} \begin{bmatrix} 1 & -2 & 3 \\ -4 & 2 & 5 \end{bmatrix} = \begin{bmatrix} 2-12 & -4+6 & 6+15 \\ 4-20 & -8+10 & 12+25 \\ 2-4 & -4+2 & 6+5 \end{bmatrix} = \begin{bmatrix} -10 & 2 & 21 \\ -16 & 2 & 37 \\ -2 & -2 & 11 \end{bmatrix}$$

ಸ್ಪಷ್ಟವಾಗಿ AB ≠ AB

ಮೇಲಿನ ಉದಾಹರಣೆಯಲ್ಲಿ AB ಮತ್ತು BA ಗಳೆರಡೂ ಬೇರೆ ಬೇರೆ ದರ್ಜೆಯವು ಆಗಿದ್ದರಿಂದ AB ≠ BA. AB ಮತ್ತು BA ಗಳೆರಡೂ ಒಂದೇ ದರ್ಜೆಯದ್ದಾದರೆ ಅವುಗಳು ಸಮವಾಗಿರುತ್ತವೆ ಎಂದು ಕೊಳ್ಳಬಹುದು. ಆದರೆ ಇದು ಹಾಗೆ ಆಗುವುದಿಲ್ಲ.

**ಮಾತೃಕೆಗಳ ಗುಣಾಕಾರದ ಗುಣಲಕ್ಷಣಗಳು (Properties of multiplication of matrices):**

ಮಾತೃಕೆಗಳ ಗುಣಾಕಾರವು ಈ ಕೆಳಗಿನ ಗುಣಲಕ್ಷಣಗಳನ್ನು ಹೊಂದಿರುತ್ತದೆ. ಅವುಗಳನ್ನು ನಾವು ಸಾಧನಾರಹಿತವಾಗಿ ನಿರೂಪಿಸುತ್ತೇವೆ.

1. **ಸಹವರ್ತನೀಯ ನಿಯಮ** (Associative Law) A, B ಮತ್ತು C ಎಂಬ ಮೂರು ಮಾತೃಕೆಗಳಿಗೆ ಸಮೀಕರಣದ ಎರಡೂ ಬದಿ ಇರುವ ಮಾತೃಕೆಗಳನ್ನು ಕಂಡುಹಿಡಿಯಲು ಸಾಧ್ಯವಾದಲ್ಲಿ (AB) C = A (BC), ಆಗುತ್ತದೆ.

2. **ವಿಭಾಜಕ ನಿಯಮ** (Distributive law) : A, B ಮತ್ತು C ಎಂಬ ಮಾತೃಕೆಗಳಿಗೆ, ಸಮೀಕರಣದ ಎರಡೂ ಬದಿಗಳನ್ನು ಕಂಡುಹಿಡಿದರೆ, (i) A (B + C) = AB + AC (ii) (A + B) C = AC + BC, ಆಗುವುದು.

3. **ಗುಣಾಕಾರದ ಅನನ್ಯತಾಂಶ (identity)ದ ಅಸ್ತಿತ್ವ :** A ಎಂಬ ಪ್ರತಿಯೊಂದು ವರ್ಗ ಮಾತೃಕೆಗೂ, IA = AI = A ಆಗುವಂತೆ, ಅದೇ ದರ್ಜೆಯ ಅನನ್ಯತಾ ಮಾತೃಕೆಯೊಂದು ಅಸ್ತಿತ್ವದಲ್ಲಿರುತ್ತದೆ.

**ಸಮಸ್ಯೆ ಮತ್ತು ಪರಿಹಾರ:**

$$A = \begin{bmatrix} 1 & 1 & -1 \\ 2 & 0 & 3 \\ 3 & -1 & 2 \end{bmatrix}, B = \begin{bmatrix} 1 & 3 \\ 0 & 2 \\ -1 & 4 \end{bmatrix} \text{ ಮತ್ತು } C = \begin{bmatrix} 1 & 2 & 3 & -4 \\ 2 & 0 & -2 & 1 \end{bmatrix}$$

ಆದರೆ, A(BC) ಮತ್ತು (AB) C ಗಳನ್ನು ಕಂಡುಹಿಡಿಯಿರಿ ಹಾಗೂ (AB)C = A(BC) ಎಂದು ತೋರಿಸಿ.

**ಪರಿಹಾರ:**

$$AB = \begin{bmatrix} 1 & 1 & -1 \\ 2 & 0 & 3 \\ 3 & -1 & 2 \end{bmatrix} \begin{bmatrix} 1 & 3 \\ 0 & 2 \\ -1 & 4 \end{bmatrix} = \begin{bmatrix} 1+0+1 & 3+2-4 \\ 2+0-3 & 6+0+12 \\ 3+0-2 & 9-2+8 \end{bmatrix} = \begin{bmatrix} 2 & 1 \\ -1 & 18 \\ 1 & 15 \end{bmatrix}$$

$$(AB)(C) = \begin{bmatrix} 2 & 1 \\ -1 & 18 \\ 1 & 15 \end{bmatrix} \begin{bmatrix} 1 & 2 & 3 & -4 \\ 2 & 0 & -2 & 1 \end{bmatrix} = \begin{bmatrix} 2+2 & 4+0 & 6-2 & -8+1 \\ -1+36 & -2+0 & -3-36 & 4+18 \\ 1+30 & 2+0 & 3-30 & -4+15 \end{bmatrix}$$

$$= \begin{bmatrix} 4 & 4 & 4 & -7 \\ 35 & -2 & -39 & 22 \\ 31 & 2 & -27 & 11 \end{bmatrix}$$

$$\text{ಈಗ } BC = \begin{bmatrix} 1 & 3 \\ 0 & 2 \\ -1 & 4 \end{bmatrix} \begin{bmatrix} 1 & 2 & 3 & -4 \\ 2 & 0 & -2 & 1 \end{bmatrix} = \begin{bmatrix} 1+6 & 2+0 & 3-6 & -4+3 \\ 0+4 & 0+0 & 0-4 & 0+2 \\ -1+8 & -2+0 & -3-8 & 4+4 \end{bmatrix}$$

$$= \begin{bmatrix} 7 & 2 & -3 & -1 \\ 4 & 0 & -4 & 2 \\ 7 & -2 & -11 & 8 \end{bmatrix}$$

$$\text{ಆದ್ದರಿಂದ, } A(BC) = \begin{bmatrix} 1 & 1 & -1 \\ 2 & 0 & 3 \\ 3 & -1 & 2 \end{bmatrix} \begin{bmatrix} 7 & 2 & -3 & -1 \\ 4 & 0 & -4 & 2 \\ 7 & -2 & -11 & 8 \end{bmatrix}$$

$$= \begin{bmatrix} 7+4-7 & 2+0+2 & -3-4+11 & -1+2-8 \\ 14+0+21 & 4+0-6 & -6+0-33 & -2+0+24 \\ 21-4+14 & 6+0-4 & -9+4-22 & -3-2+16 \end{bmatrix} = \begin{bmatrix} 4 & 4 & 4 & -7 \\ 35 & -2 & -39 & 22 \\ 31 & 2 & -27 & 11 \end{bmatrix}$$

ಸ್ಪಷ್ಟವಾಗಿ(AB)C = A(BC) ಎಂದಾಗುತ್ತದೆ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in





### ಸುಭಾಷಿತ

ಕೊಡುವ ಕ್ರಿಯೆಯು ಕೊಡುವವರು ಮತ್ತು ಸ್ವೀಕರಿಸುವವರು ಇಬ್ಬರನ್ನೂ ಒಗ್ಗೂಡಿಸುತ್ತದೆ ಮತ್ತು ಈ ಸಂಪರ್ಕವು ಆಪ್ತ ಸಂಬಂಧವೊಂದನ್ನು ಹುಟ್ಟುಹಾಕುತ್ತದೆ.
-ದೀಪಕ್ ಚೋಪ್ರಾ

# ರಸ್ತೆಗುಂಡಿ: ಚಾಟಿ ಬೀಸಿದ ಹೈಕೋರ್ಟ್ ಬಿಬಿಎಂಪಿ ಇನ್ನಾದರೂ ಎಚ್ಚೆತ್ತುಕೊಳ್ಳುವುದೇ?

ರಾಜ್ಯದ ರಾಜಧಾನಿಯ ಮುಖ್ಯ ರಸ್ತೆಗಳಲ್ಲಿ ಸದಾ ಬಾಯ್ದೆರೆದುಕೊಂಡಿರುವ ಗುಂಡಿಗಳು ನಮ್ಮ ಆಡಳಿತ ವ್ಯವಸ್ಥೆಯ ಬಗ್ಗೆ ಕುಹಕವಾಡುತ್ತಿವೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ರಸ್ತೆಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳದಿರುವುದು ನಿರ್ಲಕ್ಷ್ಯದ ಪರಮಾವಧಿ. ಆರೇಳು ತಿಂಗಳುಗಳ ಅವಧಿಯಲ್ಲಿ ನಾಲ್ಕು ಮಂದಿ ರಸ್ತೆ ಗುಂಡಿಗಳಿಂದಾಗಿಯೇ ಜೀವ ಕಳೆದುಕೊಂಡ ಬಳಿಕವೂ ಬಿಬಿಎಂಪಿ ನಿದ್ದೆಯಿಂದ ಎಚ್ಚೆತ್ತಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಸೂಚನೆ ನೀಡಿ, ಗಡುವುಗಳನ್ನು ವಿಧಿಸಿದ ನಂತರವೂ ರಸ್ತೆಗುಂಡಿಗಳನ್ನು ಮುಚ್ಚುವ ವಿಚಾರದಲ್ಲಿ ಬಿಬಿಎಂಪಿ ಅಧಿಕಾರಿಗಳು ಜವಾಬ್ದಾರಿಯನ್ನು ಅರಿತು ವರ್ತಿಸಿಲ್ಲ. ತೋರ್ಪಡಿಕೆಗೆ ಕೆಲವು ಕಡೆ ಗುಂಡಿಗಳನ್ನು ಮುಚ್ಚಿಸಿ ಸುಮ್ಮನಾದರು. 'ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದರಿಂದ ರಸ್ತೆಗುಂಡಿಗಳ ಸಮಸ್ಯೆ ಬಿಗಡಾಯಿಸಿದೆ. ಮಳೆ ಬರುವಾಗ ಗುಂಡಿ ಮುಚ್ಚಿದರೂ ಕೆಲವೇ ದಿನಗಳಲ್ಲಿ ಡಾಂಬರು ಮತ್ತೆ ಕಿತ್ತು ಹೋಗುತ್ತದೆ' ಎಂದು ಬಿಬಿಎಂಪಿ ಅಧಿಕಾರಿಗಳು ಸಬೂಬು ಹೇಳಿದ್ದರು. ಬೆಂಗಳೂರಿನಲ್ಲಿ ಮಳೆ ನಿಂತು ಒಂದೂವರೆ ತಿಂಗಳೇ ಕಳೆದಿದೆ. ಈಗಲೂ, ಗುಂಡಿಗಳಿಲ್ಲದ ರಸ್ತೆಗಳನ್ನು ದುರ್ಬೀನಿನಲ್ಲಿ ಹುಡುಕಬೇಕಾದ ಸ್ಥಿತಿ ಇದೆ. ಇವೆಲ್ಲವನ್ನೂ ಗಮನಿಸುತ್ತಿರುವ ಹೈಕೋರ್ಟ್, ರಸ್ತೆಗುಂಡಿಗಳಿಂದಾಗಿ ಜೀವಹಾನಿ ಆಗುತ್ತಿರುವ ಕುರಿತು ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ ಬಿಬಿಎಂಪಿಯನ್ನು ತೀವ್ರ ತರಾಟೆಗೆ ತೆಗೆದುಕೊಂಡಿದೆ. ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್ ಅವರನ್ನು ಉದ್ದೇಶಿಸಿ, 'ನಿಮ್ಮ ಕರ್ತವ್ಯ ನಿರ್ಲಕ್ಷ್ಯವನ್ನು ನೋಡಿಕೊಂಡು ಕೋರ್ಟ್ ಸುಮ್ಮನೆ ಕೂರಲಾಗುವುದಿಲ್ಲ. ಈಗಿಂದೀಗಲೇ ನಿಮ್ಮನ್ನು ಸೇವೆಯಿಂದ ಅಮಾನತು ಮಾಡಿ ಜೈಲಿಗೆ ಅಟ್ಟುವಂತೆ ಆದೇಶಿಸಲಾಗುವುದು' ಎಂದು ಚಾಟಿ ಬೀಸಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 1,344 ಕಿ.ಮೀ.ಗಳಷ್ಟು ಉದ್ದದ ಮುಖ್ಯ ರಸ್ತೆಗಳು ಹಾಗೂ ಉಪಮುಖ್ಯ ರಸ್ತೆಗಳು ಸೇರಿ ಒಟ್ಟು 13,974 ಕಿ.ಮೀ. ಉದ್ದದ ರಸ್ತೆ ಜಾಲ ಇದೆ. ರಸ್ತೆಗಳನ್ನು ನಿರ್ಮಿಸಿದ ಬಳಿಕ ಅವುಗಳ ನಿರ್ವಹಣೆಗೂ ವ್ಯವಸ್ಥೆ ಕಲ್ಪಿಸಬೇಕಾದುದು ಬಿಬಿಎಂಪಿಯ ಹೊಣೆ. ಅಭಿವೃದ್ಧಿಪಡಿಸಿದ ರಸ್ತೆಗಳಲ್ಲಿ ಕನಿಷ್ಠಪಕ್ಷ ಎರಡು ವರ್ಷಗಳ ಕಾಲ ಯಾವುದೇ ಸಮಸ್ಯೆ ಕಾಣಿಸದಂತೆ ಆಯಾ ಗುತ್ತಿಗೆದಾರರೇ ನೋಡಿಕೊಳ್ಳಬೇಕು. ಅವರು ಆ ಕಾರ್ಯವನ್ನು ಸರಿಯಾಗಿ ನಿಭಾಯಿಸುವಂತೆ ಮೇಲ್ವಿಚಾರಣೆ ಮಾಡಬೇಕಾದುದು ಬಿಬಿಎಂಪಿ ಅಧಿಕಾರಿಗಳ ಕರ್ತವ್ಯ. ರಸ್ತೆಗುಂಡಿಗಳನ್ನು ಮುಚ್ಚುವ ವಿಚಾರದಲ್ಲಿ ಅತೀವ ನಿರ್ಲಕ್ಷ್ಯ ತೋರುತ್ತಿರುವ ಬಿಬಿಎಂಪಿಯನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿರುವುದು ಸರಿಯಾಗಿಯೇ ಇದೆ. ಪಾಲಿಕೆಯಿಂದ ಕೆಲಸ ಮಾಡಿಸುವುದಕ್ಕೆ ಇಂತಹದ್ದೊಂದು ಕಠಿಣ ಕ್ರಮದ ಅಗತ್ಯವಿತ್ತು.



> ರಸ್ತೆಗುಂಡಿಗಳನ್ನು ಮುಚ್ಚುವುದು ಕಣ್ಣೊರೆಸುವ ತಂತ್ರ ಆಗಬಾರದು. ಈ ಸಮಸ್ಯೆ ನೀಗಿಸಲು ಸಮರೋಪಾದಿಯಲ್ಲಿ ಕೆಲಸ ಆಗಬೇಕು

ರಸ್ತೆಗಳಲ್ಲಿ ಗುಂಡಿ ಕಾಣಿಸಿಕೊಂಡರೆ ತಕ್ಷಣವೇ ಅವುಗಳನ್ನು ಮುಚ್ಚಿಸುವ ಉದ್ದೇಶದಿಂದಲೇ ಬಿಬಿಎಂಪಿಯು ಬೆಂಗಳೂರಿನ ಹೊರವಲಯದ ಕಣ್ಣೂರಿನಲ್ಲಿ ಬಿಸಿ ಡಾಂಬರು- ಜಲ್ಲಿ ಮಿಶ್ರಣ ಘಟಕವನ್ನು ₹ 7.5 ಕೋಟಿ ವೆಚ್ಚದಲ್ಲಿ ಸ್ಥಾಪಿಸಿದೆ. ಈ ಘಟಕ ಕೆಲಸ ಆರಂಭಿಸಿದ ಬಳಿಕ ನಗರದಲ್ಲಿ ರಸ್ತೆಗುಂಡಿಗಳ ಸಮಸ್ಯೆ ಇರುವುದಿಲ್ಲ ಎಂದು ಬಿಬಿಎಂಪಿ ಭರವಸೆ ನೀಡಿತ್ತು. ಈ ಘಟಕ ಕಾರ್ಯಾರಂಭ ಮಾಡಿ ಎರಡು ವರ್ಷಗಳು ಉರುಳಿದ ಬಳಿಕ ನಗರದಲ್ಲಿ ರಸ್ತೆಗುಂಡಿಗಳ ಸಮಸ್ಯೆ ಹಿಂದಿಗಿಂತಲೂ ಬಿಗಡಾಯಿಸಿದೆ. ಇದು ವಿಪರ್ಯಾಸವೇ ಸರಿ. ಈ ಘಟಕವನ್ನು ಸಮರ್ಥವಾಗಿ ಬಳಸಿಕೊಂಡು, ಸಮರೋಪಾದಿಯಲ್ಲಿ ಗುಂಡಿ ಮುಚ್ಚುವ ಕೆಲಸ ಕೈಗೊಂಡರೆ, ನಗರದ ಎಲ್ಲ ರಸ್ತೆಗಳಲ್ಲದಿದ್ದರೂ ಕಡೇಪಕ್ಷ ಮುಖ್ಯ ರಸ್ತೆಗಳಲ್ಲಿರುವ ಗುಂಡಿಗಳನ್ನಾದರೂ ಒಂದೆರಡು ವಾರಗಳಲ್ಲಿ ದುರಸ್ತಿಪಡಿಸಬಹುದು. ಇದಕ್ಕೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ದೃಢ ನಿರ್ಧಾರ ಕೈಗೊಳ್ಳುವ ಛಾತಿ ಇರಬೇಕು. ನಾಲ್ಕು ಅಮೂಲ್ಯ ಜೀವಗಳು ಬಲಿಯಾದ ಬಳಿಕವೂ, ಎಲ್ಲ ಸೌಕರ್ಯಗಳಿದ್ದರೂ, ನಗರದ ರಸ್ತೆಗುಂಡಿಗಳ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗದೇ ಇರುವ ಅಸಡ್ಡೆಗೆ ಕ್ಷಮೆ ಇಲ್ಲ. ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ ಐದು ವರ್ಷಗಳಲ್ಲಿ ₹ 20,060 ಕೋಟಿ ವೆಚ್ಚ ಮಾಡಲಾಗಿದೆ ಎಂದು ಮುಖ್ಯಮಂತ್ರಿಯವರೇ ವಿಧಾನ ಪರಿಷತ್ತಿನಲ್ಲಿ ಮಾಹಿತಿ ನೀಡಿದ್ದರು. ಅಂದರೆ, ಪ್ರತೀ ಕಿಲೊಮೀಟರ್ ರಸ್ತೆಗೆ ಐದು ವರ್ಷಗಳಲ್ಲಿ ತಲಾ ₹ 1.44 ಕೋಟಿ ವ್ಯಯಿಸಲಾಗಿದೆ. ಇಷ್ಟೊಂದು ವೆಚ್ಚ ಮಾಡಿದ ಬಳಿಕವೂ ಗುಂಡಿಗಳಿಲ್ಲದ 1 ಕಿ.ಮೀ. ಉದ್ದದ ರಸ್ತೆಯೂ ಇಲ್ಲ ಎಂಬ ವಿಚಾರವನ್ನೂ ಮುಖ್ಯಮಂತ್ರಿ ವಿಧಾನ ಪರಿಷತ್ತಿನಲ್ಲಿ ಒಪ್ಪಿಕೊಂಡಿದ್ದರು. ಭಾರಿ ಪ್ರಮಾಣದಲ್ಲಿ ಜನರ ತೆರಿಗೆ ದುಡ್ಡನ್ನು ವ್ಯಯಿಸಿದ ಬಳಿಕವೂ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಸಾಧ್ಯವಾಗದಿರುವುದನ್ನು ಆಡಳಿತ ಯಂತ್ರದ ವೈಫಲ್ಯ ಎಂದೇ ಪರಿಗಣಿಸಬೇಕಾಗುತ್ತದೆ. ಅಧಿಕಾರಿಗಳು ದಕ್ಷತೆಯಿಂದ ಕಾರ್ಯನಿರ್ವಹಿಸಲು ಎಷ್ಟರ ಮಟ್ಟಿಗೆ ಶಕ್ತರಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ. ಅಷ್ಟೇಅಲ್ಲ, ರಸ್ತೆ ಗುಂಡಿಗಳನ್ನು ಮುಚ್ಚಲು ಸೂಚನೆ ನೀಡಿ ಆರೇಳು ತಿಂಗಳುಗಳ ನಂತರವೂ ಈ ಕೆಲಸವನ್ನು ಮಾಡಿಸಲು ಸಾಧ್ಯವಾಗದ ಸರ್ಕಾರದ ಇಚ್ಛಾಶಕ್ತಿಯ ಕೊರತೆಯೂ ಈ ವಿಚಾರದಲ್ಲಿ ಢಾಳಾಗಿ ಕಾಣಿಸುತ್ತಿದೆ.

'ರಸ್ತೆಗಳು ಗುಣಮಟ್ಟದಿಂದ ಕೂಡಿರಬೇಕು. ಈ ದಿಸೆಯಲ್ಲಿ ಯಾವೆಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ, ರಸ್ತೆಗುಂಡಿ ಮುಚ್ಚಲು ಯಾವ ತಂತ್ರಜ್ಞಾನ ಅನುಸರಿಸಲಾಗುತ್ತಿದೆ ಎಂಬುದರ ಕುರಿತೂ ಮಾಹಿತಿ ನೀಡಬೇಕು. ಮುಂದಿನ ವಿಚಾರಣೆ ವೇಳೆಗೆ ಯಾವುದೇ ಸಬೂಬುಗಳನ್ನು ಹೇಳಬಾರದು' ಎಂದೂ ಬಿಬಿಎಂಪಿ ಮುಖ್ಯ ಎಂಜಿನಿಯರ್‌ಗೆ ಹೈಕೋರ್ಟ್ ಕಟ್ಟಾಜ್ಞೆ ವಿಧಿಸಿದೆ. ಪ್ರತೀ ಕಿ.ಮೀ. ರಸ್ತೆಗೆ ಐದು ವರ್ಷಗಳಲ್ಲಿ ₹ 1.44 ಕೋಟಿಗೂ ಅಧಿಕ ದುಡ್ಡು ಖರ್ಚು ಮಾಡಿದ ಬಳಿಕವೂ ಅವುಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗಿಲ್ಲ ಎಂದಾದರೆ, ಆ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಅನುಮಾನ ವ್ಯಕ್ತವಾಗುವುದು ಸಹಜ. ರಸ್ತೆಗುಂಡಿಗಳನ್ನು ಮುಚ್ಚುವುದು ಕಣ್ಣೊರೆಸುವ ತಂತ್ರ ಆಗಬಾರದು. ರಸ್ತೆಗುಂಡಿ ಸಮಸ್ಯೆ ನೀಗಿಸಲು ಸಮರೋಪಾದಿಯಲ್ಲಿ ಕೆಲಸ ಆಗಬೇಕು. ಮುಖ್ಯಮಂತ್ರಿ ಬರೀ ಹೇಳಿಕೆ ನೀಡಿ ಸುಮ್ಮನಾದರೆ ಸಾಲದು. ಬಿಬಿಎಂಪಿ ಅಧಿಕಾರಿಗಳಿಂದ ಕೆಲಸ ಮಾಡಿಸುವ ಬದ್ಧತೆಯನ್ನೂ ಪ್ರದರ್ಶಿಸಬೇಕು.

### ದಿನದ ಟ್ವೀಟ್

## ಎಲ್ಲರಿಗೂ ಅನ್ವಯವಾಗುವುದೇ?



'ಬಡತನದ ಹಿನ್ನೆಲೆಯಿಂದ ಬಂದ ಚನ್ನಿ ಅವರು ಬಡವರ ಅಗತ್ಯಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ' ಎಂಬ ಕಾರಣಕ್ಕೆ ಕಾಂಗ್ರೆಸ್ ಪಕ್ಷವು ಅವರನ್ನು ಪಂಜಾಬ್‌ನ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಿದೆ. ಅದೊಂದು ಉದಾತ್ತ ಕ್ರಮ. ಆದರೆ, ಈ 'ಬಡ ವ್ಯಕ್ತಿ' ಮಾನದಂಡವು ಕಾಂಗ್ರೆಸ್‌ನ ಭವಿಷ್ಯದ ನಾಯಕತ್ವ ಹುದ್ದೆಗಳ ವಿಷಯದಲ್ಲಿ ರಾಹುಲ್ ಮತ್ತು ಪ್ರಿಯಾಂಕಾ ಅವರು ಸ್ಪರ್ಧಿಗಳಾಗದಂತೆ ಮಾಡುವುದಿಲ್ಲವೇ?

**ರಾಹುಲ್ ಶಿವಶಂಕರ್,** ಪತ್ರಕರ್ತ, ಲೇಖಕ

### ಕಿಡಿನುಡಿ



**ಸಿಲಿಕಾನ್ ಕಣಿವೆಯಿಂದ ಕೇಸರಿ ಕಣಿವೆಗೆ ಕರ್ನಾಟಕದ ಅವರೋಹಣವು ಬಹಳಷ್ಟು ತುರ್ತಾಗಿ ಸಾಗಿದೆ.**

**ಅಭಿಷೇಕ್ ಬಕ್ಷಿ,** ಹವ್ಯಾಸಿ ಪತ್ರಕರ್ತ, ಲೇಖಕ

## 25 ವರ್ಷಗಳ ಹಿಂದೆ

ಭಾನುವಾರ, 9-2-1997

**• ರ್‍ಯಾಗಿಂಗ್: ಕಾಲೇಜುಗಳ ಮಾನ್ಯತೆ ರದ್ದು- ಎಚ್ಚರಿಕೆ**

**ಬೆಳಗಾವಿ, ಫೆ. 8**– ರ್‍ಯಾಗಿಂಗ್‌ನಂಥ ಅನಾಗರಿಕ ಕೃತ್ಯಗಳು ನಡೆಯುವ ವೈದ್ಯಕೀಯ ಕಾಲೇಜುಗಳ ಮಾನ್ಯತೆಯನ್ನು ರದ್ದು ಮಾಡಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶಂಕರ ನಾಯಕ್ ಇಂದು ಇಲ್ಲಿ ಎಚ್ಚರಿಸಿದರು.

ರಾಜ್ಯ ಸರ್ಕಾರದ ವೈದ್ಯಾಧಿಕಾರಿಗಳ 16ನೇ ವಾರ್ಷಿಕ ಸಮ್ಮೇಳನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಈಚೆಗೆ ಕೆಲವು ಕಾಲೇಜುಗಳಲ್ಲಿ ಚಿತ್ರವಿಚಿತ್ರ ಬಗೆಯಲ್ಲಿ ರ್‍ಯಾಗಿಂಗ್ ನಡೆಯುತ್ತಿರುವ ವರದಿಗಳು ಬಂದಿವೆ. ರ್‍ಯಾಗಿಂಗ್ ವಿಧಗಳನ್ನು ನೋಡಿದರೆ ಮನುಷ್ಯರಾದವರು ಯಾರೂ ಅವುಗಳನ್ನು ಮಾಡಲು ಸಾಧ್ಯವಿಲ್ಲ' ಎಂದು ಕಟುವಾಗಿ ಟೀಕಿಸಿದರು.

**• ಸಿನಿಮಾದಲ್ಲಿ ಅವಹೇಳನ ಪೊಲೀಸರ ಆಕ್ರೋಶ**

**ಬೆಂಗಳೂರು, ಫೆ. 8**– ಚಲನಚಿತ್ರಗಳಲ್ಲಿ ಪೊಲೀಸರನ್ನು ಅವಹೇಳನಕಾರಿಯಾಗಿ ಚಿತ್ರಿಸುವ ಪ್ರವೃತ್ತಿಯ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ ಸಂಘ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

## 50 ವರ್ಷಗಳ ಹಿಂದೆ

ಬುಧವಾರ, 9-2-1972

**• 216 ಸ್ಥಾನಗಳಿಗೆ 1000 ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ**

**ಬೆಂಗಳೂರು, ಫೆ. 8**– ಮಾರ್ಚ್ ತಿಂಗಳಿನಲ್ಲಿ ರಾಜ್ಯದ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ 216 ಕ್ಷೇತ್ರಗಳಲ್ಲಿ ಸುಮಾರು 1000 ಮಂದಿ ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಸಲ್ಲಿಸಿದ್ದಾರೆ.

ಆಡಳಿತ ಕಾಂಗ್ರೆಸ್ ಸ್ಪರ್ಧಿಸಲಿರುವ ಎಲ್ಲ 212 ಕ್ಷೇತ್ರಗಳಲ್ಲೂ ಪಕ್ಷದ ಅಭ್ಯರ್ಥಿಗಳು ನಾಮಪತ್ರಗಳನ್ನು ಸಲ್ಲಿಸಿದ್ದಾರೆ.

**• ಖಾಸಗಿ ಶಾಲೆಗಳ ಪರಿಶೀಲನೆಗೆ ನಾರಾಯಣ ಸ್ವಾಮಿ?**

**ಬೆಂಗಳೂರು, ಫೆ. 8**– ಖಾಸಗಿ ಶಾಲೆಗಳ ಆಡಳಿತ ಮತ್ತಿತರ ವಿಚಾರಗಳ ಬಗ್ಗೆ ಪರಿಶೀಲನೆ ನಡೆಸಲು ಸರ್ಕಾರವು ಮಾಜಿ ಮುಖ್ಯ ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಸ್ವಾಮಿ ಅವರ ನೇತೃತ್ವದ ಏಕ ಸದಸ್ಯ ಆಯೋಗವನ್ನು ರಚಿಸುವ ಸಂಭವವಿದೆ.

### ಅರಣ್ಯ, ಸರ್ಕಾರಿ ಭೂಮಿ ಹಾಗೂ ಖಾಸಗಿ ಜಮೀನು ಎಲ್ಲೆಡೆಯೂ ಹಸಿರುಕವಚ ಕುಗ್ಗುತ್ತಿದೆ

# ಮರ ಎಣಿಸುತ್ತಲೇ ಕಾಡು ಕಳೆದವರು!



ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

**ಕೇಂದ್ರ** ಅರಣ್ಯ ಮತ್ತು ಪರಿಸರ ಸಚಿವಾಲಯದ ಅಧೀನದ 'ಅರಣ್ಯ ಮೋಜಣಿ ಸಂಸ್ಥೆ'ಯು ಎರಡು ವರ್ಷಗಳಿಗೊಮ್ಮೆ ಅಧಿಕೃತವಾಗಿ ಪ್ರಕಟಿಸುವ 'ಭಾರತ ಅರಣ್ಯ ಪರಿಸ್ಥಿತಿ ವರದಿ'ಯ ಹೊಸ ಆವೃತ್ತಿಯು ಕಳೆದ ಡಿಸೆಂಬರ್ ಅಂತ್ಯಕ್ಕೆ ಹೊರಬಂದಿದೆ. ರಾಜ್ಯದಲ್ಲಿ ಈಗ ಶೇ 20.19ರಷ್ಟು ಅರಣ್ಯ ಹೊದಿಕೆಯಿದ್ದು, ಕಳೆದ ಎರಡು ವರ್ಷಗಳಲ್ಲಿ ಅದು ಸುಮಾರು 155 ಚದರ ಕಿ.ಮೀ. ಹೆಚ್ಚಾಗಿದೆಯೆಂದೂ ಈ ವರದಿ ಹೇಳಿದೆ. ಅರಣ್ಯ-ಪರಿಸರ ಪರಿಸ್ಥಿತಿಯು ಸುಧಾರಿಸುತ್ತಿದ್ದು, 'ಎಲ್ಲವೂ ಚೆನ್ನಾಗಿದೆ' ಎಂಬ ಭಾವನೆ ಉಕ್ಕಿಸುವಂತಿದೆ ಈ ವರದಿ!

ಆದರೆ, ದೇಶಕ್ಕೆ ಪ್ರಸ್ತುತ ಬೇಕಾದದ್ದು ನಮ್ಮ ಬೆನ್ನನ್ನು ನಾವೇ ತಟ್ಟಿಕೊಳ್ಳುವ ಹುಸಿ ಶ್ಲಾಘನೆಯಲ್ಲವಲ್ಲ. ನಿಖರವಾದ ಮಾಹಿತಿ ಹಾಗೂ ವಸ್ತುನಿಷ್ಠ ವಿಶ್ಲೇಷಣೆಯ ಮೂಲಕ ವಾಸ್ತವಕ್ಕೆ ಕನ್ನಡಿ ಹಿಡಿಯಬೇಕಾದ ನೈಜ ವರದಿಯ ಅಗತ್ಯವಿದೆ. ಸಂಕೀರ್ಣವಾದ ದೂರ ಸಂವೇದಿ ತಂತ್ರಜ್ಞಾನ ಹಾಗೂ ದೇಶದೆಲ್ಲೆಡೆಯಿಂದ ಕ್ರೋಡೀಕರಿಸಿದ ಅಗಾಧ ಮಾಹಿತಿಗಳ ಆಧಾರದಲ್ಲಿ, ನೂರಾರು ತಜ್ಞರು ವರ್ಷಾನುಕಾಲ ಶ್ರಮವಹಿಸಿ ರೂಪಿಸುವ ಈ ಬಗೆಯ ಇನ್ನೊಂದು ವರದಿ ತಯಾರಿಸಲು ಬೇರೆಯವರಿಗೆ ಸಾಧ್ಯವಿಲ್ಲ. ಹೀಗಾಗಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ದೀರ್ಘಾವಧಿ ನೀತಿಗಳು, ವಿವಿಧ ಯೋಜನೆಗಳು ಮತ್ತು ಹವಾಮಾನ ಬದಲಾವಣೆಯಂಥ ವಿಷಯಗಳಲ್ಲಿ ನೀತಿ ರೂಪಿಸುವ ಜಾಗತಿಕ ಸಂಸ್ಥೆ ಹಾಗೂ ಒಪ್ಪಂದಗಳು ಎಲ್ಲವೂ ಈ ವರದಿಯ ಮಾಹಿತಿಗಳನ್ನೇ ಆಶ್ರಯಿಸುವುದು. ಆದರೆ, ಈ ವರದಿಯನ್ನು ಪರಿಶೀಲಿಸಿದರೆ, ಅದು ಬಿಚ್ಚಿಡುವ ಸತ್ಯಕ್ಕಿಂತಲೂ ಮುಚ್ಚಿಡುವ ಗುಟ್ಟೇ ಹೆಚ್ಚೆಂದು ಅರಿವಾಗದಿರದು! ಹಾಗಿದ್ದಲ್ಲಿ, ಅಂಥ ವರದಿಯ ಆಧಾರದಲ್ಲಿ ರೂಪಿಸುವ ಭವಿಷ್ಯದ ಅರಣ್ಯ ಸಂರಕ್ಷಣೆಯ ನೀತಿ ಹಾಗೂ ಯೋಜನೆಗಳು ಅದೆಷ್ಟು ಪರಿಣಾಮಕಾರಿಯಾದಾವು?


ಈ ವರದಿಯ ಟೊಳ್ಳುತನ ಅರಿಯಲು, ಇದರಲ್ಲಿನ ಎರಡು ಗಂಭೀರ ನ್ಯೂನತೆಗಳನ್ನು ಉದಾಹರಣೆಯಾಗಿ ಉಲ್ಲೇಖಿಸಬಹುದಾಗಿದೆ. ವರದಿಯ ಪ್ರಕಾರ, ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಅರಣ್ಯವು ಕೊಂಚ ವಿಸ್ತರಣೆಯಾಗಿದೆ. ಆದರೆ, ಈ ತೋರಿಕೆಯ ಹೆಚ್ಚಳವು ಅಡಿಕೆ, ತೆಂಗು, ಕಾಫಿ, ರಬ್ಬರ್, ಅಕೇಶಿಯಾ ನೆಡುತೋಪುಗಳ ವಿಸ್ತರಣೆಯಿಂದಾಗಿದ್ದು ಎಂಬ ಸಂಗತಿ ಖಚಿತವಾಗಿ ಹೊರಹೊಮ್ಮಿದರೂ, ಅದನ್ನು ಸ್ಪಷ್ಟ ಮಾತಿನಲ್ಲಿ ತೆರೆದಿಡದೆ ಮರೆಮಾಚಲು ಯತ್ನಿಸಲಾಗಿದೆ! ಇನ್ನು, ನಾಡಿನಲ್ಲಿ ಶೇ 19.96ರಷ್ಟು ಅರಣ್ಯಭೂಮಿಯಿದೆ ಎಂದು ಹಲವು ದಶಕಗಳಿಂದ ಈ ವರದಿಯ ಆವೃತ್ತಿಗಳು ಹೇಳುತ್ತಿವೆ. ಕಳೆದ ಮೂರು ದಶಕಗಳಲ್ಲಾದ ವ್ಯಾಪಕ ಅರಣ್ಯಭೂಮಿ ಅತಿಕ್ರಮಣವನ್ನು ಪರಿಗಣಿಸದೆ, ಹಳೆಯ ಸರ್ಕಾರಿ ದಾಖಲೆಗಳನ್ನೇ ಮಂಡಿಸುತ್ತಿರುವುದರ ಫಲಶ್ರುತಿ ಇದು.

ವರ್ತಮಾನದ ತಳಮಟ್ಟದ ಪರಿಸ್ಥಿತಿ ಅವಲೋಕಿಸಿದರೆ, ಅರಣ್ಯ ಇಲಾಖೆ ಸುಪರ್ದಿಯಲ್ಲಿರುವ ಅರಣ್ಯಭೂಮಿ ಶೇ 12ಕ್ಕಿಂತಲೂ ಕೆಳಕ್ಕೆ ಕುಸಿದಿರಬಹುದೇನೋ!

ಹಾಗಾದರೆ, ಈ ಅಧಿಕೃತ ಸರ್ಕಾರಿ ವರದಿಯ ಮಿತಿಗಳು ಕೇವಲ ಆಕಸ್ಮಿಕವೇ? ಇಲ್ಲ, ಸಾಧ್ಯವಿಲ್ಲ. ಜನಮಾನಸದೆದುರು ಕಹಿಸತ್ಯವನ್ನು ಬಿಚ್ಚಿಡಲು ಸಾಧ್ಯವಾಗದೆ, ಪ್ರಯತ್ನಪೂರ್ವಕವಾಗಿ ಅದಕ್ಕೆ ಸಿಹಿಲೇಪ ಬಳಿಯಲು ಪ್ರಯತ್ನಿಸಿರುವುದು ಪುಟಪುಟಗಳಲ್ಲೂ ತೋರುತ್ತದೆ. ಅರಣ್ಯಭೂಮಿ, ಸರ್ಕಾರಿ ಕಂದಾಯಭೂಮಿ ಹಾಗೂ ಕೃಷಿ ಜಮೀನು- ಈ ಮೂರೂ ಬಗೆಯ ನೆಲದಲ್ಲೂ ಅರಣ್ಯ ಸಂರಕ್ಷಣೆ ಹಾಗೂ ವನೀಕರಣದ ಪ್ರಯತ್ನಗಳು ವ್ಯವಸ್ಥಿತವಾಗಿ ವಿಫಲವಾಗುತ್ತಿರುವುದನ್ನು ಹಲವು ಸ್ವತಂತ್ರ ವೈಜ್ಞಾನಿಕ ಅಧ್ಯಯನಗಳು ಸಾಬೀತುಪಡಿಸುತ್ತಲೇ ಇವೆ. ಆ ಸಮಸ್ಯೆಗಳ ಹಿಂದಿನ ಮೂಲಕಾರಣಗಳನ್ನು ಗುರುತಿಸಿ, ಪರಿಹಾರ ಮಾರ್ಗಗಳನ್ನು ಸೂಚಿಸಲು ಈ ವರದಿಯು ಪ್ರಯತ್ನಿಸಬೇಕಿತ್ತು. ಆದರೆ, ಆ ಬಗೆಯ ಪ್ರಯತ್ನಗಳೇ ವರದಿಯಲ್ಲಿ ಇರದಿರುವುದು ಖೇದಕರ. ಈ ಸಂದರ್ಭದಲ್ಲಿ, ಅರಣ್ಯ ಪರಿಸ್ಥಿತಿ ಕುರಿತು ಗಮನಿಸಲೇಬೇಕಾದ ಮೂರು ಪ್ರಮುಖ ಸವಾಲುಗಳನ್ನು ಮಾತ್ರ ಇಲ್ಲಿ ಚರ್ಚಿಸಲಾಗಿದೆ.

ಮೊದಲಿನದು, ನೈಜ ಅರಣ್ಯಗಳ ವ್ಯಾಪ್ತಿಯ ವೇಗದ ಕುಸಿತದ ಕುರಿತಾಗಿ. ನಗರೀಕರಣ, ಅಭಿವೃದ್ಧಿ ಯೋಜನೆಗಳು, ಗಣಿಗಾರಿಕೆ- ಇವಕ್ಕೆಲ್ಲ ಅರಣ್ಯವು ಬಲಿಯಾಗುತ್ತಲೇ ಇದೆಯಲ್ಲವೇ? ಅರಣ್ಯೇತರ ಉದ್ದೇಶಕ್ಕೆ ಕಾಡನ್ನು ಬಿಟ್ಟುಕೊಡುವ ಮುಂಚೆ ಅದರ ಆಗುಹೋಗುಗಳನ್ನು ಪರಾಮರ್ಶಿಸಿ ಸೂಕ್ತ ತೀರ್ಮಾನ ಕೈಗೊಳ್ಳಲೆಂದೇ ರಚಿಸಿರುವ ಸಾಂವಿಧಾನಿಕ ಅಧಿಕಾರವುಳ್ಳ ಸ್ವತಂತ್ರ ತಜ್ಞ ಸಮಿತಿಗಳು ಹಾಗೂ ವಿಸ್ತೃತವಾದ ಪ್ರಕ್ರಿಯೆಗಳಿವೆ. ಆದರೆ, ವರ್ಷದಿಂದ ವರ್ಷಕ್ಕೆ ಸರ್ಕಾರವು ಅವನ್ನು ದುರ್ಬಲಗೊಳಿಸುತ್ತಿದೆ. ಹೀಗಾಗಿ, ಅರಣ್ಯ ಪರಿವರ್ತನೆ ಎಂಬುದು ಈಗ ಹೇಗೂ ಮಾಡಲೇಬೇಕಾದ ಕೇವಲ ಅಧಿಕಾರಶಾಹಿ ಪ್ರಕ್ರಿಯೆಯಾಗಿ ಬದಲಾಗಿದೆ.

ಅಭಿವೃದ್ಧಿ ಯೋಜನೆಗಳಿಗಾಗಿ ನಷ್ಟವಾದ ಕಾಡಿಗೆ ಬದಲಾಗಿ ಬೆಳೆಸಬೇಕಾದ 'ಬದಲಿ ಅರಣ್ಯ' ಯೋಜನೆಗಳಂತೂ ದಾಖಲೆಗಳಲ್ಲೇ ಬಂದಿಯಾಗುತ್ತಿವೆ. ಇದಕ್ಕಾಗಿ ಅರಣ್ಯ ಇಲಾಖೆಯಲ್ಲಿ ಪ್ರತ್ಯೇಕ ನಿಧಿಯೂ (Compensatory Afforestation Fund) ಇದೆ! ಆದರೆ, ಕನಿಷ್ಠ ಕಳೆದ ಎರಡು ದಶಕಗಳಲ್ಲಿ ಬೆಳೆಸಿದ ಈ ಬಗೆಯ ಬದಲೀ ಅರಣ್ಯಗಳಾದರೂ ಎಷ್ಟು ಹಾಗೂ ಎಲ್ಲಿವೆ ಎಂಬುದು ಇಂದಿಗೂ ಯಾರಿಗೂ ತಿಳಿದಿಲ್ಲ! 'ಭಾರತ ಅರಣ್ಯ ಪರಿಸ್ಥಿತಿ ವರದಿ'ಯೂ ಇಂಥದ್ದೊಂದು ಮಹತ್ವದ ಅಂಶವನ್ನು ಗುರುತಿಸದಿದ್ದರೆ, ಇನ್ನಾರು ಹೇಳಬೇಕು?



ಎರಡನೆಯದು, ನಾಡಿನಲ್ಲಿ ಅಳಿದುಳಿದಿರುವ ಅರಣ್ಯವೂ ಛಿದ್ರವಾಗುತ್ತಿರುವ ಅಪಾಯದ ಕುರಿತು. ಕಾಡನ್ನು ಸೀಳುವ ಅಭಿವೃದ್ಧಿ ಹೆಸರಿನ ವಿವಿಧ ಕಾಮಗಾರಿಗಳು, ಅಕ್ರಮ ಗಣಿಗಾರಿಕೆ, ವ್ಯಾಪಕವಾದ ಅರಣ್ಯಭೂಮಿ ಅತಿಕ್ರಮಣ- ಇವೆಲ್ಲವುಗಳ ಪರಿಣಾಮವಾಗಿ, ಪಶ್ಚಿಮ ಘಟ್ಟಗಳೂ ಸೇರಿದಂತೆ ನಾಡಿನ ಕಾಡೆಲ್ಲ ಛಿದ್ರವಾಗುತ್ತಿದೆ. ಪ್ರದೇಶವೊಂದರ ಪರಿಸರದ ಸಮಗ್ರ ನಿರ್ವಹಣೆ ಮಾಡದೆ, ಅಭಿವೃದ್ಧಿ ಕಾರ್ಯಗಳನ್ನೆಲ್ಲ ತುಂಡು ಕಾಮಗಾರಿಗಳನ್ನಾಗಿ ಪರಿವರ್ತಿಸುತ್ತಿರುವ ಸರ್ಕಾರಿ ನೀತಿಯೇ ಇದಕ್ಕೆ ಕಾರಣ. ಹೀಗಾಗಿ, ತುಣುಕುಗಳಾಗುತ್ತಿರುವ ಕಾಡಿನ ಪಾರಿಸರಿಕ ಸೇವಾ ಸಾಮರ್ಥ್ಯವೇ ಕುಗ್ಗುತ್ತಿದೆ. ಕೆರೆ-ತೊರೆಗಳು ಒಣಗಿ, ಜಲಮೂಲಗಳು ಬತ್ತಿ, ಕಾಡಿನ ಪುನಶ್ಚೇತನ ತಗ್ಗಿ, ಆವಾಸಸ್ಥಾನ ಹಾಗೂ ಆಹಾರ ಮೂಲಗಳು ಕುಸಿದು ಕಾಡುಪ್ರಾಣಿಗಳು ನಾಡಿಗೆ ದಾಂಗುಡಿಯಿಡುತ್ತಿವೆ. ಹಳ್ಳಿಗರಿಗೆ ಮೇವು-ಉರುವಲಿನಂಥ ಅಗತ್ಯ ಸೇವೆ ನೀಡುವ ಗೋಮಾಳದಂಥ ಸಮುದಾಯ ಭೂಮಿಯನ್ನಾದರೂ ಹಸಿರಾಗಿಸಿ ಉಳಿಸಿಕೊಳ್ಳುವ ಬದಲು, ಸರ್ಕಾರವೇ ಅದನ್ನು ಖಾಸಗಿಯವರಿಗೆ ಹಂಚುವ ಅಪಾಯಕಾರಿ ಮಾರ್ಗ ಬೇರೆ ತುಳಿಯುತ್ತಿದೆ! ಈ ಅಪಾಯಕಾರಿ ಬೆಳವಣಿಗೆಗಳ ಕುರಿತಂತೆಲ್ಲ ಸರ್ಕಾರವನ್ನು ಎಚ್ಚರಿಸುವ ಜವಾಬ್ದಾರಿ 'ಭಾರತ ಅರಣ್ಯ ಪರಿಸ್ಥಿತಿ' ವರದಿಗೆ ಇರಬೇಕಿತ್ತಲ್ಲವೇ?

ಕೊನೆಯದಾಗಿ, ಸರ್ಕಾರಿ ಅರಣ್ಯೀಕರಣ ಯೋಜನೆಗಳ ಕುರಿತು. ಕನಿಷ್ಠ ಶೇ 33ರಷ್ಟಾದರೂ ಅರಣ್ಯದ ಹೊದಿಕೆ ಸಾಧಿಸಬೇಕೆಂಬ 'ರಾಷ್ಟ್ರೀಯ ಅರಣ್ಯ ನೀತಿಯ (1988)' ಉದ್ದೇಶ ಸಾಧಿಸಲು, ಅಪಾರ ವೆಚ್ಚದಲ್ಲಿ ಸರ್ಕಾರವು ಹಲವಾರು ಯೋಜನೆಗಳನ್ನು ಜಾರಿಗೆ ತರುತ್ತಿರುವುದೇನೋ ನಿಜ. ಆದರೆ, ಅಧಿಕಾರಶಾಹಿಯ ಜಡತ್ವ, ಭ್ರಷ್ಟಾಚಾರ ಹಾಗೂ ಜನಸಹಭಾಗಿತ್ವದ ಕೊರತೆಯಿಂದಾಗಿ ಅವೆಲ್ಲವೂ ಸೋಲುತ್ತಿವೆ. 'ಕೃಷಿ ಪ್ರೋತ್ಸಾಹ ಯೋಜನೆ' ಹಾಗೂ 'ಬಿದಿರು ಮಿಶನ್' ಯೋಜನೆಗಳು ಜಾರಿಗೆ ಬಂದು ದಶಕವಾದರೂ ವಿಫಲವಾಗುತ್ತಿರುವುದೇ ಇದಕ್ಕೆ ಸಾಕ್ಷಿ. ರೈತರೇನೋ ತಮ್ಮ ಹೊಲ-ಗದ್ದೆಗಳಂಚಿನಲ್ಲಿ ಕೃಷಿ-ಅರಣ್ಯ ತತ್ವದ ಆಧಾರದಲ್ಲಿ ಮರ ಬೆಳೆಸಲು ಪ್ರಯತ್ನಿಸುತ್ತಲೇ ಇದ್ದಾರೆ. ಆದರೆ, 'ಕರ್ನಾಟಕ ಮರ ಸಂರಕ್ಷಣೆ ಕಾಯ್ದೆ (1976)' ಹೆಸರಿನಲ್ಲಿ ಅಧಿಕಾರಶಾಹಿಯಿಂದಾಗುತ್ತಿರುವ ಶೋಷಣೆಗೆ ಕೃಷಿ ಸಮುದಾಯವೇ ಬೆಚ್ಚಿಬೀಳುತ್ತಿದೆ! ತಳಮಟ್ಟದ ಈ ವಿದ್ಯಮಾನಗಳ ಕನಿಷ್ಠ ಅರ್ಥೈಸುವಿಕೆಯೂ 'ಭಾರತ ಅರಣ್ಯ ಪರಿಸ್ಥಿತಿ' ವರದಿಗೆ ಸಾಧ್ಯವಾಗಿಲ್ಲ.

ಅರಣ್ಯ ಮತ್ತು ಪರಿಸರ ಇಲಾಖೆಯ ಯೋಜನೆಗಳು ಹಾಗೂ ಅನುದಾನದ ಲೆಕ್ಕದಲ್ಲಿ ಮುಳುಗಿದೆ. ನಾಶವಾಗುತ್ತಿರುವ ಅರಣ್ಯ ಪ್ರದೇಶ ಹಾಗೂ ಮರಗಳ ಕುರಿತಂತೆಲ್ಲ, ಸರ್ಕಾರಿ ಕಡತಗಳಲ್ಲಿ ತನಿಖೆ ಹಾಗೂ ಲೆಕ್ಕವೂ ಸಾಗಿದೆ! ಆದರೆ, ನೈಜ ಅರಣ್ಯ ಮಾತ್ರ ವೇಗವಾಗಿ ಕರಗುತ್ತ, ಭವಿಷ್ಯದ ಬದುಕು ಅಪಾಯಕ್ಕೀಡಾಗುತ್ತಿದೆ.

*ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ*

### ಚುರುಮುರಿ



## ಲೆಕ್ಚರರ್‌ಗೆ ಡ್ರೆಸ್‌ಕೋಡ್!

• ಮಣ್ಣೆರಾಜು

'ಡ್ಯಾಡಿ, ನಮ್ಮ ಕಾಲೇಜಿನಲ್ಲಿ ರೆಗ್ಯುಲರ್ ಸಬ್ಜೆಕ್ಟ್ಸ್ ಜೊತೆಗೆ ಇನ್ನೊಂದು ಸಬ್ಜೆಕ್ಟ್ ಸೇರಿಕೊಂಡಿದೆ...' ಕಾಲೇಜಿನಿಂದ ಬಂದ ಪಮ್ಮಿ ಹೇಳಿದಳು.

'ಹೌದೆ? ಸಿಲಬಸ್ ಹೆವಿ ಆಗೋದಿಲ್ವೇ?' ಶಂಕ್ರಿ ಕೇಳಿದ.

'ಆಗುತ್ತೆ, ಆದ್ರೂ ಹೊಸ ಸಬ್ಜೆಕ್ಟ್ ಸ್ಟಡಿ ಮಾಡ್ಬೇಕಾಗುತ್ತೆ'.

'ಯಾವುದೇ ಆ ಹೊಸ ಸಬ್ಜೆಕ್ಟ್? ಕಷ್ಟ ಆದ್ರೆ ಟ್ಯೂಷನ್‌ಗೆ ಸೇರಿಕೋ...' ಎಂದಳು ಸುಮಿ.

'ಪಾಲಿಟಿಕ್ಸ್ ಮಮ್ಮಿ'.

'ಪಾಲಿಟಿಕ್ಸಾ? ಅದಕ್ಕೆ ಲೆಕ್ಚರರ್ ಇದ್ದಾರಾ?'

'ಲೆಕ್ಚರರ್ ಕಾಲೇಜಿನಲ್ಲಿ ಇರೋದಿಲ್ಲ, ಹೊರಗೆ ಇರುತ್ತಾರೆ. ವಿದ್ಯಾರ್ಥಿಗಳನ್ನು ಕರೆಸಿಕೊಂಡು ಬೇಕಾದ್ದನ್ನು ಬೋಧಿಸಿ ಕಳಿಸುತ್ತಾರೆ'.

'ಇದ್ಯಾವ ಪದ್ಧತಿ?' ಶಂಕ್ರಿಗೆ ಅರ್ಥ ಆಗಲಿಲ್ಲ.

'ಡ್ಯಾಡಿ, ಕಾಲೇಜು ವಿದ್ಯಾರ್ಥಿಗಳು ಒಂದೊಂದು ರಾಜಕೀಯ ಪಕ್ಷದ ಕಾರ್ಯಕರ್ತರಂತೆ ಗುರುತಿಸಿಕೊಂಡಿದ್ದಾರೆ. ಪಾಲಿಟಿಕ್ಸ್ ಸಬ್ಜೆಕ್ಟ್‌ಗೆ ತುಂಬಾ ಸ್ಕೋಪ್ ಇದೆಯಂತೆ. ಹಾರ್ಡ್ ಸ್ಟಡಿ ಮಾಡಿದ್ರೆ ಎಮ್ಮೆಲ್ಲೆ, ಮಿನಿಸ್ಟರು ಆಗಬಹುದಂತೆ. ರೆಗ್ಯುಲರ್ ಸಬ್ಜೆಕ್ಟ್ ಬಿಟ್ಟು ಪಾಲಿಟಿಕ್ಸ್ ಕಲಿಕೆಯಲ್ಲಿ ಸ್ಟೂಡೆಂಟ್ಸ್ ಆಸಕ್ತಿ ತೋರುತ್ತಿದ್ದಾರೆ'.

'ಅರ್ಥವಾಯ್ತು ಬಿಡು... ಪಾಲಿಟಿಕ್ಸ್ ಸಿಲೆಬಸ್ಸಿನಲ್ಲಿ ವಸ್ತ್ರ ಹೋರಾಟವೂ ಸೇರಿದೆ ಅಲ್ವೇ?'

'ಹೌದು, ಈಗ ಕಾಲೇಜಿನಲ್ಲಿ ವಸ್ತ್ರದ ಬೋಧನೆ, ರೋದನೆ ಶುರುವಾಗಿದೆ'.

'ಕಾಲೇಜು ವಿದ್ಯಾರ್ಥಿಗಳಿಗೆ ಡ್ರೆಸ್‌ಕೋಡ್ ಬೇಕಾ?'

'ವಿದ್ಯಾರ್ಥಿಗಳಿಗೆ ಯಾವ ಕೋಡೂ ಬೇಡ, ಲೆಕ್ಚರರ್‌ಗಳಿಗೆ ಬೇಕಾಗುತ್ತೆ' ಎಂದಳು ಪಮ್ಮಿ.

'ಲೆಕ್ಚರರ್‌ಗಳಿಗೆ ಯಾಕೆ?'

'ಬೇಕು ಡ್ಯಾಡಿ, ಕಾಯಂ ಉಪನ್ಯಾಸಕರು ಸೂಟು-ಬೂಟು, ಆಕರ್ಷಕ ಸೀರೆ ಧರಿಸಿ ಬರುತ್ತಾರೆ, ಅತಿಥಿ ಉಪನ್ಯಾಸಕರು ಮಾತ್ರ ಸಾಮಾನ್ಯ ಷರ್ಟ್-ಪ್ಯಾಂಟ್, ಸಾಧಾರಣ ಸೀರೆ ಉಟ್ಟು ಬಂದರೆ ಸಮಾನತೆ ಎಲ್ಲಿರುತ್ತದೆ? ಸ್ಟಾಫ್ ರೂಂನ ತಾರತಮ್ಯ ನಿವಾರಣೆಗಾಗಿ ಕಾಯಂ ಮತ್ತು ಅತಿಥಿ ಉಪನ್ಯಾಸಕರಿಗೆ ಕಾಮನ್ ಡ್ರೆಸ್‌ಕೋಡ್ ಇರಬೇಕು...' ಎಂದಳು ಪಮ್ಮಿ.

### ಸಂಗತ

# ಸಂಕುಚಿತ ಭಾವ: ಹೊರತಾಗಲಾರನೇ ಗುರು?

### ಶಿಕ್ಷಕರು ಏನನ್ನು ಮಾಡಬಾರದೆಂದು ತರಬೇತಿ ಕಾರ್ಯಾಗಾರಗಳಲ್ಲಿ ತಿಳಿಸಲಾಗುವುದೋ ಕೆಲವರು ಅದನ್ನೇ ಜಾರಿಗೆ ತರಲು ಹೊರಟಿದ್ದಾರೆ

• ಎಚ್.ಕೆ.ಶರತ್

**ಶಾಲಾ-ಕಾಲೇಜುಗಳಲ್ಲಿ** ಕಲಿಕಾ ಗುಣಮಟ್ಟ ಹೆಚ್ಚಿಸಲು ಚಟುವಟಿಕೆ ಆಧಾರಿತ ಕಲಿಕೆಗೆ ಒತ್ತು ನೀಡುವ ಸಲುವಾಗಿ ಶಿಕ್ಷಕರನ್ನು ಸಜ್ಜುಗೊಳಿಸುವ ಪ್ರಕ್ರಿಯೆಗೆ ಕಳೆದ ಕೆಲ ವರ್ಷಗಳಿಂದ ವೇಗ ದಕ್ಕಿದೆ. ಎಂಜಿನಿಯರಿಂಗ್ ಕಾಲೇಜುಗಳ ಶಿಕ್ಷಕರಿಗೆ ಇತ್ತೀಚೆಗೆ ಆಯೋಜಿಸಿದ್ದ ಇಂತಹದ್ದೇ ಒಂದು ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಕೋಲ್ಕತ್ತದ ರಾಷ್ಟ್ರೀಯ ತಾಂತ್ರಿಕ ಶಿಕ್ಷಕರ ತರಬೇತಿ ಮತ್ತು ಸಂಶೋಧನಾ ಸಂಸ್ಥೆಯ (ಎನ್‌ಐಟಿಟಿಟಿಆರ್) ಪ್ರಾಧ್ಯಾಪಕ ಡಾ. ಅರ್ಪಣ್ ಕುಮಾರ್ ಮೊಂಡಲ್, ಚಟುವಟಿಕೆ ಹಾಗೂ ಯೋಜನೆ (ಪ್ರಾಜೆಕ್ಟ್) ಆಧಾರಿತ ಕಲಿಕೆಗೆ ವಿದ್ಯಾರ್ಥಿಗಳ ಗುಂಪು ರಚಿಸಲು ಅನುಸರಿಸಬೇಕಾದ ಮಾನದಂಡಗಳ ಕುರಿತು ನೀಡಿದ ಮಾರ್ಗದರ್ಶನ ಗಮನಾರ್ಹವಾಗಿತ್ತು.

'ಯೋಜನೆ ಆಧಾರಿತ ಕಲಿಕೆಯಿಂದ (ಪಿಬಿಎಲ್) ಉತ್ತಮ ಫಲಿತಾಂಶ ಪಡೆಯಲು ಭಿನ್ನ ಹಿನ್ನೆಲೆಯ ವಿದ್ಯಾರ್ಥಿಗಳು ಒಂದುಗೂಡಿ ಕಲಿಯುವಂತೆ ಮಾಡುವುದು ಅತ್ಯಗತ್ಯ. ಸಾಧ್ಯವಾದಷ್ಟೂ ಭಿನ್ನ ಲಿಂಗ, ಜಾತಿ, ಧರ್ಮ, ಪ್ರದೇಶದ ವಿದ್ಯಾರ್ಥಿಗಳು ಗುಂಪಿನಲ್ಲಿರುವಂತೆ ನೋಡಿಕೊಳ್ಳಿ' ಎಂದು ಅವರು ಎಂಜಿನಿಯರಿಂಗ್ ಕಾಲೇಜುಗಳ ಶಿಕ್ಷಕರಿಗೆ ತಿಳಿ ಹೇಳಿದರು. ಹೀಗೆ ಮಾಡುವ ಅಗತ್ಯ ಏಕಿದೆ ಎಂಬುದನ್ನೂ ವಿವರಿಸಿದ ಅವರು, 'ವಿದ್ಯಾರ್ಥಿಗಳು ಓದು ಮುಗಿಸಿದ ನಂತರ ಕೆಲಸಕ್ಕೆ ಸೇರಿದರೆ ಅಲ್ಲಿ ವಿವಿಧ ಹಿನ್ನೆಲೆಯ ಜನರೊಂದಿಗೆ ಸೌಹಾರ್ದಯುತವಾಗಿ ಬೆರೆತು ಕೆಲಸ ಮಾಡುವ ಸನ್ನಿವೇಶ ಎದುರಾಗುತ್ತದೆ. ಅದಕ್ಕೆ ಈಗಲೇ ಅವರನ್ನು ಅಣಿಗೊಳಿಸುವುದು ನಮ್ಮ ಆದ್ಯತೆಯಾಗಬೇಕು' ಎಂದರು.

ಕೆಲ ದಿನಗಳಿಂದ ರಾಜ್ಯದಲ್ಲಿ ಭುಗಿಲೆದ್ದಿರುವ ಹಿಜಾಬ್ ವಿವಾದ ಮತ್ತು ಅದರ ಸುತ್ತಲಿನ ವಿದ್ಯಮಾನಗಳನ್ನು ಗಮನಿಸಿದರೆ, ಶಿಕ್ಷಕರಾದವರು ಏನನ್ನು ಮಾಡಬಾರದೆಂದು ತರಬೇತಿ ಕಾರ್ಯಾಗಾರಗಳಲ್ಲಿ ತಿಳಿಸಿಕೊಡಲಾಗುವುದೋ ಅದನ್ನೇ ಜಾರಿಗೆ ತರಲು ಕೆಲವರು ಇನ್ನಿಲ್ಲದ ಮುತುವರ್ಜಿ ತೋರುತ್ತಿರುವಂತೆ ಭಾಸವಾಗುತ್ತಿದೆ. ಭಿನ್ನ ಹಿನ್ನೆಲೆ, ಸಂಸ್ಕೃತಿಯ ವಿದ್ಯಾರ್ಥಿಗಳು ಒಂದುಗೂಡಿ ಕಲಿಯಲು ಅಗತ್ಯವಿರುವ ಸೌಹಾರ್ದ ವಾತಾವರಣ ನಿರ್ಮಿಸಲು ಶ್ರಮಿಸಬೇಕಿದ್ದವರೇ, ವಿದ್ಯಾರ್ಥಿಗಳು ಧಾರ್ಮಿಕ ವಿಷಯಗಳಿಗೆ ಕಾದಾಡಿಕೊಂಡು ತಮ್ಮ ಸಹಪಾಠಿಗಳ ವಿರುದ್ಧವೇ ಹಗೆ ಸಾಧಿಸುವಂತೆ ಪ್ರಚೋದಿಸುತ್ತಿರುವುದು ವಿಪರ್ಯಾಸ.

ಎರಡು ವರ್ಷಗಳಿಂದ ಕೊರೊನಾ ಕಾರಣಕ್ಕೆ ವಿದ್ಯಾರ್ಥಿಗಳ ಸಹಜ ಕಲಿಕೆಗೆ ತಡೆ ಬಿದ್ದಿದೆ. ಈಗಷ್ಟೇ ಶಾಲಾ-ಕಾಲೇಜುಗಳತ್ತ ಮತ್ತೆ ಮುಖಮಾಡುತ್ತಿರುವ ವಿದ್ಯಾರ್ಥಿಗಳನ್ನು ಕಲಿಕೆಗೆ ಅಣಿಗೊಳಿಸುವ ಸವಾಲು ಎದುರಿಸುವುದು ಹೇಗೆಂದು ಚಿಂತಿಸಬೇಕಿದ್ದ ಶಿಕ್ಷಕರು ಹಾಗೂ ನೀತಿ ನಿರೂಪಕರು, ಹಿಜಾಬ್ ಧರಿಸಿಕೊಂಡು ಬರುವ ಮಕ್ಕಳನ್ನು ಸೇರಿಸಬೇಕೋ ಬೇಡವೋ ಎನ್ನುವ ಕ್ಷುಲ್ಲಕ ವಿಷಯದ ಕುರಿತು ಚರ್ಚಿಸುವಂತಾದುದು ನಾಚಿಕೆಗೇಡು.

ಮನೆಯಲ್ಲಿನ ಆರ್ಥಿಕ ಬಿಕ್ಕಟ್ಟಿನಿಂದಾಗಿ ಬಹಳಷ್ಟು ವಿದ್ಯಾರ್ಥಿಗಳಿಗೆ ಓದು ಮುಂದುವರಿಸುವುದೇ ಸವಾಲಾಗಿದೆ. ಈಗಷ್ಟೇ ಓದು ಮುಗಿಸಿರುವ ಯುವಸಮೂಹ ಅರ್ಹತೆಗೆ ತಕ್ಕ ಕೆಲಸ ಸಿಗದೆ ಪರಿತಪಿಸುತ್ತಿದೆ. ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಮಯ ಹಾಗೂ ಸಂಪನ್ಮೂಲಗಳನ್ನು ವಿನಿಯೋಗಿಸಬೇಕಿದ್ದ ನಮ್ಮನ್ನಾಳುವವರು, ಯುವ ಸಮುದಾಯದ ನಡುವೆ ಧರ್ಮದ ಕಂದಕ ಸೃಷ್ಟಿಸಿ, ಅವರ ಗಮನ ಸರ್ಕಾರದ ವೈಫಲ್ಯಗಳ ಕಡೆಗೆ ತಿರುಗದಿರುವಂತೆ ನೋಡಿಕೊಳ್ಳುವುದರಲ್ಲಿ ತಲ್ಲೀನರಾಗಿದ್ದಾರೆ.



ಎಂಜಿನಿಯರಿಂಗ್ ಮೊದಲ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಕಾಲೇಜು ಕ್ಯಾಂಪಸ್‌ನಲ್ಲಿ ಹೇಗಿರಬೇಕು, ಏನೆಲ್ಲ ಮಾಡಬಾರದು ಎಂಬ ಕುರಿತು ಮಾರ್ಗದರ್ಶನ ನೀಡುತ್ತಿದ್ದ ಹಿರಿಯ ಪ್ರಾಧ್ಯಾಪಕರೊಬ್ಬರು ಆಡಿದ ಮಾತುಗಳು ಕೆಲವು ಶಿಕ್ಷಕರ ಮನಃಸ್ಥಿತಿಗೆ ಕನ್ನಡಿ ಹಿಡಿಯುತ್ತಿದ್ದವು. 'ನೀವೆಲ್ಲ ಏನಾದ್ರೂ ಕಾಲೇಜು ಕ್ಯಾಂಟೀನ್ ಕಟ್ಟೆ ಮೇಲೆ ಕುಳಿತು ಹರಟೆ ಹೊಡೆಯೋದು ಕಣ್ಣಿಗೆ ಬಿದ್ರೆ ನಾನು ಸುಮ್ಮನಿರಲ್ಲ. ನಿಮ್ಮ ಗಮನ ಓದುವುದರ ಕಡೆಗೆ ಮಾತ್ರ ಇರ್ಬೇಕು. ಓದಲು ಕ್ಯಾಂಟೀನ್ ಸೂಕ್ತವಾದ ಸ್ಥಳವಲ್ಲ' ಅಂತ ಎಚ್ಚರಿಕೆ ನೀಡುತ್ತಿದ್ದರು. ಹುಡುಗ-ಹುಡುಗಿ ಒಟ್ಟಿಗೆ ಕುಳಿತು ಮಾತನಾಡುವುದನ್ನು ಎಂದಿಗೂ ಸಹಿಸದ ಅವರು, ಅದನ್ನು ನೇರವಾಗಿ ಹೇಳಲು ಸಾಧ್ಯವಾಗದೆ ಸುತ್ತಿಬಳಸಿ ಹೇಳಲು ಮುಂದಾಗಿದ್ದರು.

ಜಾತಿ, ಧರ್ಮ, ಉಡುಗೆ, ಕೇಶವಿನ್ಯಾಸ, ಬಾಹ್ಯ ರೂಪ, ಹುಡುಗ-ಹುಡುಗಿ ನಡುವಿನ ಬಾಂಧವ್ಯ ಇವುಗಳ ಕುರಿತು ಎಷ್ಟೋ ಶಿಕ್ಷಕರು ತೀರಾ ಸಂಕುಚಿತ ಪ್ರಜ್ಞೆ ಹೊಂದಿರುತ್ತಾರೆ. ಅವುಗಳನ್ನೆಲ್ಲ ತೀರಾ ಬಹಿರಂಗವಾಗಿ ವ್ಯಕ್ತಪಡಿಸಲು ಹಿಂಜರಿಯುವ ವಾತಾವರಣ ತಾವು ಕಾರ್ಯನಿರ್ವಹಿಸುವ ಶಿಕ್ಷಣ ಸಂಸ್ಥೆಗಳಲ್ಲಿ ಇದ್ದ ಕಾರಣದಿಂದ ಅವರೆಲ್ಲ ಇಷ್ಟು ದಿನ ಹೇಗೋ ಸುಮ್ಮನಿದ್ದರು. ಬದಲಾದ ಸಾಮಾಜಿಕ ಸನ್ನಿವೇಶದಿಂದಾಗಿ ಇಂತಹ ಶಿಕ್ಷಕರ ಸಂಕುಚಿತ ಮನೋಭಾವವೇ ಮೌಲ್ಯವಾಗಿ ತೋರತೊಡಗಿದರೆ ಅಚ್ಚರಿ ಪಡುವಂತಿಲ್ಲ.

ಧಾರ್ಮಿಕ ದ್ವೇಷದ ನಂಜು ತುಂಬಿಕೊಂಡಿರುವ ಕೆಲವು ಶಿಕ್ಷಕರಿಗೆ ಇತ್ತೀಚೆಗಿನ ಹಿಜಾಬ್ ವಿವಾದ ಮತ್ತು ಅದನ್ನು ಸರ್ಕಾರ ನಿರ್ವಹಿಸಿದ ರೀತಿಯಿಂದ ರವಾನೆಯಾಗುತ್ತಿರುವ ಸಂದೇಶ ಯಾವುದೆಂದು ಅರಿಯಲು ಹೆಚ್ಚೇನೂ ತಿಣುಕಾಡಬೇಕಿಲ್ಲ. ತಮ್ಮೊಳಗಿನ ಸಂಕುಚಿತ ಪ್ರಜ್ಞೆಗೆ ಆಳುವವರೇ ನೀರೆರೆಯುತ್ತಾರೆಂಬ ಸೂಚನೆ ಸಿಕ್ಕರೆ ಇವರಿಗಿಂತಲೂ ಒಂದು ಹೆಜ್ಜೆ ಮುಂದಿಡಲು ಅಣಿಯಾಗಿರುವ ಕೆಲವು ಶಿಕ್ಷಕರು, ಮಕ್ಕಳ ಭವಿಷ್ಯವನ್ನು ಹೇಗೆ ರೂಪಿಸಬಹುದೆಂದು ನಾವು ಚಿಂತಿಸಬೇಕಲ್ಲವೇ? ದ್ವೇಷ ತುಂಬಿದ ಸಮಾಜ ರೂಪಿಸುವುದೇ ಇಂದಿನ ಆದ್ಯತೆಯೇ?

### ವಾಚಕರ ವಾಣಿ

## ಕೆಪಿಎಸ್‌ಸಿ ಭ್ರಷ್ಟತೆಗೆ ಬಲ?

ಹೈಕೋರ್ಟ್ ರದ್ದುಪಡಿಸಿರುವ 2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಆಯ್ಕೆ ಪಟ್ಟಿಯನ್ನು ಊರ್ಜಿತಗೊಳಿಸಲು ಹೊರಟಿರುವ ರಾಜ್ಯ ಸರ್ಕಾರದ ನಿರ್ಧಾರ ಸಂಶಯಾಸ್ಪದವಾದದ್ದು. ಈ ಮೂಲಕ, ಅಕ್ರಮವಾಗಿ ನೇಮಕಗೊಂಡಿದ್ದಾರೆ ಎಂದು ಸಿಐಡಿ ತನಿಖೆಯಿಂದ ಗುರುತಿಸಿಕೊಂಡವರಿಗೂ ಹುದ್ದೆ ನೀಡಿ ಇಡೀ ಪಟ್ಟಿಯನ್ನು ಸಕ್ರಮಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಅಕ್ರಮ ಆಯ್ಕೆ ಎಂದು ಹೈಕೋರ್ಟ್ ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ಕೂಡಾ ಎತ್ತಿ ಹಿಡಿದಿತ್ತು. ಅಲ್ಲದೆ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿತ್ತು.

ಆದರೆ ಇದೀಗ, ಈ ಪಟ್ಟಿಯನ್ನು ಊರ್ಜಿತಗೊಳಿಸಲು ಸರ್ಕಾರ ಮುಂದಾಗಿರುವುದರಿಂದ ಬೇಲಿಯೇ ಎದ್ದು ಹೊಲ ಮೇಯ್ದಂತೆ ಆಗಿದೆ. ಮೊದಲೇ ಭ್ರಷ್ಟಾಚಾರದ ಕೂಪವಾಗಿರುವ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ಸರ್ಕಾರದ ಈ ನಡೆಯಿಂದ ಬಲ ಬಂದಂತಾಗುತ್ತದೆ.

**ಶಿವಾನಂದ ಹಂಡಿ,** ವಿಜಯಪುರ

## ಚರ್ಚಿಸುವ ವ್ಯವಧಾನ ಇರಲಿ

'ಭಾರತೀಯ ಆಡಳಿತ ಸೇವೆ' (ಐಎಎಸ್) ಬಗ್ಗೆ ನಾವು ಕುತೂಹಲದಿಂದ ಆಗಾಗ ಕೇಳುತ್ತಿರುತ್ತೇವೆ. ಆ ಪರೀಕ್ಷೆ ಬಲು ಕಷ್ಟ, ಸಂದರ್ಶನದಲ್ಲಂತೂ ಹತ್ತಿ ಬಂದ ಮೆಟ್ಟಿಲುಗಳೆಷ್ಟು, ಎಣ್ಣೆಯಲ್ಲಿ ಉಪ್ಪೇಕೆ ಕರಗದು, ನದಿಗಳೇಕೆ ಸಾಗರದತ್ತ, ಆಕಾಶವೇಕೆ ನೀಲಿ... ಎಂದೆಲ್ಲ ಪ್ರಶ್ನೆಗಳು. ತರಬೇತಿಯಲ್ಲಿ ಕುದುರೆ ಸವಾರಿ, ಸಸಿ ನೆಡುವುದು, ಅಡುಗೆ, ಕರಾಟೆ ಕಲಿಸುವರಂತೆ, ಎಂತಹ ಕಠಿಣ ಸಂದರ್ಭಗಳನ್ನೂ ಧೈರ್ಯ, ಸಂಯಮದಿಂದ ಎದುರಿಸಿ ಪರಿಹರಿಸುವ ಕೌಶಲಕ್ಕೆ ಸಿದ್ಧಗೊಳಿಸುವರಂತೆ ಮುಂತಾಗಿ ನಾವೆಲ್ಲ ಕೇಳಿದ್ದೇ ಕೇಳಿದ್ದು. ಇದು ಸರಿ.

ಐಎಎಸ್ ಅಧಿಕಾರಿಗಳಿಂದ ನಾಡಿನ ಸವಾಲುಗಳಿಗೆ ಒಮ್ಮೆಗೇ ಪರಿಹಾರ ದೊರಕಲು ಸಾಧ್ಯವೋ ಅಲ್ಲವೋ ಬೇರೆ ಪ್ರಶ್ನೆ. ಕನಿಷ್ಠ ಅವರೆಲ್ಲ ಒಂದೆಡೆ ಕೂತು ಆ ದಿಸೆಯಲ್ಲಿ ಆದ್ಯತೆ ಮೇರೆಗೆ ಚರ್ಚಿಸುವ ವ್ಯವಧಾನವನ್ನಾದರೂ ಕಲ್ಪಿಸಿಕೊಳ್ಳಬಹುದಲ್ಲವೇ? ಅದು ಹೌದಾದರೆ ಅದೆಷ್ಟೋ ಸಾಮಾಜಿಕ, ಆರ್ಥಿಕ ಸಮಸ್ಯೆಗಳು ಕೊಂಚಮಟ್ಟಿಗಾದರೂ ಹಗುರವಾದಾವು.

**ಬಿಂಡಿಗನವಿಲೆ ಭಗವಾನ್,** ಬೆಂಗಳೂರು

## ಕಾಲೇಜಿನಲ್ಲಿ ಕಾಮನಬಿಲ್ಲು?!

ಹಿಜಾಬ್‌ಗಾಗಿ ಹೊರಬರುತ್ತಿವೆ
ಸಾಲುಸಾಲು ಬಣ್ಣದ ಶಾಲು
ಒಂದು ಸಂಘಟನೆಯ ಕೇಸರಿ ಶಾಲು
ಮತ್ತೊಂದು ಸಂಘಟನೆಯ ನೀಲಿ ಶಾಲು
ಕನ್ನಡ ಸಂಘಟನೆಗಳಿಂದ
ಬರಬಹುದೇನೋ ಹಳದಿ- ಕೆಂಪು ಶಾಲು
ಕೊನೆಗೆ ಬರದಿರುತ್ತದೆಯೇ
ರೈತ ಸಂಘದ ಹಸಿರು ಶಾಲು?
ಅಂತೂ ಇಂತೂ ಕಾಲೇಜು
ತುಂಬಾ ಕಾಮನಬಿಲ್ಲು
ಕ್ಯಾಂಪಸ್ ಸದಾ ಕಲರ್‌ಫುಲ್ಲು!

**ಜೆ.ಬಿ.ಮಂಜುನಾಥ,** ಪಾಂಡವಪುರ

## ನಾಗರಿಕ ಸಮಾಜ ತಲೆತಗ್ಗಿಸುವ ನಡೆ

ರಾಜ್ಯದಲ್ಲಿ ಹಿಜಾಬ್-ಕೇಸರಿ ಶಾಲು ಸಂಘರ್ಷ ತಾರಕಕ್ಕೇರಿದೆ. ಆರಂಭದಲ್ಲಿ ಬರೀ ಪ್ರತಿಭಟನೆಗೆ ಮೀಸಲಾಗಿದ್ದ ಹೋರಾಟ ನಂತರ ಕಲ್ಲು ತೂರಾಟ, ಬಾವುಟಗಳ ಹಾರಾಟ, ಪರ- ವಿರೋಧದ ಘೋಷಣೆಯಂತಹ ವಿದ್ಯಮಾನಗಳಿಗೂ ಸಾಕ್ಷಿಯಾಗುತ್ತಿದೆ. ಒಂದೇ ಕಾಲೇಜಿಗೆ ಸೀಮಿತವಾಗಿದ್ದ ವಿವಾದವನ್ನು ಆರಂಭದಲ್ಲೇ ಚಿವುಟಿ ಹಾಕಬೇಕಿದ್ದ ಸರ್ಕಾರ ಮತ್ತಷ್ಟು ವಿಸ್ತರಣೆಗೆ ಅವಕಾಶ ಮಾಡಿತು. ವಿರೋಧ ಪಕ್ಷಗಳು ಕೂಡ ತಮ್ಮ ಜವಾಬ್ದಾರಿ ಮರೆತು ನಡೆದುಕೊಳ್ಳುತ್ತಿವೆ.

ಸ್ವಚ್ಛ ಮನಸ್ಸುಗಳ ನಡುವೆ ವಿಷಬೀಜ ಬಿತ್ತಿ ಮೋಜು ನೋಡಲಾಗುತ್ತಿದ್ದು, ಭ್ರಾತೃತ್ವ, ಸಮಾನತೆ, ಸಹಿಷ್ಣುತೆ, ಏಕತೆಯ ಸಮಾಜವನ್ನು ಹಾದಿ ತಪ್ಪಿಸಲಾಗುತ್ತಿದೆ. ನಾವು ಎತ್ತ ಸಾಗುತ್ತಿದ್ದೇವೆ ಎಂಬ ಪ್ರಶ್ನೆ ಮೂಡುವಂತಾಗಿದೆ. ಇಂತಹ ಬೆಳವಣಿಗೆಗಳಿಂದ ಅಮಾಯಕ ಮಕ್ಕಳು ಶಿಕ್ಷಣ ವಂಚಿತರಾಗುತ್ತಿರುವುದು ದುರಂತವೇ ಸರಿ. ಅನವಶ್ಯಕ ವಿವಾದಗಳಿಂದ ಪ್ರಜ್ಞಾವಂತ ನಾಗರಿಕ ಸಮಾಜ ತಲೆ ತಗ್ಗಿಸುವಂತಾಗಿದೆ.

**ಬಸವರಾಜ ಎಸ್. ಕುಂಬಾರ,** ಹೆಬ್ಬಳ್ಳಿ, ಬಾದಾಮಿ

## ನೌಕರರ ಮಂಪರು ಪರೀಕ್ಷೆ ನಡೆಯಲಿ

ಸರ್ಕಾರಿ ಕಚೇರಿಗಳಲ್ಲಿ ಲಂಚ, ಕಮಿಷನ್ ಹಾವಳಿಯನ್ನು ತಡೆದು ಪಾರದರ್ಶಕ ಆಡಳಿತ ನೀಡುವ ದೃಷ್ಟಿಯಿಂದ, ಸರ್ಕಾರಿ ನೌಕರರು ಪ್ರತಿನಿತ್ಯ ಕರ್ತವ್ಯಕ್ಕೆ ಹಾಜರಾಗುವಾಗ ತಮ್ಮ ಜೇಬಿನಲ್ಲಿರುವ ನಗದು ಹಣವೆಷ್ಟು ಎಂಬುದನ್ನು ಘೋಷಿಸಿ, ಕಚೇರಿಯ ದಾಖಲಾತಿ ವಹಿಯಲ್ಲಿ ಪ್ರತಿನಿತ್ಯ ನಮೂದಿಸಬೇಕು ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ. ಆದರೆ ಭ್ರಷ್ಟಾಚಾರ ತಡೆಯಲು ಈ ಮಾರ್ಗ ಯಶಸ್ವಿಯಾಗುವುದೇ ಎಂಬ ಪ್ರಶ್ನೆ ಕಾಡುವುದು ಸಹಜ. ಲಂಚಕ್ಕಾಗಿ ಹಪಹಪಿಸುವ ಭ್ರಷ್ಟ ನೌಕರ ವರ್ಗವು ಕಚೇರಿಗಳಲ್ಲಿಯೇ ವ್ಯವಹರಿಸುತ್ತದೆ ಎಂಬುದು ದೂರದ ಮಾತು. ಭ್ರಷ್ಟತೆಗಾಗಿ ಬೇರೆ ವಾಮಮಾರ್ಗದ ಮೂಲಕ ತಮ್ಮ ಇಲಾಖೆಯ ಕಚೇರಿಗಳನ್ನು ಬಿಟ್ಟು ಖಾಸಗಿ ಪ್ರದೇಶಗಳು, ಹೋಟೆಲ್, ಉಪಾಹಾರ ಮಂದಿರಗಳಲ್ಲಿ ತಮ್ಮ ಖಾಸಗಿ ದಲ್ಲಾಳಿಗಳ ಮುಖೇನ ಲಂಚದ ವ್ಯವಹಾರ ಕುದುರಿಸುವ ಜಾಣತನದ ಭ್ರಷ್ಟ ಅಧಿಕಾರಿ, ನೌಕರ ವರ್ಗವನ್ನು ಎಲ್ಲ ಕಚೇರಿಗಳಲ್ಲೂ ಕಾಣಬಹುದಾಗಿದೆ.

ಉನ್ನತ ಮಟ್ಟದ ಅಧಿಕಾರಿಗಳಿಂದ ಹಿಡಿದು, ಕೆಳ ಹಂತದ ನೌಕರ ವರ್ಗದವರೆಗೆ ಎಲ್ಲರನ್ನೂ ಇಂತಿಷ್ಟು ತಿಂಗಳಿಗೊಮ್ಮೆ ಕಡ್ಡಾಯವಾಗಿ ಮಂಪರು ಪರೀಕ್ಷೆಗೆ ಒಳಪಡಿಸುವ ಕಠಿಣ ಕಾನೂನು ಜಾರಿಗೆ ತರಬೇಕು. ಆಗಲಾದರೂ ಸರ್ಕಾರಿ ಇಲಾಖೆಗಳಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯವಾಗಬಹುದೇನೋ?

**ಆರ್.ಬಿ.ಜಿ.ಘಂಟಿ,** ಅಮೀನಗಡ, ಬಾಗಲಕೋಟೆ

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

# ಬಾಹ್ಯಾಕಾಶ: ತ್ಯಾಜ್ಯದ ಗೋಜಲು

• ಆಲಿಸ್ ಗೋರ್ಮನ್

**1958ರಲ್ಲಿ** ಅಮೆರಿಕದ ವ್ಯಾನ್‌ಗಾರ್ಡ್ ಉಪಗ್ರಹ ಹಾಗೂ ಅದನ್ನು ಹೊತ್ತು ಸಾಗಿದ್ದ ರಾಕೆಟ್‌ನ ಕೆಲವು ಭಾಗಗಳು ಬಾಹ್ಯಾಕಾಶ ಸೇರುವ ಮೂಲಕ ಹೊಸ ಅಧ್ಯಾಯ ಬರೆದಿದ್ದವು. ಅದು ಮನುಷ್ಯನು ಭೂಮಿಯಾಚೆಗೆ ಅಡಿಯಿಡುವ ಸಾಮರ್ಥ್ಯ ಪಡೆದ ಮೊದಲ ಹೆಗ್ಗುರುತಾಗಿತ್ತು. ಅಂತೆಯೇ ಇದು, ಬಾಹ್ಯಾಕಾಶ ತ್ಯಾಜ್ಯ ಸೃಷ್ಟಿಸಿದ ಮೊದಲ ವಿದ್ಯಮಾನವೂ ಆಗಿತ್ತು.

ಬಾಹ್ಯಾಕಾಶದಲ್ಲಿ ಮಾನವ ನಿರ್ಮಿತವಾದ, 10 ಸೆಂಟಿಮೀಟರ್‌ಗೂ ಹೆಚ್ಚು ಗಾತ್ರದ ಸುಮಾರು 27,000 ವಸ್ತುಗಳಿವೆ ಎಂದು ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ 'ನಾಸಾ' ಅಂದಾಜಿಸಿದೆ. ಇವೆಲ್ಲವನ್ನೂ ಬಾಹ್ಯಾಕಾಶ ತ್ಯಾಜ್ಯ ಎಂದು ವರ್ಗೀಕರಿಸಲಾಗಿದೆ. ಇವುಗಳಿಂದ ಈಗಾಗಲೀ ಅಥವಾ ಭವಿಷ್ಯದಲ್ಲಾಗಲೀ ಯಾವುದೇ ಪ್ರಯೋಜನವಿಲ್ಲ. ಹಳೆಯ ಉಪಗ್ರಹಗಳು, ರಾಕೆಟ್‌ನ ಅವಶೇಷಗಳು, ಉಪಗ್ರಹಗಳ ಸ್ಫೋಟದ ಬಳಿಕ ಉಳಿದುಕೊಂಡಿರುವ ತುಣುಕುಗಳು ಸಾವಿರ ಸಂಖ್ಯೆಯಲ್ಲಿವೆ. ಇವಲ್ಲದೇ, ಲಕ್ಷಾಂತರ ಸಂಖ್ಯೆಯ ದೂಳಿನ ಗಾತ್ರದ ಕಣಗಳು ಬಾಹ್ಯಾಕಾಶದಲ್ಲಿ ಉಳಿದುಕೊಂಡಿವೆ.

ವೇಗವಾಗಿ ಸಂಚರಿಸುವ ಎರಡು ಉಪಗ್ರಹಗಳು ಪರಸ್ಪರ ಡಿಕ್ಕಿ ಹೊಡೆದಾಗ ಆಗುವ ಅಪಾಯ ಅಧಿಕ. ಇಂತಹ ಘರ್ಷಣೆ ತೀವ್ರ ಸ್ವರೂಪದಲ್ಲಿದ್ದಾಗ ಅದನ್ನು 'ಕೆಸ್ಲರ್ ಸಿಂಡ್ರೋಮ್' ಎನ್ನಲಾಗುತ್ತದೆ. ಈ ವಿದ್ಯಮಾನಗಳು ಹೆಚ್ಚಾದರೆ, ಭೂ ಕಕ್ಷೆಯನ್ನು ಬಳಸುವುದೇ ಕಷ್ಟವಾಗಬಹುದು.

'ಸ್ಪೇಸ್ ಎಕ್ಸ್'ನಂತಹ ಖಾಸಗಿ ಸಂಸ್ಥೆಗಳು ಇತ್ತೀಚೆಗೆ ಬಾಹ್ಯಾಕಾಶ ಯೋಜನೆಗಳನ್ನು ಪೈಪೋಟಿಗೆ ಬಿದ್ದಂತೆ ಮಾಡುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಸ್ಪೇಸ್ ಎಕ್ಸ್ ಸಂಸ್ಥೆಯು ಮುಂದಿನ 10 ವರ್ಷಗಳಲ್ಲಿ 1 ಲಕ್ಷ ಉಪಗ್ರಹಗಳನ್ನು ಉಡ್ಡಯನ ಮಾಡುವ ಯೋಜನೆ ಹಾಕಿಕೊಂಡಿದೆ. 2021ರಲ್ಲಿ ರಷ್ಯಾ ಪ್ರಯೋಗಿಸಿದ ಉಪಗ್ರಹ ನಿಗ್ರಹ ಕ್ಷಿಪಣಿಯು ಪ್ರತಿ ಬಾರಿ ಉಪಗ್ರಹವೊಂದನ್ನು ಸ್ಫೋಟಿಸಿದಾಗ ಸಾವಿರಾರು ತುಣುಕು ತ್ಯಾಜ್ಯ ಸೃಷ್ಟಿ ಆಗುತ್ತದೆ.

ಬಾಹ್ಯಾಕಾಶ ತ್ಯಾಜ್ಯ ಎಂದರೇನು, ಎಷ್ಟಿದೆ, ಎಲ್ಲಿದೆ ಎಂಬ ಬಗ್ಗೆ ನಮಗೆ ಮಾಹಿತಿಯ ಕೊರತೆ ಇರುವುದೇ ದೊಡ್ಡ ಸಮಸ್ಯೆ. ಒಂದು ಬಾಹ್ಯಾಕಾಶ ತುಣುಕು ಮತ್ತೊಂದನ್ನು ಯಾವಾಗ ಸಂಧಿಸುತ್ತದೆ ಹಾಗೂ ಅದು ಕೆಸ್ಲರ್ ಸಿಂಡ್ರೋಮ್ ಆಗಿ ಪರಿವರ್ತನೆ ಆಗುವಂತಿದೆಯೇ ಎಂಬ ಮಾಹಿತಿ ನಮ್ಮಲ್ಲಿಲ್ಲ.

## ತಂತ್ರಜ್ಞಾನದ ಆವಿಷ್ಕಾರ ಬೇಕು

ಬಾಹ್ಯಾಕಾಶದ 'ಕತ್ತಲ ತಾಣ'ಗಳಲ್ಲಿ ಹರಡಿರುವ ಸಣ್ಣ ಸಣ್ಣ ತುಣುಕುಗಳು ಮತ್ತು ದೂಳಿನ ಕಣಗಳು ಗೋಚರಿಸುವುದಿಲ್ಲ. ಮೇಲಿನ ಕಕ್ಷೆಯಲ್ಲಿರುವ ಈ ವಸ್ತುಗಳನ್ನು ಭೂಮಿಯ ಮೇಲ್ಮೈನಿಂದ ನೋಡುವುದು ಕಷ್ಟ. ಬಾಹ್ಯಾಕಾಶ ತ್ಯಾಜ್ಯಗಳನ್ನು ಪತ್ತೆ ಹಚ್ಚುವ ತಂತ್ರಜ್ಞಾನದ ಆವಿಷ್ಕಾರವು ಈ ಸಮಸ್ಯೆಗೆ ಪರಿಹಾರ ಒದಗಿಸಬಲ್ಲದು. 2019ರಲ್ಲಿ ನ್ಯೂಜಿಲೆಂಡ್‌ನ ಲಿಯೊಲ್ಯಾಬ್ಸ್ ಸಂಸ್ಥೆಯು ಹೊಸ ಬಾಹ್ಯಾಕಾಶ ರೇಡಾರ್ ರೂಪಿಸಿತ್ತು. ಇದು ಪೆಸಿಫಿಕ್ ವಲಯದಲ್ಲಿ ಕೆಲವು ಕತ್ತಲ ತಾಣಗಳನ್ನು ಗುರುತಿಸಿತ್ತು. ಭೂ ಕಕ್ಷೆಯಲ್ಲಿ ಸುತ್ತುವ ಉಪಗ್ರಹಗಳ ಸ್ಥಿತಿಯ ಮೇಲ್ವಿಚಾರಣೆಯೂ ಸೇರಿದಂತೆ ಭೂ ಕಕ್ಷೆಯಲ್ಲಿ ನಡೆಯುವ ವಿದ್ಯಮಾನಗಳ ಮೇಲೆ ನಿಗಾ ವಹಿಸುವ ಸಾಮರ್ಥ್ಯವನ್ನು ಎಚ್‌ಇಒ ರೊಬಾಟಿಕ್ಸ್ ಸಂಸ್ಥೆ ಅಭಿವೃದ್ಧಿಪಡಿಸುತ್ತಿದೆ.


## ಅಂತರರಾಷ್ಟ್ರೀಯ ಸಹಕಾರ

ಬಾಹ್ಯಾಕಾಶ ದಟ್ಟಣೆ ನಿರ್ವಹಣೆಯು ಈ ಸಮಸ್ಯೆ ನಿವಾರಣೆ ನಿಟ್ಟಿನಲ್ಲಿ ಮತ್ತೊಂದು ಮಹತ್ವದ ಕ್ರಮ. ಬಾಹ್ಯಾಕಾಶ ವಸ್ತುಗಳ ಸಂಘರ್ಷವನ್ನು ತಪ್ಪಿಸಲು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾಹಿತಿ ವಿನಿಮಯ, ಸಹಕಾರ ಮೊದಲಾದ ಕ್ರಮಗಳಿಂದ ಬಾಹ್ಯಾಕಾಶವನ್ನು ದಕ್ಷತೆ ಹಾಗೂ ಸುಸ್ಥಿರವಾಗಿ ಬಳಸಿಕೊಳ್ಳುವುದು ಬಾಹ್ಯಾಕಾಶ ದಟ್ಟಣೆ ನಿರ್ವಹಣೆಯ ಉದ್ದೇಶ.

ಅಂತರ್‌ಸಂಸ್ಥೆ ಬಾಹ್ಯಾಕಾಶ ತ್ಯಾಜ್ಯ ಸಹಕಾರ ಸಮಿತಿಯು (ಎಐಡಿಸಿ) ಬಾಹ್ಯಾಕಾಶದಲ್ಲಿ ತ್ಯಾಜ್ಯ ಶೋಧ, ಪ್ರಗತಿಯ ಮೇಲ್ವಿಚಾರಣೆಯಲ್ಲಿ ಸಹಕಾರ ಒದಗಿಸುತ್ತದೆ. ಪ್ರತಿಯೊಂದು ಬಾಹ್ಯಾಕಾಶ ಯೋಜನೆಯು ತ್ಯಾಜ್ಯ ನಿರ್ವಹಣೆ ಮಾಡುವ ಕುರಿತಂತೆ ಈ ಸಮಿತಿ ಶಿಫಾರಸು ಮಾಡುತ್ತದೆ.

ವಿಶ್ವಸಂಸ್ಥೆಯ 'ಬಾಹ್ಯಾಕಾಶ ವಿದ್ಯಮಾನ ಕಚೇರಿ' ಹಾಗೂ 'ಬಾಹ್ಯಾಕಾಶದ ಶಾಂತಿಯುತ ಬಳಕೆ ಸಮಿತಿ'ಗಳು ಸಹ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಹತ್ವದ ಸಂಸ್ಥೆಗಳೆನಿಸಿವೆ. ದೀರ್ಘಾವಧಿಯ ಸುಸ್ಥಿರ ಬಾಹ್ಯಾಕಾಶ ಚಟುವಟಿಕೆ ಕುರಿತಂತೆ ವಿಶ್ವಸಂಸ್ಥೆಯು 2018ರಲ್ಲೇ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿತ್ತು. ಬಾಹ್ಯಾಕಾಶ ಕಾರ್ಯಕ್ರಮಗಳ ಮೂಲಕ ಯಾವ ಸಂಸ್ಥೆಯೂ ತ್ಯಾಜ್ಯ ಉತ್ಪಾದನೆಗೆ ಕಾರಣವಾಗಬಾರದು ಎಂದು ಎಲ್ಲ ಸರ್ಕಾರಗಳಿಗೆ ಮಾರ್ಗಸೂಚಿ ನಿರ್ದೇಶನಗಳನ್ನು ನೀಡಿತ್ತು. ತ್ಯಾಜ್ಯ ಉತ್ಪಾದನೆ ಕಡಿತಗೊಳಿಸುವ ಕುರಿತಂತೆ ನಾಸಾ, ಐರೋಪ್ಯ ಬಾಹ್ಯಾಕಾಶ ಸಂಸ್ಥೆಗಳೂ ನಿಯಮಗಳನ್ನು ರೂಪಿಸಿವೆ. ಕಾರ್ಯಾಚರಣೆ ಪೂರ್ಣಗೊಳಿಸಿದ ಉಪಗ್ರಹದ ಇಂಧನ, ಬ್ಯಾಟರಿ ಸಾಮರ್ಥ್ಯಗಳನ್ನು ನಿಷ್ಕ್ರಿಯಗೊಳಿಸುವುದರಿಂದ ಘರ್ಷಣೆ ಆಗುವುದನ್ನು ತಗ್ಗಿಸಬಹುದು ಎಂಬ ಅಂಶವನ್ನೂ ಉಲ್ಲೇಖಿಸಲಾಗಿದೆ.

ಆದರೆ ಉಡ್ಡಯನ ಮಾಡಲಾಗುವ ಶೇ 60ರಷ್ಟು ಉಪಗ್ರಹಗಳಲ್ಲಿ ಈ ಮಾರ್ಗಸೂಚಿಗಳ ಪಾಲನೆಯಾಗುತ್ತಿಲ್ಲ. ಭವಿಷ್ಯದ ತಲೆಮಾರಿಗೆ ಬಾಹ್ಯಾಕಾಶವನ್ನು ಸುರಕ್ಷಿತವಾಗಿ ವರ್ಗಾಯಿಸುವ ಹಲವು ಯತ್ನಗಳು ಕಾರ್ಯರೂಪಕ್ಕೆ ಬರಬೇಕಿವೆ.



ಅಮೆರಿಕದ ನಾಸಾದ ಕಲಾವಿದರ ಕಲ್ಪನೆಯಲ್ಲಿ ಭೂಮಿಯ ಸುತ್ತ ಇರುವ ಬಾಹ್ಯಾಕಾಶ ತ್ಯಾಜ್ಯದ ದಟ್ಟಣೆ —ನಾಸಾ ಚಿತ್ರ

## ಪರಿಹಾರ ಮಾರ್ಗಗಳೇನು?

ಬಾಹ್ಯಾಕಾಶದಲ್ಲಿನ ತ್ಯಾಜ್ಯವನ್ನು ವಿಲೇವಾರಿ ಮಾಡಲು ಹಲವು ಮಾರ್ಗೋಪಾಯಗಳನ್ನು ಕಲ್ಪಿಸಿಕೊಳ್ಳಲಾಗಿದೆ. ಅವುಗಳನ್ನು ಕಾರ್ಯರೂಪಕ್ಕೆ ತರುವ ಬಗ್ಗೆಯೂ ಪ್ರಯೋಗಗಳು ನಡೆಯುತ್ತಿವೆ. ಈ ಮಾರ್ಗೋಪಾಯಗಳ ಸಾಧಕ–ಬಾಧಕಗಳನ್ನೂ ಪರಿಶೀಲಿಸಲಾಗಿದೆ. ವಿವಿಧ ದೇಶಗಳ ಬಾಹ್ಯಾಕಾಶ ಸಂಸ್ಥೆಗಳು, ಖಾಸಗಿ ಕಂಪನಿಗಳು ಮತ್ತು ಸಂಶೋಧನಾ ಸಂಸ್ಥೆಗಳು ಈ ದಿಸೆಯಲ್ಲಿ ಪ್ರಯೋಗಗಳನ್ನು ನಡೆಸುತ್ತಿವೆ. ಆದರೆ, 'ಏನೇ ಮಾಡಿದರೂ ಬಾಹ್ಯಾಕಾಶದಿಂದ ಈ ತ್ಯಾಜ್ಯವನ್ನು ಸಂಪೂರ್ಣವಾಗಿ ವಿಲೇವಾರಿ ಮಾಡಲು ಸಾಧ್ಯವಿಲ್ಲ. ತ್ಯಾಜ್ಯವು ಬಾಹ್ಯಾಕಾಶದಲ್ಲಿ ಇರಲಿದೆ' ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

## ಏನೂ ಮಾಡದೇ ಇರುವುದು

ಬಾಹ್ಯಾಕಾಶ ತ್ಯಾಜ್ಯವನ್ನು ವಿಲೇವಾರಿ ಮಾಡಲು ಏನೂ ಮಾಡದೇ ಇರುವುದೂ ಒಂದು ಕ್ರಮ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಕಡಿಮೆ ಎತ್ತರದ ಕಕ್ಷೆಗಳಲ್ಲಿ ಇರುವ ಬಾಹ್ಯಾಕಾಶ ತ್ಯಾಜ್ಯವು ಕಾಲಕ್ರಮೇಣ ಭೂಮಿಯ ವಾತಾವರಣವನ್ನು ಪ್ರವೇಶಿಸುವ ಸಾಧ್ಯತೆ ಇರುತ್ತದೆ. ಹೀಗೆ ಪ್ರವೇಶಿಸುವಾಗ ಉಂಟಾಗುವ ಘರ್ಷಣೆಯಲ್ಲಿ ಅವು ಸುಟ್ಟುಹೋಗುವ ಸಾಧ್ಯತೆ ಅತ್ಯಧಿಕವಾಗಿರುತ್ತದೆ. ನೈಸರ್ಗಿಕವಾಗಿ ನಡೆಯುವ ಈ ಕ್ರಿಯೆಯ ಮೂಲಕ ಬಾಹ್ಯಾಕಾಶ ತ್ಯಾಜ್ಯಗಳು ವಿಲೇವಾರಿಯಾಗುತ್ತವೆ.

ಆದರೆ, ಇದರಲ್ಲಿ ಎರಡು ಸಮಸ್ಯೆಗಳಿವೆ. ಹೀಗೆ ತ್ಯಾಜ್ಯಗಳು ಭೂಮಿಯ ವಾತಾವರಣವನ್ನು ಪ್ರವೇಶಿಸಲು ಸಾವಿರಾರು ವರ್ಷಗಳು ಬೇಕು. ಈ ಅವಧಿಯಲ್ಲಿ ಭೂಮಿಯಿಂದ ಬಾಹ್ಯಾಕಾಶಕ್ಕೆ ಮತ್ತೆ ಉಪಗ್ರಹಗಳನ್ನು ಮತ್ತು ರಾಕೆಟ್‌ಗಳನ್ನು ಕಳಿಸಬಾರದು. ಹೀಗೆ ಕಳುಹಿಸುತ್ತಿದ್ದರೆ ಬಾಹ್ಯಾಕಾಶ ಸೇರುವ ಕೃತಕ ವಸ್ತುಗಳ ಸಂಖ್ಯೆಯು, ಅಲ್ಲಿಂದ ವಿಲೇವಾರಿಯಾಗುವ ತ್ಯಾಜ್ಯದ ಸಂಖ್ಯೆಗಿಂತ ಅಧಿಕವಾಗಿರುತ್ತದೆ. ಇದರಿಂದ ತ್ಯಾಜ್ಯದ ಪ್ರಮಾಣ ಕಡಿಮೆಯಾಗುವುದೇ ಇಲ್ಲ. ಅಲ್ಲದೆ, ತ್ಯಾಜ್ಯಗಳು ವಾತಾವರಣವನ್ನು ಪ್ರವೇಶಿಸುವಾಗ ದಹನವಾಗಿ ಸೃಷ್ಟಿಯಾಗುವ ಅಪಾಯಕಾರಿ ಅನಿಲ ಮತ್ತು ಹೊಗೆಯು ಓಜೋನ್ ಪದರಕ್ಕೆ ಹಾನಿಯುಂಟುಮಾಡುತ್ತವೆ. ಈ ಎಲ್ಲಾ ಕಾರಣಗಳಿಗಾಗಿ ಈ ಮಾರ್ಗೋಪಾಯವು ಕಾರ್ಯಸಾಧುವಲ್ಲ ಎಂಬ ವಾದವಿದೆ.

## ಮಸಣ ಕಕ್ಷೆಗೆ ದೂಡುವುದು

ಹೆಚ್ಚು ದಟ್ಟಣೆ ಇಲ್ಲದ ಕಕ್ಷೆಗಳಿಗೆ ಈ ತ್ಯಾಜ್ಯವನ್ನು ದೂಡುವುದೂ ಸಹ ಒಂದು ಪರಿಣಾಮಕಾರಿ ಮಾರ್ಗೋಪಾಯ ಎಂದು ಪ್ರತಿಪಾದಿಸಲಾಗಿದೆ. ಯಾವುದೇ ಕಾರ್ಯಾಚರಣೆಗೆ ಬಳಕೆಯಾಗದೇ ಇರುವ ಉಪಗ್ರಹಗಳು, ರಾಕೆಟ್‌ನ ಕವಚ ಮತ್ತು ಬಿಡಿಭಾಗಗಳು, ಛಿದ್ರವಾಗಿರುವ ಉಪಕರಣಗಳನ್ನು ಬಾಹ್ಯಾಕಾಶ ಬಲೆ, ಬಾಣಲೆಯಂತಹ ಪರಿಕರಗಳನ್ನು ಬಳಸಿ ಕಲೆ ಹಾಕುವುದು. ಆನಂತರ, ಹೆಚ್ಚು ಬಳಕೆಯಲ್ಲಿ ಇರದ ಕಕ್ಷೆಗಳತ್ತ ಅವನ್ನು ಒಯ್ದು ಬಿಡುಗಡೆ ಮಾಡುವುದು ಈ ಮಾರ್ಗೋಪಾಯದ ಕಾರ್ಯವಿಧಾನ. ಹೀಗೆ ತ್ಯಾಜ್ಯವನ್ನು ಬಿಡುಗಡೆ ಮಾಡುವ ಕ್ಷಕೆಗಳನ್ನು ಮಸಣ ಕಕ್ಷೆ ಎಂದು ಕರೆಯಲಾಗುತ್ತದೆ.

ಈ ಕಾರ್ಯಾಚರಣೆಗೆ ಅಗತ್ಯವಿರುವ ಉಪಕರಣಗಳನ್ನು ಅಭಿವೃದ್ಧಿಪಡಿಸುವ ಕಾರ್ಯಗಳು ಜಗತ್ತಿನ ಹಲವೆಡೆ ನಡೆಯುತ್ತಿದೆ. ಸುರೇ ಸ್ಯಾಟಲೈಟ್ ಟೆಕ್ನಾಲಜಿ (ಎಸ್‌ಎಸ್‌ಟಿಎಲ್) ಎಂಬ ಕಂಪನಿ 2019ರಲ್ಲಿ ಬಾಹ್ಯಾಕಾಶದಲ್ಲಿನ ತ್ಯಾಜ್ಯವನ್ನು ತನ್ನತ್ತ ಸೆಳೆದುಕೊಳ್ಳುವ ಮುಳ್ಳುಗುದ್ದಲಿಯಂತಹ ಉಪಕರಣವನ್ನು ಅಭಿವೃದ್ಧಿಪಡಿಸಿತ್ತು. ಅದರ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿತ್ತು. ಈ ಮುಳ್ಳುಗುದ್ದಲಿಯಿಂದ ಸಂಗ್ರಹಿಸಿದ ತ್ಯಾಜ್ಯವನ್ನು ಮಸಣ ಕಕ್ಷೆಗೆ ಒಯ್ದು ಬಿಡುಗಡೆ ಮಾಡುವ ಉಪಕರಣವನ್ನು ಎಸ್‌ಎಸ್‌ಟಿಎಲ್ ಮತ್ತು ಸಿಂಗಪುರದ ಆಸ್ಟ್ರೋಸ್ಕೇಲ್ ಎಂಬ ಕಂಪನಿ ಜಂಟಿಯಾಗಿ ಅಭಿವೃದ್ಧಿಪಡಿಸುತ್ತಿವೆ.

ಐರೋಪ್ಯ ಬಾಹ್ಯಾಕಾಶ ಸಂಸ್ಥೆಯ ಸಹಯೋಗದಲ್ಲಿ ಸ್ವಿಡ್ಜರ್ಲೆಂಡ್‌ನ ಕ್ಲಿಯರ್‌ಸ್ಪೇಸ್ ಎಂಬ ಕಂಪನಿಯು, ಇಂತಹದ್ದೇ ಉಪಕರಣವನ್ನು ಅಭಿವೃದ್ಧಿಪಡಿಸುತ್ತಿದೆ. 2025ರಲ್ಲಿ ಅದನ್ನು ಬಾಹ್ಯಾಕಾಶಕ್ಕೆ ಕಳುಹಿಸುವ ಗುರಿ ಹಾಕಿಕೊಳ್ಳಲಾಗಿದೆ.

ಲೇಖಕಿ: ಅಡಿಲೇಡ್‌ನ ಫ್ಲಿಂಡರ್ಸ್ ವಿಶ್ವವಿದ್ಯಾಲಯದಲ್ಲಿ ಬಾಹ್ಯಾಕಾಶ ತಜ್ಞೆ

## ಮರುಬಳಕೆ

ಬಾಹ್ಯಾಕಾಶ ತ್ಯಾಜ್ಯವನ್ನು ಮರುಬಳಕೆ ಮಾಡುವುದು ಸಹ ವಿಲೇವಾರಿಯ ಒಂದು ಸ್ವರೂಪ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಈಗ ಬಳಕೆಯಲ್ಲಿ ಇರದೇ ಇರುವ ಉಪಗ್ರಹಗಳು ಸಂಪೂರ್ಣವಾಗಿ ನಿಷ್ಕ್ರಿಯವಾಗಿರುವುದಿಲ್ಲ. ಅವುಗಳನ್ನು ಬಾಹ್ಯಾಕಾಶಕ್ಕೆ ಕಳುಹಿಸಿದ ಉದ್ದೇಶ ಈಡೇರಿರುತ್ತದೆ ಅಷ್ಟೆ. ಅಂತಹ ಉಪಗ್ರಹಗಳನ್ನು ಬೇರೆ ಉದ್ದೇಶಗಳಿಗೆ ಮತ್ತು ಕಾರ್ಯಾಚರಣೆಗಳಿಗೆ ಬಳಕೆ ಮಾಡಿಕೊಳ್ಳಬಹುದು.

ಛಿದ್ರವಾಗಿರುವ ವಸ್ತುಗಳನ್ನು ಬಾಹ್ಯಾಕಾಶದಲ್ಲಿ ರಾಕೆಟ್ ಇಂಧನವಾಗಿ ಮರುಬಳಕೆ ಮಾಡಬಹುದು. ಈ ವಸ್ತುಗಳನ್ನು ಬಾಹ್ಯಾಕಾಶದಲ್ಲಿ ಗಗನಯಾನಿಗಳ ಸೂರುಗಳನ್ನು ನಿರ್ಮಿಸಲು ಬಳಸಬಹುದು. ರಾಕೆಟ್‌ನ ಕವಚಗಳನ್ನು ಈ ಕಾರ್ಯಕ್ಕೆ ಬಳಕೆ ಮಾಡಿಕೊಳ್ಳುವ ಪ್ರಯೋಗವನ್ನು ಆಸ್ಟ್ರೇಲಿಯಾದ ನ್ಯೂಮನ್ ಸ್ಪೇಸ್ ನಡೆಸುತ್ತಿದೆ. ಬಾಹ್ಯಾಕಾಶದಲ್ಲೇ ದೀರ್ಘಾವಧಿಯಲ್ಲಿ ಕರಗಿಹೋಗುವ ವಸ್ತುಗಳನ್ನು ರಾಕೆಟ್ ಮತ್ತು ಉಪಗ್ರಹ ತಯಾರಿಕೆಯಲ್ಲಿ ಬಳಸುವ ಬಗ್ಗೆ ಜಪಾನ್‌ನಲ್ಲಿ ಸಂಶೋಧನೆ ನಡೆಯುತ್ತಿದೆ.

## ದುರ್ಬಳಕೆಯ ಅಪಾಯ

ಬಾಹ್ಯಾಕಾಶ ತ್ಯಾಜ್ಯವನ್ನು ವಿಲೇವಾರಿ ಮಾಡುವ ಯಾವುದೇ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದರೂ, ಅದರ ಜತೆಯಲ್ಲಿ ದೊಡ್ಡ ಅಪಾಯವು ಇದೆ ಎಂದು ವಿಜ್ಞಾನಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ತ್ಯಾಜ್ಯ ವಿಲೇವಾರಿ ತಂತ್ರಜ್ಞಾನವನ್ನು ಸಕ್ರಿಯವಾಗಿರುವ ಉಪಗ್ರಹಗಳನ್ನು ನಾಶ ಮಾಡಲೂ ಬಳಕೆ ಮಾಡಿಕೊಳ್ಳಬಹುದಾಗಿದೆ. ಈ ಮೂಲಕ ಒಂದು ದೇಶವು, ಮತ್ತೊಂದು ದೇಶದ ಬಾಹ್ಯಾಕಾಶ ಸ್ವತ್ತುಗಳನ್ನು ನಾಶ ಮಾಡಬಹುದು ಮತ್ತು ಆ ಮೂಲಕ ಆ ದೇಶದ ಸಂಪರ್ಕ–ಸಂವಹನ ವ್ಯವಸ್ಥೆ, ಹವಾಮಾನ ಮುನ್ಸೂಚನೆ ವ್ಯವಸ್ಥೆ, ರಕ್ಷಣಾ ವ್ಯವಸ್ಥೆಯನ್ನು ನಿಷ್ಕ್ರಿಯಗೊಳಿಸುವ ಅಪಾಯವಿರುತ್ತದೆ. ಇದೆಲ್ಲವೂ ಬಾಹ್ಯಾಕಾಶ ಸಮರಕ್ಕೆ ಕಾರಣವಾಗುವ ಅಪಾಯವೂ ಇದೆ. ಹೀಗಾಗಿ ಇಂತಹ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವಾಗ, ಅವುಗಳ ದುರ್ಬಳಕೆಯ ಸಾಧ್ಯತೆಗಳನ್ನೂ ಪರಿಗಣಿಸಬೇಕು ಎಂದು ವಿಜ್ಞಾನಿಗಳು ಎಚ್ಚರಿಕೆ ನೀಡಿದ್ದಾರೆ.

## ವೇದವ್ಯಾಸರ ಶಿವಪುರಾಣಸಾರ





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 40

### ಜಪತಪಗಳ ಪುಣ್ಯಫಲಗಳು

ಈಗ ಸೂತಮುನಿಯು ಜಪತಪಗಳ ವಿವರ ನೀಡುತ್ತಾನೆ.

ತೀರ್ಥಪ್ರದೇಶದಿಂದ ದಕ್ಷಿಣ ಭಾಗದಲ್ಲಿರುವಂತಹ ಪ್ರಶಸ್ತ ವಾದ ಮಠ, ಮಂತ್ರಾಲಯ, ಇಲ್ಲವೇ ದೇವಾಲಯ, ಪರಿಶುದ್ಧವಾದ ಮನೆಯಲ್ಲಿ ಕುಳಿತು, ಈಶ್ವರ, ಗೌರೀ, ಷಣ್ಮುಖ, ವಿಷ್ಣು, ಬ್ರಹ್ಮ, ಚಂದ್ರ, ಯಮ ದೇವತೆಗಳನ್ನು ನಮಸ್ಕರಿಸಬೇಕು. ಮೊದಲು ಓಂಕಾರವನ್ನುಚ್ಚರಿಸಿ ಸ್ಥಿರವಾದ ಮನಸ್ಸಿನಿಂದ ಗಾಯತ್ರೀಜಪವನ್ನು ಮಾಡಬೇಕು. ಜೀವನೂ ಬ್ರಹ್ಮನೂ ಭಿನ್ನರಲ್ಲ – ಎಂಬ ಅರ್ಥವುಳ್ಳ ಓಂಕಾರಾರ್ಥವನ್ನು ಅನು ಸಂಧಾನಮಾಡುತ್ತಾ, ಓಂಕಾರವನ್ನು ಜಪಿಸಬೇಕು. ಲೋಕಗಳನ್ನೂ ಸೃಷ್ಟಿಸುವಂತಹ ಬ್ರಹ್ಮ, ಅವುಗಳನ್ನು ಪಾಲಿಸುವಂತಹ ವಿಷ್ಣು, ಮತ್ತು ಪ್ರಳಯಕಾಲದಲ್ಲಿ ಆ ಲೋಕಗಳನ್ನೂ ಸಂಹರಿಸುವವನೂ, ಅಗ್ನಿಯಂತೆ ಪ್ರಕಾಶರೂಪನೂ ಆದಂತಹ ರುದ್ರನನ್ನು ಉಪಾಸಿಸಬೇಕು. ಜ್ಞಾನೇಂ ದ್ರಿಯ, ಕರ್ಮೇಂದ್ರಿಯಗಳು, ಮನಸ್ಸು, ಅದರ ವೃತ್ತಿಗಳು, ಭೋಗ ಮತ್ತು ಮುಕ್ತಿಗಳನ್ನುಂಟುಮಾಡುವಂತಹ ಧರ್ಮ ಮತ್ತು ಇವೆಲ್ಲವುಗಳನ್ನೂ ಪ್ರೇರೇಪಿಸುವಂತಹ ಬ್ರಹ್ಮವಸ್ತುವನ್ನು ಉಪಾಸಿಸುವೆವು – ಎಂದು ಧ್ಯಾನ ಮಾಡುತ್ತಾ ಜಪಿಸಬೇಕು. ಹೀಗೆ ಜಪಿಸಿದವನು ನಿಶ್ಚಯವಾಗಿಯೂ ಬ್ರಹ್ಮವಸ್ತುವನ್ನು ಪಡೆಯುವನು.

ಮೂಲಪ್ರಕೃತಿಯನ್ನು ಪ್ರಾರಂಭಿಸಿ, ಹನ್ನೆರಡನೆಯ ಅಂಶದ ಮೇಲ್ಭಾಗದಲ್ಲಿರುವಂತಹ ವಿದ್ಯೇಶ, ಬ್ರಹ್ಮ, ವಿಷ್ಣು, ಈಶ್ವರ, ಜೀವಾತ್ಮ, ಪರಮಾತ್ಮ ಇವರೆಲ್ಲರೂ ಬ್ರಹ್ಮಸ್ವರೂಪರೆಂದೂ ತಾನೂ ಬ್ರಹ್ಮಸ್ವರೂಪನೆಂದೂ 'ಸೋಹಂ' ಭಾವದಿಂದ ಅನುಸಂಧಾನಮಾಡುತ್ತಾ ಜಪಿಸಬೇಕು. ಆ ವಿದ್ಯೇಶ್ವರ ಮುಂತಾದವರನ್ನೇ ಶರೀರದ ಹೊರಪ್ರದೇಶದಲ್ಲಿಯೂ ಭಾವಿಸಬೇಕು. ಮಹತ್ವವನ್ನು ಪ್ರಾರಂಭಿಸಿ ಒಂದೊಂದು ಜಪದಿಂದ ಒಂದೊಂದು ಶರೀರವನ್ನ ಅತಿಕ್ರಮಿಸುತ್ತಾ ಸಾವಿರ ಶರೀರಗಳನ್ನು ಅತಿಕ್ರಮಿಸಿ ಕೊನೆಗೆ ಪರಬ್ರಹ್ಮವಸ್ತುವಿನಲ್ಲಿ ಜೀವಾತ್ಮವನ್ನು ಸೇರಿಸಬೇಕು. ಇದೇ ಜಪದ ತತ್ವ.

ಶರೀರಶುದ್ಧಿಗಾಗಿ ನೂರಿಪ್ಪತ್ತು ಗಾಯತ್ರೀಜಪ, ಎಂಟು ಗಾಯತ್ರೀಶಿರಸ್ಸಿನ ಜಪಗಳನ್ನು ಮಾಡಬೇಕು. ಸಹಸ್ರ ಗಾಯತ್ರೀಜಪವನ್ನು ನಿತ್ಯವೂ ಮಾಡಿದರೆ ಬ್ರಹ್ಮಲೋಕವು ಲಭಿಸುವುದು. ನೂರು ಜಪಗಳಿಂದ ಇಂದ್ರಪದವಿಯು ಲಭಿಸುವುದು. ಇದಕ್ಕಿಂತಲೂ ಕಡಿಮೆಯಾದ ಜಪದಿಂದ ತನ್ನ ಕುಲರಕ್ಷಣೆ ಆಗುತ್ತದೆ. ಆ ರೀತಿ ಜಪಿಸುವವನು ಮುಂಬರುವ ಜನ್ಮದಲ್ಲೂ ಉತ್ತಮ ನೆಲೆಯಲ್ಲಿ ಜನಿಸುವನು. ಹನ್ನೆರಡು ಲಕ್ಷ ಜಪ ಮಾಡದಿರುವುದನ್ನು ವೇದೋಕ್ತವಾದ ಕರ್ಮಗಳಿಗೆ ಸೇರಿಸಬಾರದು. ಎಪ್ಪತ್ತು ವರ್ಷಗಳವರೆಗೆ ಈ ನಿಯಮ ಜಾರಿಯಲ್ಲಿರುತ್ತದೆ. ನಂತರ ಸನ್ಯಾಸವನ್ನು ತೆಗೆದುಕೊಳ್ಳಬೇಕು. ಸನ್ಯಾಸಿಯಾದವನು ದಿನವೂ ಪ್ರಾತಃಕಾಲ ಹನ್ನೆರಡು ಸಾವಿರ ಓಂಕಾರ ಜಪಗಳನ್ನು ಮಾಡಬೇಕು.

ಆದರೆ ನಿತ್ಯವೂ ಸರಿಯಾಗಿ ಜಪಗಳನ್ನು ಮಾಡದೆ ಒಂದು ತಿಂಗಳಿನಲ್ಲಿ ಒಂದೂವರೆ ಲಕ್ಷ ಜಪಗಳಿಗಿಂತಲೂ ಹೆಚ್ಚಾಗಿ ಜಪಗಳು ಉಳಿದುವಾದರೆ, ತಿರುಗಿ ಸನ್ಯಾಸವನ್ನು ಸ್ವೀಕರಿಸಬೇಕು. ಹೀಗೆ ಮಾಡಿದರೆ ಪಾಪನಿವೃತ್ತಿಯು ಆಗುವುದು. ಇಲ್ಲದಿದ್ದರೆ ಘೋರವಾದ ನರಕವು ಲಭಿಸುವುದು. ಆದುದರಿಂದ ಧರ್ಮ ಮತ್ತು ಅರ್ಥಗಳಲ್ಲಿ ಫಲೇಚ್ಛೆಯುಳ್ಳ ಗೃಹಸ್ಥನು ಮಾತ್ರ ಯತ್ನವನ್ನು ಮಾಡಬೇಕು; ವಿರಕ್ತನಾದ ಸನ್ಯಾಸಿಯು ಮಾಡಬಾರದು. ಧರ್ಮದಿಂದ ಅರ್ಥವೂ, ಅರ್ಥದಿಂದ ಭೋಗವೂ, ಭೋಗದಿಂದ ವೈರಾಗ್ಯವೂ ಜನಿಸುವುದು. ಧರ್ಮದಿಂದ ಸಂಪಾದಿಸಿದ ಅರ್ಥವನ್ನು ಅನುಭವಿಸುವುದರಿಂದ ವೈರಾಗ್ಯವು ಜನಿಸುವುದು.

ವಿಪರೀತವಾಗಿ ಅರ್ಥವನ್ನು ಭೋಗಿಸಿದರೆ ರಾಗವೇ ಉಂಟಾಗುವುದು, ವಿರಾಗ ಬರಲಾರದು. ಧರ್ಮವನ್ನು ಅರ್ಥದಿಂದ ಮತ್ತು ಶರೀರದಿಂದ ಮಾಡುವ ಎರಡು ಕ್ರಮವಿದೆ. ಅರ್ಥದಿಂದಾಗುವ ಧರ್ಮಕಾರ್ಯ ಯಾಗ-ಯಜ್ಞಾದಿಗಳು. ಶರೀರದಿಂದಾಗುವ ಧರ್ಮಕಾರ್ಯಗಳು ತೀರ್ಥ ಸ್ನಾನ ಇತ್ಯಾದಿಗಳು. ಫಲೇಚ್ಛೆಯಿಲ್ಲದೆ ತಪಸ್ಸನ್ನಾಚರಿಸಿದರೆ ಚಿತ್ತಶುದ್ಧಿ ಆಗುವುದು. ಅದರಿಂದ ಮುಂದೆ ಬ್ರಹ್ಮಜ್ಞಾನವುಂಟಾಗುವುದು. ಕೃತ ಮೊದಲಾದ ಯುಗಗಳಲ್ಲಿ ತಪಸ್ಸೇ ಹೆಚ್ಚಾಗಿತ್ತು ಮತ್ತು ಶ್ರೇಷ್ಠವಾಗಿಯೂ ಇತ್ತು. ಈ ಕಲಿಯುಗದಲ್ಲಿಯೇ ದ್ರವ್ಯದಿಂದಾಗುವ ಧರ್ಮವು ಹೆಚ್ಚಾಗಿವೆ. ಕೃತಯುಗದಲ್ಲಿ ಧ್ಯಾನದಿಂದಲೂ ತ್ರೇತಾಯುಗದಲ್ಲಿ ತಪಸ್ಸಿನಿಂದಲೂ ದ್ವಾಪರಯುಗದಲ್ಲಿ ಕರ್ಮದಿಂದಲೂ ಕಲಿಯುಗದಲ್ಲಿ ದೇವತಾವಿಗ್ರಹವನ್ನು ಪೂಜಿಸುವುದರಿಂದಲೂ ಜ್ಞಾನವುಂಟಾಗುವುದು.

ಅಧರ್ಮವು ಹಿಂಸಾರೂಪವಾದುದು. ಧರ್ಮವು ಸುಖರೂಪವಾದುದು. ಅಧರ್ಮದಿಂದ ದುಃಖವುಂಟಾಗುವುದು, ಧರ್ಮಾಚರಣೆಯಿಂದ ಸುಖವು ಲಭಿಸುವುದು. ದುರಾಚಾರದಿಂದ ದುಃಖವುಂಟಾಗುವುದು, ಸದಾಚಾರದಿಂದ ಸುಖವು ಲಭಿಸುವುದು. ಆದುದರಿಂದ ಭೋಗ ಮತ್ತು ಮೋಕ್ಷಗಳು ಸಿದ್ಧಿಸಬೇಕಾದರೆ ಒಳ್ಳೆಯ ಧರ್ಮವನ್ನೇ ಸಂಪಾದಿಸಬೇಕು. ಸಾವಿರ ಬಾರಿ ಚಾಂದ್ರಾಯಣವ್ರತವನ್ನು ಮಾಡಿದರೆ ಬ್ರಹ್ಮಲೋಕವು ಲಭಿಸುವುದು. ತೀರ್ಥಯಾತ್ರೆಯಿಂದುಂಟಾಗುವ ಸುಖಕ್ಕಿಂತಲೂ ಚಿರಸ್ಥಾಯಿಯಾದ ಸುಖವು ತಪಸ್ಸಿನಿಂದ ಲಭಿಸುವುದು. •

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

'ರಷ್ಯಾದ ರೈಲೊಂದರ ಮೇಲೆ ಶ್ರೀಕೃಷ್ಣ ಜೀವನಗಾತೆಯನ್ನು ಸಾರುವ ಚಿತ್ರವನ್ನು ಬಿಡಿಸಲಾಗಿದೆ. ವಿಶ್ವದಾದ್ಯಂತ ಕೃಷ್ಣ ಪ್ರಜ್ಞೆ ಮೂಡಿಸಲು ಯತ್ನಿಸುತ್ತಿರುವ ಇಸ್ಕಾನ್‌ನ ಕಾರಣದಿಂದ ಇದು ಸಾಧ್ಯವಾಗಿದೆ. ಭಾರತದ ರೈಲಿನ ಮೇಲೆ ಇಂತಹ ಚಿತ್ರ ಬಿಡಿಸಿದ್ದಿದ್ದರೆ, ದೇಶದ ಜಾತ್ಯತೀತತೆಗೆ ಧಕ್ಕೆಯಾಗುತ್ತಿತ್ತು ಎಂದು ಕೆಲವರು ಸಂಸತ್ತಿನಲ್ಲಿ ಬೊಬ್ಬೆ ಹೊಡೆಯುತ್ತಿದ್ದರು' ಎಂಬ ವಿವರ ಇರುವ ಟ್ವೀಟ್‌ನ ಸ್ಕ್ರೀನ್‌ಶಾಟ್ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ರೈಲಿನ ಮೇಲೆ ಶ್ರೀಕೃಷ್ಣನ ಪೇಂಟಿಂಗ್ ಇರುವ ಚಿತ್ರ ಸ್ಕ್ರೀನ್‌ಶಾಟ್‌ನಲ್ಲಿದೆ.



ವೈರಲ್ ಆಗಿರುವ ಚಿತ್ರ

ಇದು ತಿರುಚಲಾದ ಚಿತ್ರ ಎಂದು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಚಿತ್ರದಲ್ಲಿ ಇರುವುದು ರಷ್ಯಾದ ರೈಲಲ್ಲ. ಬದಲಿಗೆ ಆಸ್ಟ್ರೇಲಿಯಾದ ಮೆಲ್ಬರ್ನ್‌ನ ಮೆಟ್ರೊ ರೈಲು. ಆದರೆ ಅದರ ಮೇಲೆ ಶ್ರೀಕೃಷ್ಣನ ಪೇಂಟಿಂಗ್ ಇಲ್ಲ. ರೈಲಿನ ಚಿತ್ರಕ್ಕೆ ಶ್ರೀಕೃಷ್ಣ ಚಿತ್ರವನ್ನು ಸೇರಿಸಿ, ಮೂಲ ಚಿತ್ರವನ್ನು ತಿರುಚಲಾಗಿದೆ. ಜತೆಗೆ ತಪ್ಪು ಮಾಹಿತಿಯೊಂದಿಗೆ ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗಿದೆ' ಎಂದು ದಿ ಕ್ವಿಂಟ್ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

## ಗುಂಡಣ್ಣ




## ಬೆರಗಿನ ಬೆಳಕು

ಗುರುರಾಜ ಕರಜಗಿ



### ಚಿರಂಜೀವಿ ವೃಕ್ಷ

**ಪರಮಪದದಲಿ ನೋಡು; ಬೇರುಗಳ್ ವ್ಯೋಮದಲಿ |**
**ಧರೆಗಿಳಿದ ಕೊಂಬುರೆಂಬೆಗಳು, ಬಿಳಲುಗಳು ||**
**ಚಿರಂಜೀವಿ ವೃಕ್ಷವಿದು ವಿಶ್ವಜೀವಾಶ್ವತ್ಥ |**
**ಪರಿಕಿಸದರರ್ಥವನು – ಮಂಕುತಿಮ್ಮ || 559 ||**

**ಪದ-ಅರ್ಥ:** ವ್ಯೋಮ = ಆಕಾಶ, ಬಿಳಲುಗಳು = ಕೊಂಬೆಯಿಂದ ಹೊರಗೆ ಇಳಿಯುವ ಬೇರುಗಳು, ವಿಶ್ವಜೀವಾಶ್ವತ್ಥ = ವಿಶ್ವ + ಜೀವ + ಅಶ್ವತ್ಥ, ಪರಿಕಿಸಿದರರ್ಥವನು = ಪರಿಕಿಸು (ಪರೀಕ್ಷಿಸು) + ಅದರ + ಅರ್ಥವನು.

**ವಾಚ್ಯಾರ್ಥ:** ಪರಮಶಕ್ತಿಯ ಆವಾಸಸ್ಥಾನದಲ್ಲಿ ನೋಡು, ಬೇರುಗಳು ಆಕಾಶದಲ್ಲಿವೆ. ಅಲ್ಲಿಂದ ನೆಲಕ್ಕೆ ಇಳಿದ ಕೊಂಬುರೆಂಬೆಗಳು ಮತ್ತು ಬಿಳಲುಗಳು. ಇದೊಂದು ಚಿರಂಜೀವಿ ವೃಕ್ಷ. ಇದೇ ವಿಶ್ವಜೀವಾಶ್ವತ್ಥ. ಇದರ ಅರ್ಥವನ್ನು ಪರೀಕ್ಷಿಸಿ ನೋಡು.

**ವಿವರಣೆ:** ಕಠೋಪನಿಷತ್ತಿನ ಮಾತು ಹೀಗಿದೆ.

**ಉರ್ಧ್ವಮೂಲೋವಾಕ್‌ಶಾಖ ಏಷೋಶ್ವತ್ಥ:ಸನಾತನ: |**
**ತದೇವ ಶುಕ್ರಂ ತದ್ಬ್ರಹ್ಮ ತದೇವಾಮೃತಮುಚ್ಯುತೇ ||**
**ತಸ್ಮಿನ್ ಲೋಕಾ: ಶ್ರಿತಾ: ಸರ್ವೇ ತದು ನಾತ್ಯೇತಿ ಕಶ್ಚನ |**

'ಮೇಲೆ ಬೇರು. ಕೆಳಗೆ ಕೊಂಬೆ. ಈ ಅಶ್ವತ್ಥಾಮ ಸನಾತನವಾದದ್ದು. ಅದೇ ಜ್ಯೋತಿ. ಅದೇ ಬ್ರಹ್ಮ, ಅದೇ ಅಮೃತ. ಜಗತ್ತುಗಳೆಲ್ಲ ಅದನ್ನು ಆಶ್ರಯಿಸಿವೆ. ಅದನ್ನು ಮೀರಿದ್ದು ಯಾವುದೂ ಇಲ್ಲ'.

ಈ ಮಹಾವೃಕ್ಷಕ್ಕೆ ಅಶ್ವತ್ಥವೆಂದು ಹೆಸರು ಬಂದದ್ದು ಹೇಗೆ? ಏಕೆ? 'ಶ್ವ:' ಎಂದರೆ ನಾಳೆ. 'ಶ್ವಸ್ಥ' ಎಂದರೆ ಇಂದಿರುವಂತೆಯೇ ನಾಳೆ ಇರುವಂಥದ್ದು. 'ಅಶ್ವತ್ಥ' ಎಂದರೆ ಇಂದಿರುವಂತೆ ನಾಳೆ ಇರಲಾರದ್ದು. ಒಂದು ಗಳಿಗೆ ಹಿಂದಿನ ಗಳಿಗೆಯಂತೆ ಇರಲಾರದ್ದು ಅಶ್ವತ್ಥ. ಅಂದರೆ ಅದು ಪ್ರತಿಕ್ಷಣ ಬದಲಾಗುವಂಥದ್ದು. ಅದಕ್ಕೇ ಜಗತ್ತನ್ನು ಅಶ್ವತ್ಥವೃಕ್ಷಕ್ಕೆ ಹೋಲಿಸುವುದು. ಅದು ಕ್ಷಣಕ್ಷಣಕ್ಕೂ ಬದಲಾಗುವಂಥದ್ದು, ಚಲಿಸುತ್ತಿರುವಂಥದ್ದು.

ಭಗವದ್ಗೀತೆಯಲ್ಲಿಯೂ ಇದೇ ರೂಪಕ ಬರುತ್ತದೆ.

**ಊರ್ಧ್ವಮೂಲಮಧಶ್ಯಾಖಂ ಅಶ್ವತ್ಥಂ ಪ್ರಾಹುರವ್ಯಯಮ್ |**
**ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದಸ ವೇದವಿತ್ ||**

'ಒಂದು ಅಶ್ವತ್ಥ ಮರವಿದೆ. ಅದು ಅವಿನಾಶಿಯಾದದ್ದು. ಇದರ ಬೇರುಗಳು ತಲೆಯ ಕಡೆಗೆ, ಕೊಂಬೆಗಳು ಕಾಲಿನ ಕಡೆಗೆ. ಅದರ ಎಲೆಗಳು ವೇದಗಳು. ಯಾರು ಅದನ್ನು ಬಲ್ಲವನೋ, ಅವನೇ ವೇದವನ್ನು ಬಲ್ಲವನು'.

ಇದೊಂದು ವಿಚಿತ್ರ ವೃಕ್ಷ. ಬುಡಮೇಲಾದ ವೃಕ್ಷ. ಇದರ ಬೇರುಗಳು ಮೇಲೆ ಎಲ್ಲೋ ಪರಮಪದದಲ್ಲಿ, ನಮ್ಮ ಕೈಗೆ, ಕಣ್ಣಿಗೆ ಸಿಕ್ಕದಂತೆ ಇವೆ. ಕೊಂಬೆರೆಂಬೆಗಳು ಕೈಗೆ ಎಟಕುವಂತೆ ಕೆಳಗಿವೆ. ಇದು ಎಂದೆಂದಿಗೂ ನಾಶವಾಗದ ವೃಕ್ಷ.

ಈ ವೃಕ್ಷವೇ ಜಗತ್ತು. ಅದು ಎಂದೆಂದಿಗೂ ಇದ್ದದ್ದೇ ಆದರೆ ಸದಾ ಬದಲಾಗುವಂಥದ್ದು. ಈ ಅಶ್ವತ್ಥ ವೃಕ್ಷದ ಮೂಲ, ಬೇರು ಪರಮಪದದಲ್ಲಿ, ಪರಸತ್ವದಲ್ಲಿ, ಬ್ರಹ್ಮದಲ್ಲಿ. ಹೀಗಾಗಿ ಅವು ಕೈಗೆ ಸಿಕ್ಕುವುದಿಲ್ಲ. ನಮ್ಮ ಬೇಕುಗಳು, ಹೊಸ ಹೊಸ ಭೋಗವಿಷಯಗಳು ಹೆಚ್ಚಿದಷ್ಟೂ ಈ ಮರದ ಕೊಂಬೆಗಳು ಹೆಚ್ಚು ವಿಸ್ತಾರವಾಗುತ್ತವೆ. ಚಪಲಗಳು, ಆಸೆಗಳು ಈ ವೃಕ್ಷದ ಬಿಳಲುಗಳು. ಸತ್ವ, ರಜಸ್ ಮತ್ತು ತಮಸ್ ಗುಣಗಳು ಗೊಬ್ಬರಗಳಾದ್ದರಿಂದ, ಎಲ್ಲಿಯವರೆಗೆ ಅವು ಇವೆಯೋ ಅಲ್ಲಿಯವರೆಗೆ ಈ ಮರ ಸೊಂಪಾಗಿ ಬೆಳೆಯುತ್ತದೆ. ಈ ಮರ ಮನುಷ್ಯನ ಕೈಯಲ್ಲಿ ಇಲ್ಲ. ಆತ ಮರದ ಒಂದು ಪುಟ್ಟ ಭಾಗ ಮಾತ್ರ. ಹಣ್ಣಿಗೆ ಮಾತ್ರ ಆತ ಬಾಧ್ಯಸ್ಥ. ಕಗ್ಗ, ಈ ವಿಶ್ವಜೀವಾಶ್ವತ್ಥದ ಅರ್ಥವನ್ನು ಪರೀಕ್ಷಿಸಿ ನೋಡಲು ಪ್ರಚೋದಿಸುತ್ತದೆ. ❖

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಫೆಬ್ರುವರಿ 9, 2022

**ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಮಕರ ಮಾಸದ 26 ನೇ ದಿನ**
**ತಿಥಿ:** (ಮಾಘ ಶುಕ್ಲ) ಅಷ್ಟಮಿ ಗಂ. 08-31 **ನಕ್ಷತ್ರ:** ಕೃತ್ತಿಕಾ ಗಂ. 24-23 **ಯೋಗ:** ಬ್ರಹ್ಮ ಗಂ. 17-51, **ಕರಣ:** ಬವ ಗಂ. 08-31.
ರಾಹುಕಾಲ : ಮಧ್ಯಾಹ್ನ 12:00 – 01:30 ಸೂರ್ಯೋದಯ : 06-59 ಸೂರ್ಯಾಸ್ತ : 06-30 ಮುಸ್ಲಿಂ ದಿನಾಂಕ : 07 ರಜಬ್ ಅದೃಷ್ಟ ಸಂಖ್ಯೆ: 1, 7

**ಮೇಷ:** ಅನುಮಾನಕ್ಕೆ ಎಡೆ ಮಾಡಿಕೊಡುವ ವಿಷಯಗಳನ್ನು ಗಂಭೀರವಾಗಿ ತೆಗೆದುಕೊಳ್ಳುವಿರಿ. ವೃತ್ತಿಯ ಕೆಲಸಗಳಿಗಾಗಿ ಹೆಚ್ಚಿನ ಓಡಾಟ. ಹಣದ ವಿಚಾರದಲ್ಲಿ ಸ್ಥಿರತೆಯ ಬಗ್ಗೆ ಯೋಚನೆಯನ್ನು ಮಾಡಿ.

**ವೃಷಭ:** ಸಾಂಸಾರಿಕ ವಿಷಯದಲ್ಲಿ ಹಿರಿಯರ ಮಾತು ಮೀರದಿರುವುದು ಲೇಸು. ಕುಟುಂಬದಲ್ಲಿ ನಡೆಯುವ ಶುಭಕಾರ್ಯಗಳ ಸಂಭ್ರಮ ಹಿರಿಯರ ಮನಸ್ಸಿಗೆ ನೆಮ್ಮದಿ ತರುತ್ತದೆ. ಅವಿವಾಹಿತರಿಗೆ ಕಂಕಣ ಭಾಗ್ಯ.

**ಮಿಥುನ:** ಪಿತ್ರಾರ್ಜಿತ ಆಸ್ತಿಗಳ ವಿಚಾರದಲ್ಲಿ ನ್ಯಾಯಾಲಯದ ಮೆಟ್ಟಿಲು ಏರಬೇಕಾಗುತ್ತದೆ. ಈ ದಿನ ಅಗ್ನಿ ಅನಾಹುತಗಳಿಂದಾಗಿ ದೇಹಕ್ಕೆ ಗಾಯಗಳಾಗುವ ಸಾಧ್ಯತೆ, ಎಚ್ಚರದಿಂದಿರಿ. ದುರ್ಗಾದೇವಿಯ ಸೇವೆಯಿಂದ ಶುಭಫಲ.

**ಕರ್ಕಾಟಕ:** ಆಧ್ಯಾತ್ಮಿಕ ವಿಷಯಗಳ ಬಗ್ಗೆ ಹೆಚ್ಚಿನ ಗಮನ ನೀಡುವುದರಿಂದ ಮನಃಶಾಂತಿ. ಪದವೀಧರರಿಗೆ ವಿದೇಶದಲ್ಲಿ ಉದ್ಯೋಗ ದೊರೆಯುವ ಸಂಭವವಿದೆ. ರಾಜಕೀಯ ವರ್ಗದವರು ಜನ ಮನ್ನಣೆ ಪಡೆ.

**ಸಿಂಹ:** ಸ್ಪಷ್ಟ ನಿರ್ಧಾರವನ್ನು ಮಾಡಿದ ವಿಚಾರವನ್ನು ಮತ್ತೊಮ್ಮೆ ಯೋಚಿಸಲು ಅವಕಾಶಗಳು ಒದಗಿ ಬರುತ್ತದೆ. ಹಿಂದೆ ತೆಗೆದುಕೊಂಡ ನಿಲುವನ್ನು ಬದಲಾಯಿಸಬೇಡಿ. ಅಧಿಕಾರಿ ವರ್ಗದವರಿಗೆ ಸ್ಥಳ ಬದಲಾವಣೆ ಸಂಭವವಿದೆ.

**ಕನ್ಯಾ:** ಆಲಸ್ಯತನವನ್ನು ದೂರಮಾಡಿಕೊಳ್ಳುವುದು ಒಳ್ಳೆಯದು. ದಾನ-ಧರ್ಮ ಪ್ರವೃತ್ತಿಯಿಂದ ಕೆಲವು ಶುಭ ಫಲಗಳು ನಿಮ್ಮ ಅನುಭವಕ್ಕೆ ಬರಲಿವೆ. ಕಲುಷಿತ ಆಹಾರ ಸೇವನೆಯಿಂದಾಗಿ ವೈದ್ಯರ ದರ್ಶನವನ್ನು ಮಾಡಬೇಕಾದೀತು.

**ತುಲಾ:** ಅಧಿಕಾರಿ ಹಾಗೂ ಹಿರಿಯರಿಂದ ಸಹಾಯ ಸಹಕಾರಗಳನ್ನು ಅಪೇಕ್ಷಿಸುವಂತಹ ದಿನ. ವೃತ್ತಿ ಜೀವನಕ್ಕೆ ಬಹಳ ಅವಶ್ಯಕವಾದ ನಿರ್ಧಾರವೊಂದನ್ನು ಇಂದು ತೆಗೆದುಕೊಳ್ಳುವಿರಿ. ದೇಹಾಯಾಸ ಕಡಿಮೆಯಾಗಲಿದೆ.

**ವೃಶ್ಚಿಕ:** ವೈಯಕ್ತಿಕ ಜೀವನ ತೃಪ್ತಿ ಎನಿಸಲಿದೆ. ಕೈಗೊಳ್ಳುವ ನಿರ್ಧಾರಗಳು ಮನಸ್ಸಿಗೆ ನೆಮ್ಮದಿ ತರಲಿವೆ. ಬಾಡಿಗೆ ರೂಪದಲ್ಲಿ ಸಂಘ ಸಂಸ್ಥೆಯೊಂದಕ್ಕೆ ಕಟ್ಟಡವನ್ನು ಕಟ್ಟಿಸಿಕೊಡಲು ಒತ್ತಡ. ಲೇವಾದೇವಿ ವ್ಯವಹಾರ ಲಾಭ ತರಲಿದೆ.

**ಧನು:** ಜವಾಬ್ದಾರಿಯುತ ಯೋಜನೆಯ ಸ್ಪಷ್ಟ ವಿಷಯವೊಂದನ್ನು ಆಳವಾಗಿ ಅಧ್ಯಯನ ಮಾಡಬೇಕಾಗುತ್ತದೆ. ತಂದೆಯಾಗುವ ಶುಭ ಸುದ್ದಿ. ಮಕ್ಕಳೊಂದಿಗಿನ ಸಂಜೆಯ ಸುತ್ತಾಟ, ಮಾತುಕತೆ ಮನಸ್ಸಿಗೆ ಹಿತ ತರಲಿದೆ.

**ಮಕರ:** ಈ ದಿನ ನೀವು ಆಡಿದ ಮಾತುಗಳು ತಿರುಗಿ ನಿಮಗೆ ಮುಳ್ಳಾಗುವ ರೀತಿಯಲ್ಲಿ ಇರಲಿದೆ. ಆಡಿದ ಮಾತನ್ನು ಕಳೆದುಕೊಳ್ಳಬೇಕಾದಂತಹ ಪರಿಸ್ಥಿತಿ ಎದುರಾಗಬಹುದು. ಆದ್ದರಿಂದ ಸೂಕ್ಷ್ಮವಾಗಿ ಜಾಗರೂಕತೆಯಿಂದ ವ್ಯವಹರಿಸಿ.

**ಕುಂಭ:** ವೃತ್ತಿರಂಗದಲ್ಲಿ ನಿಮಗಾಗಿ ಅದೃಷ್ಟದ ಬಾಗಿಲು ತೆರೆಯುವುದು. ವ್ಯಾಪಾರ ವ್ಯವಹಾರಗಳು ಸರಾಗವಾಗಿ ನಡೆಯಲಿದೆ. ಚಲನಚಿತ್ರರಂಗದವರಿಗೆ ಖ್ಯಾತಿ ದೊರೆಯುವುದು. ಮನೆಯವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ.

**ಮೀನ:** ಗೃಹ ನಿರ್ಮಾಣ ಅಥವಾ ನಿವೇಶನ ಖರೀದಿಯ ಕೆಲಸ ಆರಂಭಿಸಲು ಸಿದ್ಧತೆಯನ್ನು ಮಾಡಿಕೊಳ್ಳಬಹುದು. ನಿಮ್ಮ ಹೊಸ ಆಕಾಂಕ್ಷೆಗಳನ್ನು ಹಾಗೂ ಜೀವನದ ಗುರಿಗಳನ್ನು ಚೆನ್ನಾಗಿ ಅರಿತುಕೊಳ್ಳುವಿರಿ.

## ಪದಬಂಧ 4864

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಚಕ್ರದ ಮೇಲೆ ಕುಳಿತಿರುವ ಬಿಸಿಲು ಹಕ್ಕಿ (4)
3.ಮಜವಾಗಿರುವ ಸಮಾಚಾರ! (4)
5.ತಿರುಗಿಸಿ ನೋಡಿದರೂ ಇದು ಹೊಸತು! (3)
6.ಯತಿಗಳು ಉಪಯೋಗಿಸುವ ನೀರಿನ ಪಾತ್ರೆ (4)
8.ಗರಳದಿಂದ ಕೂಡಿದ ಸಂಗತಿ! (3)
10.ಒನಪು ತೋರಿದಾಗ ಬಂದಿರುವ ಸ್ಮರಣೆ (3)
12.ಸರಸ ಮತ್ತು ವಿರಸ ಸಮನಾಗಿರುವಿಕೆ (4)
15.ಅತಿಯಾದ ಆತುರ (3)
16.ಮಸ್ತಕವನ್ನು ವಿಕ್ರಯಿಸಿದಾಗ ಪೀಳಿಗೆ ಬಂದೀತೇ? (4)
17.ಎಲ್ಲಾ ರಾಜ್ಯಗಳನ್ನು ಜಯಿಸುವುದು (4)

**ಮೇಲಿಂದ ಕೆಳಕ್ಕೆ**
1.ಚಕಚಕನೆ ನೇಯುವ ರಾಟೆ (3)
2.ಹೀಗೆ ಕೋಪಗೊಳ್ಳು (3)
3.ಮನದಿಂದ ಮಾಡಿಕೊಂಡಿರುವ ಅರಿಕೆ (3)
4.ಬೇನೆಯಿಂದ ಕೂಡಿದ್ದು (2)
7.ರಹಸ್ಯವಾಗಿ ಕೂಡಿ ಮಾತಾಡುವುದು (5)
9.ಈತ ನರಕಾಧಿಪತಿಯ ಸೇವಕ (5)
11.ಕಾರು ನಡೆಸುತ್ತಾ ಹೇಳಿದ ದೂರು! (3)
12.ಸರ ತರಲು ಹಚ್ಚಿರುವ ಪಾಳಿ (3)
13.ಯಮನ ಹತ್ತಿರ ಕಳೆದ ಕಾಲ (3)
14.ಮಗ ಇಲ್ಲಿದ್ದಾನೆ (2)

| | | | | | | | | |
|---|---|---|---|---|---|---|---|---|
| 1 | | | 2 | ■ | 3 | | | 4 |
| | ■ | ■ | 5 | | | ■ | ■ | |
| 6 | 7 | | | ■ | 8 | | 9 | ■ |
| ■ | | ■ | ■ | ■ | ■ | ■ | | ■ |
| ■ | | ■ | ■ | ■ | ■ | ■ | | ■ |
| ■ | | ■ | ■ | ■ | ■ | ■ | | ■ |
| ■ | 10 | | 11 | ■ | 12 | | | 13 |
| 14 | ■ | ■ | 15 | | | ■ | ■ | |
| 16 | | | | ■ | 17 | | | |

### 4863ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಪಲುಕು 3.ಪ್ರಧಾನ 5.ತಲೆತಿರುಕ 6.ಮನೆ 8.ಸಂಗ 9.ನಾರು 10.ಷರಾ 14.ವರ್ಣಪಲ್ಲಟ 15.ಯವನ 16.ಕಮ್ಮಾರ

**ಮೇಲಿಂದ ಕೆಳಕ್ಕೆ:**
1.ಪರಂಧಾಮ 2.ಕುತರ್ಕ 3.ಪ್ರಕಟ 4.ನವರಂಗ 7.ನೆತ್ತರು 8.ಸಂತೋಷ 9.ನಾಮಧೇಯ 11.ರಾಯಭಾರ 12.ಭವನ 13.ಕಟಕ

## ಸುಡೊಕು 5250

| | | | | | | | | |
|---|---|---|---|---|---|---|---|---|
| | | 4 | | | 1 | | | 3 |
| | 7 | | | | | 6 | | |
| 5 | | | 8 | | 9 | | 4 | 7 |
| | | 5 | 4 | | | 3 | | |
| | 6 | | | 9 | | | 7 | |
| 3 | | | | | 8 | 5 | | 9 |
| 4 | 1 | | | 8 | | | 3 | |
| | | 2 | 7 | | 4 | 9 | | 1 |
| 7 | | 9 | | 3 | | | 2 | |


**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5249 ಸುಡೊಕು

| | | | | | | | | |
|---|---|---|---|---|---|---|---|---|
| 2 | 4 | 8 | 3 | 7 | 1 | 5 | 6 | 9 |
| 9 | 5 | 6 | 4 | 8 | 2 | 3 | 7 | 1 |
| 7 | 3 | 1 | 9 | 5 | 6 | 2 | 8 | 4 |
| 6 | 9 | 4 | 1 | 3 | 8 | 7 | 5 | 2 |
| 5 | 7 | 2 | 6 | 4 | 9 | 1 | 3 | 8 |
| 8 | 1 | 3 | 7 | 2 | 5 | 9 | 4 | 6 |
| 3 | 6 | 7 | 2 | 1 | 4 | 8 | 9 | 5 |
| 4 | 2 | 5 | 8 | 9 | 3 | 6 | 1 | 7 |
| 1 | 8 | 9 | 5 | 6 | 7 | 4 | 2 | 3 |

## ಷೇರುಪೇಟೆ ವಹಿವಾಟು




## ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 17,213 |
| ಇಂದಿನ ಅಂತ್ಯ | 17,226 |
| ▲ | 53 |
| ದಿನದ ಗರಿಷ್ಠ | 17,306 |

## ವಿನಿಮಯ ದರ

| | |
|---|---|
| $ ಡಾಲರ್ | 74.74 |
| £ ಪೌಂಡ್ | 101.01 |
| € ಯುರೊ | 85.28 |
| ¥ ಯೆನ್ (100ಕ್ಕೆ) | 64.76 |

## ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

| | |
|---|---|
| 100 ಮೊಟ್ಟೆಗೆ | ₹455 |
| 12 ಮೊಟ್ಟೆಗೆ | ₹62 |

ಮೈಸೂರು

| | |
|---|---|
| 100 ಮೊಟ್ಟೆಗೆ | ₹455 |

## ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈಂಡ್) | ₹1320 (1330) |
| ಸೋಯಾ (ರಿಫೈಂಡ್) | ₹1290 (1290) |
| ಸೂರ್ಯಕಾಂತಿ (ರಿಫೈಂಡ್) | ₹1305 (1300) |
| ಪಾಮೋಲಿನ್ | ₹1230 (1242) |

# ಕಾಶ್ಮೀರ ಕುರಿತ ಟ್ವೀಟ್: ಹುಂಡೈ ವಿಷಾದ

ನವದೆಹಲಿ (ಪಿಟಿಐ): ಪಾಕಿಸ್ತಾನದ ತನ್ನ ಪಾಲುದಾರ ಕಾಶ್ಮೀರದ ವಿಚಾರವಾಗಿ ಮಾಡಿದ್ದ 'ಅನಧಿಕೃತ' ಟ್ವೀಟ್‌ಗೆ ಸಂಬಂಧಿಸಿದಂತೆ ಹುಂಡೈ ಮೋಟರ್ ಮಂಗಳವಾರ ವಿಷಾದ ವ್ಯಕ್ತಪಡಿಸಿದೆ. ಆ ಟ್ವೀಟನ್ನು ಡಿಲೀಟ್ ಮಾಡಿಸಿದೆ.

ಹುಂಡೈ ಮತ್ತು ಕಿಯಾ ಕಾರ್ಪ್ ಜೊತೆ ನಂಟು ಹೊಂದಿರುವ ಟ್ವಿಟರ್ ಖಾತೆಗಳು ಪ್ರತ್ಯೇಕ ಕಾಶ್ಮೀರಕ್ಕೆ ಬೆಂಬಲ ಸೂಚಿಸಿದ್ದು ಭಾನುವಾರ ವಿವಾದ ಸೃಷ್ಟಿಸಿತ್ತು. 'ಅಸೂಕ್ಷ್ಮ ಸಂವಹನಗಳನ್ನು ನಾವು ಸಹಿಸುವುದಿಲ್ಲ, ಖಂಡಿಸುತ್ತೇವೆ' ಎಂದು ಹುಂಡೈ ಕಂಪನಿಯು ಅದೇ ದಿನ ಪ್ರತಿಕ್ರಿಯಿಸಿತ್ತು.

ಈ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವೂ ಪ್ರತಿಕ್ರಿಯಿಸಿದ ನಂತರ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದ ಹುಂಡೈ, 'ಯಾವುದೇ ಪ್ರದೇಶದ ರಾಜಕೀಯ ಹಾಗೂ ಧಾರ್ಮಿಕ ವಿಷಯಗಳ ಬಗ್ಗೆ ತಾನು ಮಾತನಾಡುವುದಿಲ್ಲ' ಎಂದೂ ಹೇಳಿತು. 'ಪಾಕಿಸ್ತಾನದ ಸ್ವತಂತ್ರ ವಿತರಕರೊಬ್ಬರು ಕಾಶ್ಮೀರ ವಿಚಾರವಾಗಿ ನಮ್ಮ ಒಪ್ಪಿಗೆ ಇಲ್ಲದೆ, ಅವರ ಟ್ವಿಟರ್ ಖಾತೆಯಿಂದ ಪೋಸ್ಟ್ ಮಾಡಿರುವುದು ಹುಂಡೈ ಮೋಟರ್ ಕಂಪನಿಯ ನಿಯಮಗಳಿಗೆ ವಿರುದ್ಧ' ಎಂದು ಕಂಪನಿಯು ಹೇಳಿದೆ.

'ದನಿ ಗಟ್ಟಿಯಾಗಿರಬೇಕು': ರಾಜ್ಯಸಭೆಯಲ್ಲಿ ಮಾತನಾಡಿದ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್, 'ದಕ್ಷಿಣ ಕೊರಿಯಾ ಸರ್ಕಾರ ಹಾಗೂ ಕಂಪನಿಯ ಜೊತೆ ಈ ವಿಚಾರ ಪ್ರಸ್ತಾಪಿಸಲಾಗಿದೆ. ಈ ವಿಚಾರವಾಗಿ ಕ್ಷಮೆ ಕೇಳುವಾಗಿನ ದನಿಯು ಇನ್ನಷ್ಟು ಗಟ್ಟಿಯಾಗಿರಬೇಕು ಎಂದು ಕಂಪನಿಗೆ ಹೇಳಲಾಗಿದೆ' ಎಂದರು.

ಪಾಕಿಸ್ತಾನದ ಹುಂಡೈ ಡೀಲರ್ ಒಬ್ಬರು ತಮ್ಮ ಟ್ವಿಟರ್ ಖಾತೆಯಿಂದ, 'ಕಾಶ್ಮೀರ ಒಗ್ಗಟ್ಟಿನ ದಿನ'ಕ್ಕೆ ಬೆಂಬಲ ಸೂಚಿಸಿದ್ದರು. ಇದಕ್ಕೆ ಭಾರತದಲ್ಲಿ ವಿರೋಧ ವ್ಯಕ್ತವಾಗಿತ್ತು.

ದಕ್ಷಿಣ ಕೊರಿಯಾದ ವಿದೇಶಾಂಗ ಸಚಿವ ಚುಂಗ್ ಎಯ್-ಯಂಗ್ ಅವರು ಈ ವಿಚಾರವಾಗಿ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಜೊತೆ ದೂರವಾಣಿ ಮೂಲಕ ಮಾತನಾಡಿದರು. ವಿದ್ಯಮಾನದ ಕುರಿತು ವಿಷಾದ ವ್ಯಕ್ತಪಡಿಸಿದರು. ಭಾರತವು, ದಕ್ಷಿಣ ಕೊರಿಯಾದ ರಾಯಭಾರಿಯಲ್ಲಿ ಈ ಟ್ವೀಟ್‌ಗೆ ಸಂಬಂಧಿಸಿ ತನ್ನ ಅತೃಪ್ತಿಯನ್ನು ತಿಳಿಸಿದೆ.

ವಿದೇಶಿ ಕಂಪನಿಗಳು ದೇಶದಲ್ಲಿ ಹೂಡಿಕೆ ಮಾಡುವುದನ್ನು ಭಾರತ ಸ್ವಾಗತಿಸುತ್ತದೆ. ಅಂತಹ ಕಂಪನಿಗಳು, ಅವುಗಳ ಪಾಲುದಾರರು ದೇಶದ ಸಾರ್ವಭೌಮತ್ವದ ವಿಚಾರವಾಗಿ ತಪ್ಪು ಅರ್ಥ ನೀಡುವ ಮಾತು ಆಡಬಾರದೆಂದು ಬಯಸುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಗ್ಚಿ ಹೇಳಿದರು.

## ಕ್ಷಮೆ ಕೇಳಿದ ಕೆಎಫ್‌ಸಿ

ನವದೆಹಲಿ (ಪಿಟಿಐ/ಎಎಫ್‌ಪಿ): ಪಾಕಿಸ್ತಾನದಲ್ಲಿ ಇರುವ ತನ್ನ ಫ್ರಾಂಚೈಸಿಯೊಂದು ಕಾಶ್ಮೀರದ ಪ್ರತ್ಯೇಕತಾವಾದಿಗಳನ್ನು ಬೆಂಬಲಿಸಿ ಟ್ವೀಟ್ ಮಾಡಿದ್ದಕ್ಕೆ ಕೆಎಫ್‌ಸಿ ಸೋಮವಾರ ಕ್ಷಮೆ ಯಾಚಿಸಿದೆ.

'ನಾವು ಭಾರತವನ್ನು ಗೌರವಿಸುತ್ತೇವೆ. ಭಾರತೀಯರಿಗೆ ಹೆಮ್ಮೆಯಿಂದ ಸೇವೆ ಒದಗಿಸುವ ನಮ್ಮ ಬದ್ಧತೆ ದೃಢವಾಗಿದೆ' ಎಂದು ಕೆಎಫ್‌ಸಿ ಟ್ವೀಟ್ ಮಾಡಿದೆ.

'ದೇಶದ ಹೊರಗಡೆ ಡಾಮಿನೋಸ್‌ನ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ಪ್ರಕಟವಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ನಾವು ವಿಷಾದ ವ್ಯಕ್ತಪಡಿಸುತ್ತೇವೆ, ಕ್ಷಮೆ ಕೋರುತ್ತೇವೆ' ಎಂದು ಡಾಮಿನೋಸ್ ಹೇಳಿದೆ. ಭಾರತ 25 ವರ್ಷಗಳಿಗೂ ಹೆಚ್ಚು ಕಾಲದಿಂದ ತನಗೆ ಮನೆಯಾಗಿದೆ ಎಂದು ಡಾಮಿನೋಸ್ ಹೇಳಿದೆ. ಭಾರತದ ಹೊರಗಿನ ಡೀಲರ್ ಒಬ್ಬರು ತಮ್ಮ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಮಾಡಿರುವ ಪೋಸ್ಟ್‌ಅನ್ನು ಗಮನಿಸಲಾಗಿದೆ. ಸಾಮಾಜಿಕ ಜಾಲತಾಣದ ಮೂಲಕ ನಡೆದ ತಪ್ಪಿಗೆ ವಿಷಾದ ವ್ಯಕ್ತಪಡಿಸಲಾಗುತ್ತಿದೆ ಎಂದು ಕಿಯಾ ಇಂಡಿಯಾ ಟ್ವೀಟ್ ಮಾಡಿದೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 430- 450 |
| ನಡುಗೋಲು | 500-550 |
| ರಾಶಿ | 600-650 |
| ರಾಶಿ ಉತ್ತಮ | 650-700 |
| ಜರಡಿ | 750 - 800 |
| ಹೆರಕಿದ್ದು | 1,100-1,150 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-950 |
| ಹಸಿರು ಅತಿ ಉತ್ತಮ | 1,200-1,250 |
| ಕಾಳು ಮೆಣಸು | 480 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-53000 |
| **ಕಾರ್ಕಳ** | |
| ಹೊಸತು | 40000-45000 |
| ಹಳತು | 46000-53000 |
| **ಪುತ್ತೂರು** | |
| ಹೊಸತು | 27500-45000 |
| **ತುಮಕೂರು** | |
| ರಾಶಿ | 45200-46600 |
| **ಶಿರಸಿ** | |
| ಬೆಟ್ಟೆ | 37609-44698 |
| ಬಿಳಿಗೋಟು | 20610-35903 |
| ಚಾಲಿ | 32709-40399 |
| ರಾಶಿ | 45219-47408 |
| **ಯಲ್ಲಾಪುರ** | |
| ಆಪಿ | 51930-55469 |
| ಬಿಳಿಗೋಟು | 24721-31530 |
| ಹಳೆಚಾಲಿ | 47890-47890 |
| ಹೊಸಚಾಲಿ | 32499-39441 |
| ಕೋಕ | 22899-30399 |
| ಕೆಂಪುಗೋಟು | 28969-32799 |
| ರಾಶಿ | 45869-50790 |
| ತಟ್ಟಿಬೆಟ್ಟೆ | 38919-44500 |
| **ಚನ್ನಗಿರಿ** | |
| ರಾಶಿ | 44029-46159 |
| **ರಾಮನಗರ ರೇಷ್ಮೆ** | |
| ಮಿಶ್ರತಳಿ | ₹400-715 |
| ದ್ವಿತಳಿ | ₹450-895 |

### ಕಾಫಿ (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 15,900 | 15,900 | 15950 | 241.65ಸೆಂಟ್ಸ್ |
| ಎಸಿ | 7,560 | 7,250 | 7,425 | |
| ಆರ್‌ಪಿ | 7400 | 7,200 | 7,550 | ಲಂಡನ್ |
| ಆರ್‌ಸಿ | 4015 | 3,900 | 4,000 | 2233 ಡಾಲರ್ಸ್ |

## ಮುಂಬೈ ಧಾರಣೆ

### ಶೇಂಗಾ

08-02-2022

| | |
|---|---|
| ಜಾವಾ 70/80(ಹೊಸ) | 11200-11250 |
| ಜಾವಾ 80/90(ಹೊಸ) | 10900-10950 |
| ದಪ್ಪ ಮಧ್ಯಪ್ರದೇಶ(ಹೊಸ) | 9850-9900 |
| ದಪ್ಪ ಗುಜರಾತ್(ಹೊಸ) | 8700-8750 |

### ಶೇಂಗಾ ಎಣ್ಣೆ (10 ಕೆಜಿಗೆ)

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1330(1340) |
| ಒಂದು ವಾರದ ಡೆಲಿವರಿ | 1325 (1335) |
| ಸೋಯಾ ಕಚ್ಚಾ | 1135 (1147) |
| ಪಾಮ್ ವಾರದ ಡೆಲಿವರಿ | 1228 (1240) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1240 (1240) |

### ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

| | |
|---|---|
| ಅಪರಂಜಿ ಚಿನ್ನ 10ಗ್ರಾಂ | 48,300 (48,150) |
| ಬೆಳ್ಳಿ ಕೆ.ಜಿ | 61,650 (61,400) |

ಆವರಣದಲ್ಲಿ ಹಿಂದಿನ ದಿನದ ಧಾರಣೆ

## 'ಮಾರುಕಟ್ಟೆ ಬೇಕು ಎಂದಾದರೆ ಉದ್ಯೋಗ ನೀಡಿ'

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ಕಾರುಗಳನ್ನು ತಯಾರಿಸುವ ಅಮೆರಿಕ ಮೂಲದ ಕಂಪನಿ ಟೆಸ್ಲಾ ಭಾರತದಲ್ಲಿ ತಯಾರಿಕಾ ಚಟುವಟಿಕೆ ಆರಂಭಿಸದ ಹೊರತು ವಿನಾಯಿತಿಗಳನ್ನು ನೀಡಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ಬೃಹತ್ ಕೈಗಾರಿಕೆಗಳ ರಾಜ್ಯ ಸಚಿವ ಕೃಷನ್ ಪಾಲ್ ಗುರ್ಜರ್ ಅವರು ಲೋಕಸಭೆಯಲ್ಲಿ ಈ ವಿಷಯ ತಿಳಿಸಿದ್ದಾರೆ. ವಿದ್ಯುತ್ ಚಾಲಿತ ಕಾರುಗಳ ಮೇಲಿನ ಆಮದು ಸುಂಕವನ್ನು ಕಡಿಮೆ ಮಾಡಬೇಕು ಎಂದು ಟೆಸ್ಲಾ ಕಂಪನಿಯು ಹಿಂದಿನ ವರ್ಷ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿತ್ತು. ಆದರೆ, ತೆರಿಗೆ ವಿನಾಯಿತಿ ಬಗ್ಗೆ ಪರಿಶೀಲಿಸುವುದಕ್ಕೂ ಮೊದಲು ಟೆಸ್ಲಾ ಕಂಪನಿಯು ಭಾರತದಲ್ಲಿ ತಯಾರಿಕೆ ಆರಂಭಿಸಬೇಕು ಎಂದು ಸರ್ಕಾರ ಹೇಳಿತ್ತು.

'ಕಂಪನಿಗೆ ಚೀನಾದ ಕಾರ್ಮಿಕರು ಬೇಕು, ಭಾರತದ ಮಾರುಕಟ್ಟೆ ಬೇಕು. ಮೋದಿ ಸರ್ಕಾರದಲ್ಲಿ ಇದಕ್ಕೆ ಅವಕಾಶ ಇಲ್ಲ. ಭಾರತದ ಮಾರುಕಟ್ಟೆಯನ್ನು ಬಳಸಿಕೊಳ್ಳಬೇಕು ಎಂದಾದರೆ, ಉದ್ಯೋಗ ಅವಕಾಶಗಳನ್ನೂ ಭಾರತೀಯರಿಗೇ ನೀಡಬೇಕು ಎಂಬುದು ಸರ್ಕಾರದ ನೀತಿ' ಎಂದು ಗುರ್ಜರ್ ಹೇಳಿದ್ದಾರೆ.

## ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

**ಎಂ. ಗಣೇಶ್ ಮೂರ್ತಿ**

- **ಪ್ರಶ್ನೆ: ನಾನು ಎಸ್‌ಬಿಐ ಬ್ಯಾಂಕ್‌ನಲ್ಲಿ 'ಅಟಲ್ ಪಿಂಚಣಿ ಯೋಜನೆ'ಯಲ್ಲಿ ಹೂಡಿಕೆ ಮಾಡುತ್ತಿದ್ದೇನೆ. ಇದಕ್ಕಾಗಿ ಕಾಯಂ ನಿವೃತ್ತಿ ಖಾತೆ ಸಂಖ್ಯೆ (ಪಿಆರ್‌ಎಎನ್) ಹೊಂದಿರುತ್ತೇನೆ. ನಾನು ಈಗ ಎನ್‌ಪಿಎಸ್ ಖಾತೆ ತೆರೆಯಲು ಯೋಚಿಸುತ್ತಿದ್ದೇನೆ. ನಾನು ಎನ್‌ಪಿಎಸ್ ಖಾತೆ ತೆರೆಯಬಹುದೇ? ಇದಕ್ಕೆ ಬೇರೆ ಪಿಆರ್‌ಎಎನ್ ಸಂಖ್ಯೆ ನೀಡಿದರೆ ಏನೂ ತೊಂದರೆ ಇಲ್ಲವೇ? ಜೊತೆ ಜೊತೆಗೆ ಅಟಲ್ ಪೆನ್ಷನ್ ಯೋಜನೆ ಹಾಗೂ ಎನ್‌ಪಿಎಸ್ ಖಾತೆ ಹೊಂದಬಹುದೇ?**

**ಉತ್ತರ:** ಒಬ್ಬ ವ್ಯಕ್ತಿಯು ಏಕಕಾಲದಲ್ಲಿ ಅಟಲ್ ಪಿಂಚಣಿ ಯೋಜನೆ ಮತ್ತು ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಇವೆರಡರಲ್ಲೂ ಹೂಡಿಕೆ ಮಾಡಬಹುದು. ಇವೆರಡೂ ಹೂಡಿಕೆಗಳು ಪಿಂಚಣಿ ಯೋಜನೆಗಳಾಗಿದ್ದರೂ, ಪ್ರತ್ಯೇಕ ವಯೋಮಾನ ಹಾಗೂ ಹೂಡಿಕೆಯ ವೈವಿಧ್ಯತೆಯನ್ನು ಹೊಂದಿವೆ. ಇವುಗಳ ನಿಯಮಾವಳಿ, ಲಾಭದ ಪ್ರಮಾಣ ಬೇರೆ ಬೇರೆ.

ಎರಡು ಪಿಆರ್‌ಎಎನ್ ಪಡೆಯುವ ಮೂಲಕ ಒಂದಕ್ಕಿಂತ ಅಧಿಕ ಎನ್‌ಪಿಎಸ್ ಖಾತೆಗಳಲ್ಲಿ ಹೂಡಿಕೆ ಮಾಡುವುದಕ್ಕೆ ನಿರ್ಬಂಧಗಳಿವೆ. ಅಂತಹ ಸಂದರ್ಭದಲ್ಲಿ ಸ್ಥಳೀಯ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸಿ ಯಾವುದಾದರೂ ಒಂದನ್ನು ರದ್ದುಗೊಳಿಸಬೇಕಾಗುತ್ತದೆ. ಅದಕ್ಕೂ ಮೊದಲು, ರದ್ದು ಮಾಡಲಾಗುವ ಖಾತೆಯಲ್ಲಿನ ಮೊತ್ತವನ್ನು ವರ್ಗಾಯಿಸಿಕೊಳ್ಳಬೇಕು.

ಆದರೆ, ನಿಮ್ಮ ಪ್ರಶ್ನೆಯಂತೆ, ಹೂಡಿಕೆದಾರ ಎರಡು ಪ್ರತ್ಯೇಕ ಯೋಜನೆಗಳಲ್ಲಿ ಹೂಡಿಕೆ ಮಾಡುವ ಕಾರಣ ಹೊಸ ಪಿಆರ್‌ಎಎನ್ ಸಂಖ್ಯೆ ಹೊಂದುವುದರಲ್ಲಿ ತೊಂದರೆ ಇರಬಾರದು. ಇದನ್ನು ಎನ್‌ಪಿಎಸ್‌ಗೆ ಸಂಬಂಧಿಸಿದ ಸೆಂಟ್ರಲ್ ರೆಕಾರ್ಡ್ ಕೀಪಿಂಗ್ ಏಜೆನ್ಸಿಯವರ ಪ್ರಶ್ನೋತ್ತರ ಮಾಲಿಕೆಯಲ್ಲೂ ವಿವರಿಸಲಾಗಿದೆ. ಹಾಗಿದ್ದರೂ ಇದಕ್ಕೆ ಸಂಬಧಿಸಿದ ನಿಖರ ಮಾಹಿತಿಗೆ ನಿಮ್ಮಲ್ಲಿರುವ ಪ್ರಸ್ತುತ ಪಿಆರ್‌ಎಎನ್ ಸಂಖ್ಯೆಯನ್ನು ಎಲ್ಲಿ ಎನ್‌ಪಿಎಸ್ ಖಾತೆ ತೆರೆಯಬೇಕೆಂದಿದ್ದೀರೊ ಆ ಬ್ಯಾಂಕ್ ಶಾಖೆಯಲ್ಲಿ ಮೊದಲೇ ಪ್ರಸ್ತಾಪಿಸುವ ಮೂಲಕ ಸುಲಭವಾಗಿ ಬಗೆಹರಿಸಿಕೊಳ್ಳಬಹುದು.

**ಎನ್.ಕೆ. ಉದಯ್,** ಬೆಂಗಳೂರು

- **ಪ್ರಶ್ನೆ: ನಾನು ಇನ್ನು ಐದು ವರ್ಷಗಳಲ್ಲಿ ವೃತ್ತಿಯಿಂದ ನಿವೃತ್ತನಾಗಲಿದ್ದೇನೆ. ಇದುವರೆಗೆ ನಾನು ಹತ್ತು ಲಕ್ಷ ರೂಪಾಯಿ ಉಳಿತಾಯ ಮಾಡಿದ್ದೇನೆ. ನನ್ನ ಈಗಿನ ವೇತನ ತಿಂಗಳಿಗೆ ಎಂಭತ್ತು ಸಾವಿರ ರೂಪಾಯಿ. ನನಗೆ ಪಿಂಚಣಿ ಸೌಲಭ್ಯ ಇಲ್ಲ. ನಿವೃತ್ತಿಯ ನಂತರದ ಬದುಕಿಗೆ ಒಂದಿಷ್ಟು ಪಿಂಚಣಿ ಮಾದರಿಯ ಹಣ ಸಿಗುವಂತೆ ಆಗಲು ಏನು ಮಾಡಬೇಕು? ವಿವರವಾಗಿ ತಿಳಿಸಿಕೊಡಿ.**

**ಉತ್ತರ:** ನಿಮ್ಮ ನಿವೃತ್ತಿ ಬದುಕಿನ ನಂತರ ನಿಮ್ಮ ಭವಿಷ್ಯದ ಆದಾಯದ ಮೇಲೆ ಎಷ್ಟು ಮಂದಿಯ ಬದುಕು ಸಾಗಬೇಕು ಎಂಬುದನ್ನು ಮೊದಲು ನಿರ್ಧರಿಸಿ. ಪ್ರಸ್ತುತ ನಿಮಗೆ ಯಾವುದೇ ಆರ್ಥಿಕ ಜವಾಬ್ದಾರಿ, ಸಾಲ ಇತ್ಯಾದಿ ಇಲ್ಲವೆಂದು ತಿಳಿದುಕೊಳ್ಳೋಣ. ನಿಮ್ಮ ಮಕ್ಕಳು ಆರ್ಥಿಕವಾಗಿ ಸ್ವತಂತ್ರರಾಗಿದ್ದಾರೆಂದು ಭಾವಿಸಿದರೆ, ತಿಂಗಳ ಅರ್ಧದಷ್ಟು ಮೊತ್ತವನ್ನು ಉಳಿತಾಯ ಮಾಡುವ ಬಗ್ಗೆ ಯೋಜನೆ ಮಾಡಿ. ಇದಕ್ಕಾಗಿ ಅನಗತ್ಯ ಖರ್ಚು ತಗ್ಗಿಸಿ. ನೀವು ನಿವೃತ್ತಿ ಜೀವನದ ಕೊನೆಯ ಐದು ವರ್ಷಗಳ ಹಂತದಲ್ಲಿ ಇರುವುದರಿಂದ ಪ್ರತಿ ತಿಂಗಳಿಗೆ ₹ 40,000 ಉಳಿತಾಯ ಮಾಡುವುದರಿಂದ ವರ್ಷಕ್ಕೆ ಸುಮಾರು ₹ 5 ಲಕ್ಷ ಸಂಗ್ರಹವಾಗುತ್ತದೆ. ಮುಂದಿನ ವರ್ಷಗಳಲ್ಲಿ ಆದಾಯ ಹೆಚ್ಚಿದಂತೆ ಉಳಿತಾಯದ ಪ್ರಮಾಣವನ್ನು ಹೆಚ್ಚಿಸುವತ್ತ ಗಮನಹರಿಸಿ. ಇದು ಮುಂದಿನ ಐದು ವರ್ಷಗಳ ಅವಧಿಯಲ್ಲಿ ಹೆಚ್ಚುವರಿ ಇಪ್ಪತ್ತೈದರಿಂದ ಮೂವತ್ತು ಲಕ್ಷ ಹೂಡಿಕೆಯಾಗಿ ಸಂಗ್ರಹವಾಗಲಿದೆ.

ನೀವು ನಿವೃತ್ತಿ ಬದುಕಿಗೆ ಹತ್ತಿರ ಇರುವುದರಿಂದ ನಿಮ್ಮ ಹೂಡಿಕೆಯು ಸಾಧ್ಯವಾದಷ್ಟು ಮೂಲಧನ ನಷ್ಟವಾಗದ ರೀತಿಯಲ್ಲಿ ಇರುವುದು ಅಗತ್ಯ. ನೇರ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಬೇಡ. ಉಳಿತಾಯಕ್ಕೆ ಲಭ್ಯವಿರುವ ಮೊತ್ತದಲ್ಲಿ ಶೇಕಡ 25ರಷ್ಟನ್ನು ತೆರಿಗೆ ಉಳಿತಾಯದ ಲಾಭ ಕೊಡುವ ಗುಣಮಟ್ಟದ ಮ್ಯೂಚುವಲ್ ಫಂಡ್‌ಗಳಲ್ಲಿ ಮಾಸಿಕ ಕಂತುಗಳಲ್ಲಿ ಹೂಡಿಕೆ ಮಾಡಬಹುದು. ಇದರಿಂದ ಮಾರುಕಟ್ಟೆಯ ಕ್ರಮಾಗತ ಏರಿಳಿತದ ಲಾಭ ಮುಂದಿನ ನಾಲ್ಕೈದು ವರ್ಷ ಸಿಗುವುದು. ಆದಾಯ ತೆರಿಗೆಯ 80ಸಿ ಸೆಕ್ಷನ್ ಅಡಿ ₹ 1.50 ಲಕ್ಷ ವಿನಾಯಿತಿ ಸಿಗುವ ಹೂಡಿಕೆಗೆ ಮೊದಲ ಆದ್ಯತೆ ನೀಡಿ. ಉಳಿದ ಮೊತ್ತವನ್ನು ನಿಖರ ಆದಾಯ ತರುವ 60 ತಿಂಗಳ ಆರ್.ಡಿ. ಯೋಜನೆಯಲ್ಲೂ ಹೂಡಿಕೆ ಮಾಡಿ. ಇದಕ್ಕಾಗಿ ಸ್ಥಳೀಯ ಅಂಚೆ ಕಚೇರಿ ಅಥವಾ ಬ್ಯಾಂಕ್ ಸಂಪರ್ಕಿಸಿ. ನಿಮ್ಮಲ್ಲಿರುವ ₹ 10 ಲಕ್ಷವನ್ನು ಅಂಚೆ ಕಚೇರಿಯಲ್ಲಿ ನಿಶ್ಚಿತ ಠೇವಣಿ ಇಡಿ. ಇದು ನಿಮಗೆ ನಿವೃತ್ತಿಯ ಸಮಯದಲ್ಲಿ ಒಟ್ಟಾಗಿ ಬಡ್ಡಿ ಸಹಿತ ಸಿಗುತ್ತದೆ.

ನಿಮ್ಮ ನಿವೃತ್ತಿಯ ಬಳಿಕ ಅಂಚೆ ಕಚೇರಿಯಲ್ಲಿ ಈ ಮೊತ್ತವನ್ನು ಹಿರಿಯ ನಾಗರಿಕರಿಗಾಗಿ ಇರುವ ಉಳಿತಾಯ ಯೋಜನೆಯಲ್ಲಿ ₹ 15 ಲಕ್ಷವನ್ನು ತ್ರೈಮಾಸಿಕ ಬಡ್ಡಿಗಾಗಿ ಹಾಗೂ ತಿಂಗಳ ಬಡ್ಡಿ ಆದಾಯ ಯೋಜನೆಯಲ್ಲಿ ತಲಾ ₹ 4.5 ಲಕ್ಷ (ಜಂಟಿ ಖಾತೆಯಾದರೆ ₹ 9 ಲಕ್ಷ) ಹೂಡಿಕೆ ಮಾಡಿ ಆದಾಯ ಪಡೆಯಬಹುದು. ಉಳಿದ ಮೊತ್ತವನ್ನು ಯಾವುದೇ ಬ್ಯಾಂಕ್‌ನಲ್ಲಿ ಉತ್ತಮ ಬಡ್ಡಿದರ ನೋಡಿ ಹೂಡಿಕೆ ಮಾಡಿ. ಸುಮಾರು ₹ 45 ಲಕ್ಷ ಒಟ್ಟಾರೆ ಹೂಡಿಕೆಯು ಶೇ 6.5ರ ಬಡ್ಡಿ ದರದಲ್ಲಿ ನಿಮಗೆ ಕನಿಷ್ಠ ₹ 24,000 ತಿಂಗಳ ಆದಾಯ ನೀಡಲಿದೆ.

### ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

## ಮಿಲ್ಲತ್ ಸಹಕಾರ ಬ್ಯಾಂಕ್ ಮೇಲಿನ ನಿರ್ಬಂಧ ವಿಸ್ತರಣೆ

ಮುಂಬೈ (ಪಿಟಿಐ): ದಾವಣಗೆರೆಯಲ್ಲಿ ಪ್ರಧಾನ ಕಚೇರಿ ಹೊಂದಿರುವ ಮಿಲ್ಲತ್ ಸಹಕಾರ ಬ್ಯಾಂಕ್ ಮೇಲೆ ಹೇರಿರುವ ನಿರ್ಬಂಧಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಮೇ 7ರವರೆಗೆ ವಿಸ್ತರಿಸಿದೆ.

2019ರ ಮೇ 10ರಂದು ಆರ್‌ಬಿಐ ಈ ಬ್ಯಾಂಕ್‌ನ ಮೇಲೆ ಹಣಕಾಸಿನ ನಿರ್ಬಂಧಗಳನ್ನು ವಿಧಿಸಿತ್ತು. ಆ ನಿರ್ಬಂಧಗಳ ಅನ್ವಯ, ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವವರು ₹ 1,000ಕ್ಕಿಂತ ಹೆಚ್ಚು ಹಣ ಹಿಂದಕ್ಕೆ ಪಡೆಯಲು ಅವಕಾಶ ಇರಲಿಲ್ಲ. ಅಲ್ಲಿಂದ ಇಲ್ಲಿನವರೆಗೂ ನಿರ್ಬಂಧಗಳನ್ನು ಕಾಲಕಾಲಕ್ಕೆ ವಿಸ್ತರಣೆ ಮಾಡುತ್ತ ಬರಲಾಗಿದೆ.

ನಿರ್ಬಂಧಗಳ ಅನ್ವಯ ಬ್ಯಾಂಕ್ ಹೊಸ ಸಾಲ ಕೊಡುವಂತೆ ಇಲ್ಲ, ಹೊಸದಾಗಿ ಹೂಡಿಕೆ ಮಾಡುವಂತೆ ಇಲ್ಲ. ಆರ್‌ಬಿಐ ಅನುಮತಿ ಇಲ್ಲದೆ ಹಣ ಸಂಗ್ರಹಿಸುವಂತೆ ಇಲ್ಲ ಹಾಗೂ ತಾನು ಮಾಡಬೇಕಿರುವ ಪಾವತಿಗಳನ್ನು ಮಾಡುವಂತೆಯೂ ಇಲ್ಲ.

**ದಾವಣಗೆರೆ ವರದಿ:** ಬ್ಯಾಂಕಿನಿಂದ ಸಾಲ ಪಡೆದವರಿಂದ ಸಾಲದ ಮೊತ್ತ ವಸೂಲು ಮಾಡುವುದನ್ನು ಹೊರತುಪಡಿಸಿದರೆ ಬೇರೆ ವ್ಯವಹಾರಗಳು ನಡೆಯುತ್ತಿಲ್ಲ ಎಂದು ಬ್ಯಾಂಕ್‌ನ ಮೂಲಗಳು ತಿಳಿಸಿವೆ. ಠೇವಣಿ ಇರಿಸಿದವರು ಹಾಗೂ ಸಾಲ ಪಡೆದವರು ಸೇರಿ 13 ಸಾವಿರ ಗ್ರಾಹಕರು ಇದ್ದರು ಎಂದು ಮೂಲವೊಂದು ಹೇಳಿದೆ.

# ₹ 1,000 ಕೋಟಿ ಮೌಲ್ಯದ ಮೆಣಸಿನಕಾಯಿ ನಷ್ಟ!

ಪ್ರಜಾವಾಣಿ ವಾರ್ತೆ

ಬಳ್ಳಾರಿ: ನವೆಂಬರ್‌ನಲ್ಲಿ ಸುರಿದ ಅಕಾಲಿಕ ಮಳೆಯಿಂದ ಆದ ಮೆಣಸಿನಕಾಯಿ ಬೆಳೆಯ ನಷ್ಟದ ಒಟ್ಟು ಮೌಲ್ಯ ₹ 1,000 ಕೋಟಿಗೂ ಅಧಿಕ. ಬೆಳೆ ಕಳೆದುಕೊಂಡ ರೈತರಿಗೆ ವಿತರಿಸಿದ ಪರಿಹಾರದ ಮೊತ್ತ ಕೇವಲ ₹ 36 ಕೋಟಿ!

ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಸಾಲ ಮಾಡಿ ಬೆಳೆದಿದ್ದ ಮೆಣಸಿನಕಾಯಿ ಮಳೆಗೆ ಆಹುತಿಯಾಗಿದ್ದರಿಂದ ಹತಾಶರಾದ ಅರ್ಧ ಡಜನ್ ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಇನ್ನುಳಿದವರು ಸರ್ಕಾರದ ನೆರವು ಸಿಗಬಹುದೆಂದು ಕಾಯುತ್ತಿದ್ದಾರೆ.

ಅವಿಭಜಿತ ಜಿಲ್ಲೆಯಲ್ಲಿ ಜಮೀನು ಗುತ್ತಿಗೆ ಹಿಡಿದು ಮೆಣಸಿನಕಾಯಿ ಬೆಳೆದವರೇ ಹೆಚ್ಚು. ಪ್ರತಿ ಎಕರೆ ಜಮೀನಿಗೆ ಗುತ್ತಿಗೆ ಹಣವೇ ಸರಾಸರಿ ₹ 30 ಸಾವಿರ. ಬಿತ್ತನೆ ಬೀಜ, ರಸಗೊಬ್ಬರ, ಕ್ರಿಮಿನಾಶಕ, ಕೂಲಿ ವೆಚ್ಚ ಸೇರಿದರೆ ಎಕರೆಗೆ ತಗುಲಿರುವ ಒಟ್ಟು ವೆಚ್ಚ ₹ 1.25 ಲಕ್ಷ. ಸರ್ಕಾರ ಕೊಟ್ಟಿರುವ ಪರಿಹಾರ ಹೆಚ್ಚೆಂದರೆ ಪ್ರತಿ ಹೆಕ್ಟೇರ್‌ಗೆ (ಎರಡೂವರೆ ಎಕರೆ) ₹ 13,500. ಗರಿಷ್ಠ ಪರಿಹಾರದ ಮಿತಿ ಎರಡು ಹೆಕ್ಟೇರ್ (ಐದು ಎಕರೆ). ಒಂದೇ ಸರ್ವೆ ನಂಬರ್‌ನಲ್ಲಿ ನಾಲ್ಕೈದು ಜನ ರೈತರ ಹೆಸರಿದ್ದರೂ ಪರಿಹಾರ ಸಿಗುವುದು ಒಬ್ಬರಿಗೆ ಮಾತ್ರ.



ಬಳ್ಳಾರಿ ತಾಲ್ಲೂಕಿನ ರೂಪನಗುಡಿ ಜಮೀನೊಂದರಲ್ಲಿ ರಾಶಿ ಹಾಕಿರುವ ಮೆಣಸಿನಕಾಯಿ

ಬೆಳೆ ನಷ್ಟ ಅನುಭವಿಸಿರುವ ಇನ್ನೂ 3000 ರೈತರಿಗೆ (ತೋಟಗಾರಿಕೆ, ಕೃಷಿ ಬೆಳೆ ಸೇರಿ) ಪರಿಹಾರ ಸಿಕ್ಕಿಲ್ಲ. ಆಧಾರ್ ಸಂಖ್ಯೆ ಮತ್ತು ಹೆಸರುಗಳ ಗೊಂದಲದಿಂದಾಗಿ ಬ್ಯಾಂಕ್ ಖಾತೆಗಳಿಗೆ ಪರಿಹಾರದ ಹಣ ಜಮೆ ಆಗಿಲ್ಲ. ಪ್ರತಿ ರೈತರಿಂದ ಮಾಹಿತಿ ಪಡೆಯಲಾಗುತ್ತಿದೆ ಎಂದು ಅಧಿಕೃತ ಮೂಲಗಳು ಸ್ಪಷ್ಟಪಡಿಸಿವೆ.

ಬಳ್ಳಾರಿಯಲ್ಲಿ 40 ಸಾವಿರ ಹೆಕ್ಟೇರ್ ಮತ್ತು ವಿಜಯನಗರದಲ್ಲಿ 26 ಸಾವಿರ ಹೆಕ್ಟೇರ್ ಸೇರಿದಂತೆ ಒಟ್ಟು 66 ಸಾವಿರ ಹೆಕ್ಟೇರ್‌ನಲ್ಲಿ ಬ್ಯಾಡಗಿ ಮತ್ತು ಗುಂಟೂರು ಮೆಣಸಿನಕಾಯಿ ಬೆಳೆಯಲಾಗಿತ್ತು. ಸರಿಯಾಗಿ ಬೆಳೆ ಬಂದಿದ್ದರೆ 2.5 ಲಕ್ಷ ಟನ್ ಮೆಣಸಿನಕಾಯಿ ಬರಬೇಕಿತ್ತು. ಹಿಂದಿನ ವರ್ಷ 34 ಸಾವಿರ ಹೆಕ್ಟೇರ್‌ನಲ್ಲಿ 1.8 ಲಕ್ಷ ಟನ್ ಮೆಣಸಿನಕಾಯಿ ಬೆಳೆಯಲಾಗಿತ್ತು.

'ಕಳೆದ ವರ್ಷ ಬೆಳೆದಿರುವ ಮೆಣಸಿನಕಾಯಿಗೆ ಉತ್ತಮ ಬೆಲೆ ಬರಬಹುದೆಂಬ ನಿರೀಕ್ಷೆಯಲ್ಲಿ ರೈತರು ಇನ್ನೂ ಶೈತ್ಯಾಗಾರಗಳಲ್ಲಿ ಇಟ್ಟಿದ್ದಾರೆ. ನಮ್ಮಲ್ಲಿರುವ ಸುಮಾರು 25 ಶೈತ್ಯಾಗಾರಗಳು ಮೆಣಸಿನ ಚೀಲಗಳಿಂದ ತುಂಬಿವೆ' ಎಂದು ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಎಸ್.ಡಿ. ಭೋಗಿ ಹೇಳಿದರು.

ಮೆಣಸಿನಕಾಯಿ, ದೇಶಕ್ಕೆ ಡಾಲರ್ ತಂದುಕೊಡುವ ಬೆಳೆ. ಕಾಯಿ ಸಂಸ್ಕರಿಸಿ ಪುಡಿ ಮಾಡಿ, ಹೊರ ದೇಶಗಳಿಗೆ ಕಳಿಸಲಾಗುತ್ತದೆ. ಬ್ಯಾಡಗಿ ಮೆಣಸಿನಕಾಯಿಯ ಬೆಲೆ ಕ್ವಿಂಟಲ್‌ಗೆ ₹ 25 ಸಾವಿರದವರೆಗಿದೆ. ಗುಂಟೂರು ಮೆಣಸಿನಕಾಯಿ ಕ್ವಿಂಟಲ್‌ಗೆ ₹ 12 ಸಾವಿರದವರೆಗಿದೆ. ತೋಟಗಾರಿಕೆ ಇಲಾಖೆ ಹಿರಿಯ ಅಧಿಕಾರಿಗಳ ಅಂದಾಜಿನ ಪ್ರಕಾರ ಮೆಣಸಿನಕಾಯಿ ಬೆಳೆಯಿಂದ ಆಗಿರುವ ಒಟ್ಟು ನಷ್ಟ ₹ 1,000 ಕೋಟಿಗೂ ಅಧಿಕ.

### ಬೆಂಗಳೂರು ಓಪನ್ ಎಟಿಪಿ ಟೆನಿಸ್ ಟೂರ್ನಿ: ಭಾರತದ ಆಟಗಾರರಿಗೆ ನಿರಾಶೆ

# ಪ್ರಜ್ಞೇಶ್ ಪ್ರೀಕ್ವಾರ್ಟರ್ ಫೈನಲ್‌ಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಫ್ರಾನ್ಸ್‌ನ ಮಥಿಯಾಸ್ ಬಾರ್ಗ್ ಅವರ ಸವಾಲನ್ನು ದಿಟ್ಟವಾಗಿ ಎದುರಿಸಿದ ಭಾರತದ ಪ್ರಜ್ಞೇಶ್ ಗುಣೇಶ್ವರನ್ ಅವರು ಬೆಂಗಳೂರು ಓಪನ್ ಎಟಿಪಿ ಟೆನಿಸ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಹಂತಕ್ಕೆ ಲಗ್ಗೆ ಇರಿಸಿದ್ದಾರೆ.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಮಂಗಳವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಪ್ರಜ್ಞೇಶ್ 7-6 (4), 6-2ರಲ್ಲಿ ಜಯ ಗಳಿಸಿದರು. ಟೂರ್ನಿಯಲ್ಲಿ ಭಾರತದ ಇತರ ಆಟಗಾರರು ಹೊರಬಿದ್ದರು.

ಫ್ರಾನ್ಸ್‌ನ ಮತ್ತೊಬ್ಬ ಆಟಗಾರ ಅಲೆಕ್ಸಾಂಡರ್ ಮುಲ್ಲರ್ ಟೂರ್ನಿಯಲ್ಲಿ ಭರ್ಜರಿ ಆರಂಭ ಕಂಡರು.

ಎರಡನೇ ಶ್ರೇಯಾಂಕಿತ ಇಟಲಿಯ ಸ್ಟೆಫನೊ ಟ್ರವಗಿಲಾ ಎದುರಿನ ಪಂದ್ಯದಲ್ಲಿ ಅವರು 6-1, 7-6 (2)ರಲ್ಲಿ ಜಯ ಗಳಿಸಿ 16ರ ಘಟ್ಟ ಪ್ರವೇಶಿಸಿದರು. ಅಗ್ರ ಶ್ರೇಯಾಂಕದ ಆಟಗಾರ ಜೆಕ್ ಗಣರಾಜ್ಯದ ಜಿರಿ ವೆಸೆಲಿ ಸ್ವಿಟ್ಜರ್ಲೆಂಡ್‌ನ ಆ್ಯಂಟೊಯ್ನ್ ಬೆಲಿಯರ್ ಅವರ ಸವಾಲನ್ನು ಮೀರಿ 6-3, 6-7 (2), 6-2ರಲ್ಲಿ ಗೆಲುವು ಸಾಧಿಸಿದರು.

ಟೂರ್ನಿಯಲ್ಲಿ ಆಡುತ್ತಿರುವ ಭಾರತದ ಆಟಗಾರರ ಪೈಕಿ ಗರಿಷ್ಠ ರ‍್ಯಾಂಕಿಂಗ್ ಹೊಂದಿರುವ ಆಟಗಾರ ರಾಮ್‌ಕುಮಾರ್ ರಾಮನಾಥನ್ ಪ್ರಬಲ ಪ್ರತಿಸ್ಪರ್ಧೆ ಒಡ್ಡಿದರಾದರೂ ಸೋತು ಹೊರಬಿದ್ದರು. ಆಸ್ಟ್ರೇಲಿಯಾದ ಮ್ಯಾಕ್ಸ್ ಪರ್ಸೆಲ್ ಎದುರಿನ ಹಣಾಹಣಿಯಲ್ಲಿ ಅವರು 6-3, 0-6, 5-7ರಲ್ಲಿ ಸೋತರು.

ಮೊದಲ ಸೆಟ್‌ನ ಮೂರನೇ ಗೇಮ್‌ನ ಆರಂಭದಲ್ಲೇ ಎದುರಾಳಿಯ ಸರ್ವ್ ಮುರಿದ 32 ವರ್ಷದ ಪ್ರಜ್ಞೇಶ್ ಅವರು ಅಮೋಘ ಆಟದ ಮೂಲಕ ಎದುರಾಳಿಯ ವಿರುದ್ಧ ಮೇಲುಗೈ ಸಾಧಿಸಿದರು. ಏಳು ಮತ್ತು ಎಂಟನೇ ಗೇಮ್‌ನಲ್ಲಿ ಫ್ರಾನ್ಸ್ ಆಟಗಾರ ತಿರುಗೇಟು ನೀಡಿದರು. ಆದ್ದರಿಂದ ಸೆಟ್ ಟೈಬ್ರೇಕರ್‌ಗೆ ಸಾಗಿತು. ಈ ಹಂತದಲ್ಲಿ ಪ್ರಜ್ಞೇಶ್ ಛಲದಿಂದ ಆಡಿ ಗೆಲುವು ಸಾಧಿಸಿದರು.

ಎರಡನೇ ಸೆಟ್‌ನ ಆರಂಭದಲ್ಲೂ ಪ್ರಜ್ಞೇಶ್ ಬ್ರೇಕ್ ಪಾಯಿಂಟ್ ಮೂಲಕ ಮಿಂಚಿದರು. ಎಡಗೈ ಆಟಗಾರನ ತಂತ್ರಗಳಿಗೆ ನಿರಾಶೆಗೊಳಗಾದ ಮಥಿಯಾಸ್ ಅವರು ಒಂದು ಹಂತದಲ್ಲಿ ರ‍್ಯಾಕೆಟ್ ನೆಲಕ್ಕೆ ಬಡಿದು ಅಸಮಾಧಾನ ವ್ಯಕ್ತಪಡಿಸಿದರು.



ಪ್ರಜ್ಞೇಶ್ ಗುಣೇಶ್ವರನ್ ಚೆಂಡನ್ನು ರಿಟರ್ನ್ ಮಾಡಲು ಮುಂದಾದರು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ

### ಫಲಿತಾಂಶಗಳು

ಬ್ರೆಜಿಲ್‌ನ ಗ್ಯಾಬ್ರಿಯಲ್ ಡಿಕ್ಯಾಂಪ್ಸ್‌ಗೆ ಇಟಲಿಯ ಫೆಡರಿಕೊ ಗಾಯೊ ಎದುರು 6-3, 6-3ರಲ್ಲಿ ಜಯ; ಟ್ಯುನೀಷಿಯಾದ ಅಲ್ಝ್ ಸೆಲಿಕ್‌ಬೆಲ್‌ಗೆ ಭಾರತದ ಅರ್ಜುನ್ ಖಾಡೆ ವಿರುದ್ಧ 6-1, 6-2ರಲ್ಲಿ, ಕ್ರೊವೇಷಿಯಾದ ಬೋರ್ನ ಗೋಜೊಗೆ ಜಪಾನ್‌ನ ರಿಯೊ ನೊಗುಚಿ ವಿರುದ್ಧ 3-6, 6-1, 6-2ರಲ್ಲಿ, ಫ್ರಾನ್ಸ್‌ನ ಅಲೆಕ್ಸಾಂಡರ್ ಮುಲ್ಲರ್‌ಗೆ ಇಟಲಿಯ ಸ್ಟೆಫನೊ ಟ್ರವಾಗ್ಲಿಯಾ ಎದುರು 6-1, 7-6 (2)ರಲ್ಲಿ, ಜೆಕ್ ಗಣರಾಜ್ಯದ ಜಿರಿ ವೆಸೆಲಿಗೆ ಸ್ವಿಟ್ಜರ್ಲೆಂಡ್‌ನ ಆ್ಯಂಟೊನಿಯೊ ಬೆಲಿಯರ್ ವಿರುದ್ಧ 6-3, 6-7 (2), 6-2ರಲ್ಲಿ, ಟರ್ಕಿಯ ಸೆಮ್ ಇಲ್ಕೆಲ್‌ಗೆ ಕೆನಡಾದ ಸ್ಟೀವನ್ ಡಿಯೆಜ್ ವಿರುದ್ಧ 6-2, 6-3ರಲ್ಲಿ, ಭಾರತದ ಪ್ರಜ್ಞೇಶ್ ಗುಣೇಶ್ವರ್‌ಗೆ ಫ್ರಾನ್ಸ್‌ನ ಮಥಿಯಾಸ್ ಬಾರ್ಗ್ ಎದುರು 7-6 (4), 6-2ರಲ್ಲಿ ಜಯ; ಬಲ್ಗೇರಿಯಾದ ದಿಮಿತರ್ ಕುಜ್ಮನೊವ್‌ಗೆ ಭಾರತದ ಪ್ರಜ್ವಲ್ ದೇವ್ ಎದುರು 6-2, 6-2ರಲ್ಲಿ, ರಷ್ಯಾದ ಎವ್ಜೆನಿ ಡೊನ್‌ಸ್ಕೊಯ್‌ಗೆ ಟುನೀಷಿಯಾದ ಮಲೆಕ್ ಜಜಿರಿ ಎದುರು 7-6 (10), 6-4ರಲ್ಲಿ; ಫ್ರಾನ್ಸ್‌ನ ಎನ್ಜೊ ಕೊಕಡ್‌ಗೆ ಭಾರತದ ಋಷಿ ರೆಡ್ಡಿ ವಿರುದ್ಧ 6-1, 6-3ರಲ್ಲಿ, ಆಸ್ಟ್ರೇಲಿಯಾದ ಮ್ಯಾಕ್ಸ್ ಪರ್ಸೆಲ್‌ಗೆ ಭಾರತದ ರಾಮ್‌ಕುಮಾರ್ ಎದುರು 3-6, 6-0, 7-5ರಲ್ಲಿ ಜಯ.

# ವಿಶ್ವಕಪ್ ವಿಜೇತ ಯುವಪಡೆ ಸ್ವದೇಶಕ್ಕೆ

**ನವದೆಹಲಿ(ಪಿಟಿಐ):** ಐದನೇ ಸಲ 19 ವರ್ಷದೊಳಗಿನವರ ಕ್ರಿಕೆಟ್ ವಿಶ್ವಕಪ್ ಜಯಿಸಿದ ಭಾರತ ಯುವಪಡೆಯು ವೆಸ್ಟ್ ಇಂಡೀಸ್‌ನಿಂದ ಮಂಗಳವಾರ ಬೆಳಿಗ್ಗೆ ತವರಿಗೆ ಮರಳಿತು.

ಆ್ಯಮ್‌ಸ್ಟರ್‌ಡ್ಯಾಂ ಮತ್ತು ದುಬೈ ಮೂಲಕ ಪ್ರಯಾಣ ಮಾಡಿದ ತಂಡವು ಬೆಂಗಳೂರಿಗೆ ಬಂದಿಳಿಯಿತು. ಶನಿವಾರ ನಡೆದ ಫೈನಲ್‌ನಲ್ಲಿ ಭಾರತ ತಂಡವು ಇಂಗ್ಲೆಂಡ್ ವಿರುದ್ಧ ಜಯಭೇರಿ ಬಾರಿಸಿತ್ತು.

ಬುಧವಾರ ಅಹಮದಾಬಾದಿನಲ್ಲಿ ನಡೆಯಲಿರುವ ಭಾರತ, ವೆಸ್ಟ್ ಇಂಡೀಸ್ ನಡುವಣ ಪಂದ್ಯದ ಸಂದರ್ಭದಲ್ಲಿ ಯುವಪಡೆಯನ್ನು ಸನ್ಮಾನಿಸಲು ಬಿಸಿಸಿಐ ಯೋಜಿಸಿದೆ.

ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ)ಯು ತಂಡದ ಪ್ರಯಾಣ ವ್ಯವಸ್ಥೆಯನ್ನು ಮಾಡಿತ್ತು. ಎಕಾನಮಿ ಕ್ಲಾಸ್‌ನಲ್ಲಿ ಯಶ್ ಧುಳ್ ನಾಯಕತ್ವದ ತಂಡವು ಸ್ವದೇಶಕ್ಕೆ ಮರಳಿತು. ತಂಡದೊಂದಿಗೆ ವೆಸ್ಟ್ ಇಂಡೀಸ್‌ಗೆ ತೆರಳಿದ್ದ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಅವರು ಆಯ್ಕೆ ಸಮಿತಿ ಸದಸ್ಯರು ಮತ್ತು ಐವರು ಕಾಯ್ದಿಟ್ಟ ಆಟಗಾರರೊಂದಿಗೆ ಪ್ರತ್ಯೇಕವಾಗಿ ಪ್ರಯಾಣ ಮಾಡಿ ಭಾರತಕ್ಕೆ ಬಂದರು. ಟೂರ್ನಿಯ ಲೀಗ್ ಹಂತದಲ್ಲಿ ಐರ್ಲೆಂಡ್ ಎದುರು ಪಂದ್ಯದ ವೇಳೆ ನಾಯಕ ಯಶ್ ಸೇರಿದಂತೆ ಐವರು ಆಟಗಾರರಿಗೆ ಕೋವಿಡ್ ಖಚಿತವಾಗಿತ್ತು. ಪ್ರತ್ಯೇಕವಾಸದಲ್ಲಿದ್ದು ಚಿಕಿತ್ಸೆ ಪಡೆದು ಮರಳಿದ್ದರು. ನಾಕೌಟ್ ಹಂತದಲ್ಲಿ ಅಮೋಘ ಆಟವಾಡಿದ್ದರು.


ವಿಶ್ವಕಪ್ ಜಯಿಸಿದ 19 ವರ್ಷದೊಳಗಿನವರ ಭಾರತ ತಂಡದ ಆಟಗಾರರು ಮಂಗಳವಾರ ಬೆಳಿಗ್ಗೆ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬಂದಿಳಿದರು –ಪಿಟಿಐ ಚಿತ್ರ

# ಪ್ರೊ ಕಬಡ್ಡಿ: ಪಟ್ನಾ, ಹರಿಯಾಣಕ್ಕೆ ಜಯ

**ಬೆಂಗಳೂರು:** ಸಚಿನ್ ಅಮೋಘ ದಾಳಿಯ ಬಲದಿಂದ ಪಟ್ನಾ ಪೈರೇಟ್ಸ್ ತಂಡವು ಅಮೋಘ ಜಯ ಸಾಧಿಸಿತು.

ವೈಟ್‌ಫೀಲ್ಡ್‌ನಲ್ಲಿರುವ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಪಟ್ನಾ ತಂಡವು 47–38ರಿಂದ ಯು ಮುಂಬಾ ಎದುರಿಗೆ ಜಯಿಸಿತು. ಸಚಿನ್ 16 ಅಂಕಗಳನ್ನು ಗಳಿಸಿದ ಜಯದ ರೂವಾರಿಯಾದರು. ಗುಮಾನ್ ಸಿಂಗ್ ಕೂಡ 11 ಅಂಕಗಳನ್ನು ಗಳಿಸಿ ತಂಡದ ಜಯಕ್ಕೆ ಕಾಣಿಕೆ ನೀಡಿದರು. ಮುಂಬಾ ತಂಡದ ಅಭಿಷೇಕ್ ಸಿಂಗ್ 13 ಮತ್ತು ವಿ. ಅಜಿತ್ 11 ಅಂಕಗಳನ್ನು ಗಳಿಸಿದರು. ಇನ್ನೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡವು 37–29ರಿಂದ ತಮಿಳ್ ತಲೈವಾಸ್ ವಿರುದ್ಧ ಜಯಿಸಿತು. ಹರಿಯಾಣ ತಂಡದ ಆಶೀಶ್ ಅಮೋಘ ದಾಳಿ ನಡೆಸಿ 16 ಪಾಯಿಂಟ್‌ಗಳಣ್ನು ತಮ್ಮ ಜೇಬಿಗೆ ಹಾಕಿಕೊಂಡರು. ಅವರಿಗೆ ನಾಯಕ ವಿಕಾಶ್ ಖಂಡೋಲಾ (8) ಉತ್ತಮ ಬೆಂಬಲ ನೀಡಿದರು. ತಲೈವಾಸ್ ತಂಡದ ಮಂಜೀತ್ (10) ಮತ್ತು ಅಜಿಂಕ್ಯ ಪವಾರ್ (8) ಉತ್ತಮವಾಗಿ ಆಡಿದರು.

# ರಣಜಿ ಟ್ರೋಫಿ: ಕರ್ನಾಟಕ ಬಳಗಕ್ಕೆ ಜಿಆರ್‌ವಿ ಶುಭಾಶಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎರಡು ವರ್ಷಗಳ ನಂತರ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲು ಕಣಕ್ಕಿಳಿಯುತ್ತಿರುವ ಕರ್ನಾಟಕ ತಂಡಕ್ಕೆ ಕ್ರಿಕೆಟ್ ದಂತಕಥೆ ಗುಂಡಪ್ಪ ವಿಶ್ವನಾಥ್ ಶುಭ ಕೋರಿ ಬೀಳ್ಕೊಟ್ಟರು.

ಮಂಗಳವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ತಮ್ಮ ಹಸ್ತಾಕ್ಷರ ಇರುವ ಕ್ರಿಕೆಟ್ ಕಿಟ್ ಬ್ಯಾಗ್‌ಗಳನ್ನು ಮನೀಷ್ ಪಾಂಡೆ ನಾಯಕತ್ವದ ಬಳಗಕ್ಕೆ ಕಾಣಿಕೆ ನೀಡಿದರು. ಆಟಗಾರರಿಗೆಸಲಹೆಗಳನ್ನು ಕೂಡ ನೀಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿ) ಕಾರ್ಯದರ್ಶಿ ಸಂತೋಷ್ ಮೆನನ್, ಖಜಾಂಚಿ ವಿನಯ್ ಮೃತ್ಯುಂಜಯ, ಶಾವೀರ್ ತಾರಾಪುರ್ ಹಾಜರಿದ್ದರು.

**ಅನೀಶ್ವರ್‌ಗೆ ಸ್ಥಾನ:** 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಚಾಂಪಿಯನ್ ಭಾರತ ತಂಡದಲ್ಲಿ ಆಡಿದ್ದ ಬೆಂಗಳೂರಿನ ಎಡಗೈ ಆಲ್‌ರೌಂಡರ್ ಅನೀಶ್ವರ್ ಗೌತಮ್ ರಾಜ್ಯ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಇದೇ ಮೊದಲ ಸಲ ರಾಜ್ಯ ತಂಡದಲ್ಲಿ ಸ್ಥಾನ ಗಿಟ್ಟಿಸಿದ್ದಾರೆ.

ವಿಜಯ್ ಹಜಾರೆ ಟ್ರೋಫಿ ಮತ್ತು ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಗಳಲ್ಲಿ ಉತ್ತಮವಾಗಿ ಆಡಿದ್ದ ಕೆ.ಸಿ. ಕಾರ್ಯಪ್ಪ, ವಿದ್ಯಾಧರ್ ಪಾಟೀಲ ಅವರಿಗೂ ಅವಕಾಶ ಲಭಿಸಿದೆ. ಭಾರತ ತಂಡದಲ್ಲಿ ಆಡುತ್ತಿರುವ ಆರಂಭಿಕ ಬ್ಯಾಟರ್ ಮಯಂಕ್ ಅಗರವಾಲ್ ಮತ್ತು ಮಧ್ಯಮವೇಗಿ ಪ್ರಸಿದ್ಧ ಕೃಷ್ಣ ಅವರನ್ನೂ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ತಂಡ: ಮನೀಷ್ ಪಾಂಡೆ (ನಾಯಕ), ಮಯಂಕ್ ಆಗರವಾಲ್, ಆರ್. ಸಮರ್ಥ್, ಕರುಣ್ ನಾಯರ್, ದೇವದತ್ತ ಪಡಿಕ್ಕಲ್, ಕೆ.ವಿ. ಸಿದ್ಧಾರ್ಥ್, ಡಿ. ನಿಶ್ಚಲ್, ಅನೀಶ್ವರ್ ಗೌತಮ್, ಶುಭಾಂಗ್ ಹೆಗಡೆ, ಕೆ. ಗೌತಮ್, ಶ್ರೇಯಸ್ ಗೋಪಾಲ್, ಜೆ. ಸುಚಿತ್, ಕೆ.ಸಿ. ಕಾರ್ಯಪ್ಪ, ಶರತ್ ಶ್ರೀನಿವಾಸ್ (ವಿಕೆಟ್‌ಕೀಪರ್), ಬಿ.ಆರ್. ಶರತ್ (ವಿಕೆಟ್‌ಕೀಪರ್), ಪ್ರಸಿದ್ಧ ಎಂ ಕೃಷ್ಣ, ರೋನಿತ್ ಮೋರೆ, ಎಂ. ವೆಂಕಟೇಶ್, ವೈಶಾಖ್ ವಿಜಯಕುಮಾರ್, ವಿದ್ಯಾಧರ್ ಪಾಟೀಲ. ಯರೇ ಕೆ ಗೌಡ (ಮುಖ್ಯ ಕೋಚ್), ಎಸ್. ಅರವಿಂದ್ (ಬೌಲಿಂಗ್ ಕೋಚ್), ದೀಪಕ್ ಚೌಗುಲೆ (ಫೀಲ್ಡಿಂಗ್ ಕೋಚ್), ಜಾಬ ಪ್ರಭು (ಫಿಸಿಯೊಥೆರಪಿಸ್ಟ್), ಎಚ್.ಎಸ್. ಗೌತಮ್ (ಫಿಸಿಯೊಥೆರಪಿಸ್ಟ್), ಎ.ಟಿ. ರಾಜಮಣಿಪ್ರಭು (ಸ್ಟ್ರೆಂಥ್–ಕಂಡಿಷನಿಂಗ್), ಸಿ.ಎಂ. ಸೋಮಸುಂದರ್ (ಮಸಾಜ್ ಪರಿಣತ), ಅನುತೋಷ್ ಪೋಳ್ (ಮ್ಯಾನೇಜರ್), ಎಂ.ಎಸ್. ವಿನೋದಕುಮಾರ್ (ವಿಡಿಯೊ ಅನಾಲಿಸ್ಟ್).


ಕರ್ನಾಟಕ ತಂಡದ ಆಟಗಾರರಿಗೆ ಬೆಂಗಳೂರಿನಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ಶುಭ ಕೋರಿದ ಮಾಜಿ ಕ್ರಿಕೆಟಿಗ ಜಿ.ಆರ್. ವಿಶ್ವನಾಥ್ ಚಿತ್ರದಲ್ಲಿದ್ದಾರೆ

### ತಂಡಗಳಿಗೆ ಐದು ದಿನಗಳ ಕ್ವಾರಂಟೈನ್

**ವದೆಹಲಿ (ಪಿಟಿಐ):** ರಣಜಿ ಟೂರ್ನಿಯ ಮೊದಲ ಸುತ್ತಿನ ಪಂದ್ಯಗಳು ಇದೇ 17ರಿಂದ ನಡೆಯಲಿವೆ. ತಂಡಗಳು 10ರಿಂದ ಐದು ದಿನಗಳ ಕಡ್ಡಾಯ ಕ್ವಾರಂಟೈನ್‌ಗೆ ಒಳಗಾಗಬೇಕು. ಎರಡನೇ ಮತ್ತು ಐದನೇ ದಿನದಂದು ಆರ್‌ಟಿ ಪಿಸಿಆರ್ ಪರೀಕ್ಷೆ ಮಾಡಿಸಿಕೊಳ್ಳುವುದು ಕಡ್ಡಾಯ.

ಫೆ. 15 ಮತ್ತು 16ರಂದು ಅಭ್ಯಾಸಕ್ಕೆ ಅವಕಾಶ ಸಿಗಲಿದೆ. ಪ್ರೀಕ್ವಾರ್ಟರ್ ಫೈನಲ್ ಪಂದ್ಯಗಳು ಮೊದಲ ಹಂತದಲ್ಲಿ ನಡೆಯಲಿವೆ. ಎರಡನೇ ಹಂತದಲ್ಲಿ ಕ್ವಾಟರ್‌ಫೈನಲ್, ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳು ನಡೆಯಲಿದೆ.

ಕೋವಿಡ್ ಸಮಸ್ಯೆಯ ನಿರ್ವಹಣೆಗೆ ತಂಡಗಳು ಫಿಸಿಷಿಯನ್ ಒಬ್ಬರನ್ನು ನೇಮಕ ಮಾಡಿಕೊಳ್ಳಲು ನಿಯಮಾವಳಿಯಲ್ಲಿ ಅವಕಾಶ ಇದೆ. ಪಂದ್ಯದ ಆತಿಥ್ಯ ವಹಿಸುವ ರಾಜ್ಯ ಸಂಸ್ಥೆಗೆ ದಿನವೊಂದಕ್ಕೆ ₹1.25 ಲಕ್ಷ ವನ್ನು ಬಿಸಿಸಿಐ ನೀಡಲಿದೆ. ರಾಜಕೋಟ್, ಕಟಕ್, ಅಹಮದಾಬಾದ್, ಚೆನ್ನೈ, ತಿರುವನಂತಪುರಂ, ದೆಹಲಿ, ಹರಿಯಾಣ, ಗುವಾಹಟಿ ಮತ್ತು ಕೋಲ್ಕತ್ತದಲ್ಲಿ ಪಂದ್ಯಗಳು ನಡೆಯಲಿವೆ.

**ಸೌರಾಷ್ಟ್ರದಲ್ಲಿ ಪೂಜಾರ:** ಟೆಸ್ಟ್ ಕ್ರಿಕೆಟ್ ಪರಿಣತ ಚೇತೇಶ್ವರ್ ಪೂಜಾರ ಅವರು ರಣಜಿ ಟೂರ್ನಿಯಲ್ಲಿ ಸೌರಾಷ್ಟ್ರ ತಂಡದಲ್ಲಿ ಆಡಲಿದ್ದಾರೆ. ಕಳೆದ ಹಲವು ಟೆಸ್ಟ್ ಸರಣಿಗಳಲ್ಲಿ ಪೂಜಾರ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದಾರೆ.

ಅವರು ರಣಜಿ ಟೂರ್ನಿಯಲ್ಲಿ ಲಯ ಕಂಡುಕೊಳ್ಳಲು ಪ್ರಯತ್ನಿಸಲಿದ್ದಾರೆ. ಜಯದೇವ್ ಉನದ್ಕತ್ ನಾಯಕತ್ವ ವಹಿಸಿರುವ ಸೌರಾಷ್ಟ್ರ ತಂಡದಲ್ಲಿ ಪೂಜಾರ ಆಡುವರು. ಮುಂದಿನ ತಿಂಗಳು ಶ್ರೀಲಂಕಾದ ಎದುರು ನಡೆಯಲಿರುವ ಟೆಸ್ಟ್ ಸರಣಿಯಲ್ಲಿ ಆಯ್ಕೆಯಾಗಲು ಅವರು ಲಯಕ್ಕೆ ಮರಳುವುದು ಅಗತ್ಯವೂ ಆಗಿದೆ.

### ಕಾನೂನು ತಂಡದೊಂದಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಭೆ

# ನೀರು ಹಂಚಿಕೆ ನಂತರ ನದಿ ಜೋಡಣೆ: ರಾಜ್ಯದ ಒತ್ತಡ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕಣಿವೆ ವ್ಯಾಪ್ತಿಯ ರಾಜ್ಯಗಳ ಪಾಲಿನ ನೀರನ್ನು ಹಂಚಿಕೆ ಮಾಡಿದ ನಂತರವೇ ನದಿ ಜೋಡಣೆ ಯೋಜನೆಗೆ ಚಾಲನೆ ನೀಡುವಂತೆ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹೇರಲು ನಿರ್ಧರಿಸಿದೆ.

ಕೃಷ್ಣಾ, ಕಾವೇರಿ, ತುಂಗಭದ್ರಾ, ಮಹದಾಯಿ ನದಿ ನೀರಿನ ಬಳಕೆಗಾಗಿ ಕೈಗೆತ್ತಿಕೊಳ್ಳಲಾದ ವಿವಿಧ ಯೋಜನೆಗಳ ಸ್ಥಿತಿಗತಿ ಕುರಿತು ಚರ್ಚಿಸುವ ನಿಟ್ಟಿನಲ್ಲಿ ಮಂಗಳವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆದ ಕಾನೂನು ತಂಡದ ಸದಸ್ಯರ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ನದಿ ಜೋಡಣೆ ಮೂಲಕ ದೊರೆಯುವ ನೀರಿನ ಪಾಲಿನಲ್ಲಿ ತಾರತಮ್ಯ ಮಾಡದೇ ಮುಂಚಿತವಾಗಿಯೇ ಸಮರ್ಪಕವಾಗಿ ಹಂಚಿಕೆ ಮಾಡುವಂತೆ ರಾಜ್ಯ ಈ ಮೊದಲೇ ಕೋರಿದೆ. ಕೇಂದ್ರ ಬಜೆಟ್‌ನಲ್ಲಿ ಮತ್ತೆ ಯೋಜನೆಯ ಪ್ರಸ್ತಾಪ ಮಾಡಿದ್ದರಿಂದ ಈ ಕುರಿತು ಮನವಿ ಸಲ್ಲಿಸಲು ತೀರ್ಮಾನಿಸಲಾಗಿದೆ ಎಂದು ಸಭೆಯ ನಂತರ ಬೊಮ್ಮಾಯಿ ಅವರು ಸುದ್ದಿಗಾರರಿಗೆ ತಿಳಿಸಿದರು.

ಕುಡಿಯುವ ನೀರು ಪೂರೈಕೆ ಉದ್ದೇಶದೊಂದಿಗೆ ರಾಜ್ಯದ ಪ್ರಸ್ತಾವಿತ ಮೇಕೆದಾಟು ಯೋಜನೆಗೆ ವಿರೋಧ ವ್ಯಕ್ತಪಡಿಸಿರುವ ತಮಿಳುನಾಡು ಕೈಗೆತ್ತಿಕೊಂಡಿರುವ ಕಾವೇರಿ-ಗುಂಡಾರು-ವೈಗೈ ನದಿಗಳ ಜೋಡಣೆ, ಹೊಗೇನಕಲ್ ಯೋಜನೆ, ಭವಾನಿ ಜಲ ವಿದ್ಯುತ್ ಯೋಜನೆಗಳನ್ನು ವಿರೋಧಿಸಿ ಕಾನೂನು ಹೋರಾಟ ಮಾಡುವ ಕುರಿತು ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಅವರು ಹೇಳಿದರು.

ಕೃಷ್ಣಾ ನದಿ ನೀರಿನ ಹಂಚಿಕೆ ಸಂಬಂಧ ಆಂಧ್ರ, ತೆಲಂಗಾಣ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿವೆ. ವಿಚಾರಣೆಯಿಂದ ಇಬ್ಬರು ನ್ಯಾಯಮೂರ್ತಿಗಳು ಹಿಂದಕ್ಕೆ ಸರಿದಿದ್ದಾರೆ. ಶೀಘ್ರವೇ ನ್ಯಾಯಮೂರ್ತಿಗಳನ್ನು ನೇಮಿಸಿ ವಿಚಾರಣೆ ಆರಂಭಿಸುವಂತೆಯೂ ರಾಜ್ಯ ಸರ್ಕಾರ ಮನವಿ ಮಾಡಲಿದೆ. ರಾಜ್ಯದ ಪಾಲಿನ ಕೃಷ್ಣಾ ನೀರಿನ ಬಳಕೆಗೆ ಅಗತ್ಯವಿರುವ ಯೋಜನೆಗಳ ಜಾರಿಗೆ ಅನುವು ಮಾಡಿಕೊಡುವಂತೆ ಕೇಂದ್ರಕ್ಕೂ ಮನವಿ ಸಲ್ಲಿಸಲಾಗುತ್ತದೆ ಎಂದು ಅವರು ವಿವರಿಸಿದರು.

ಮಹದಾಯಿ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರವು ಈಗಾಗಲೇ ಅಧಿಸೂಚನೆ ಹೊರಡಿಸಿದೆ. ಕಳಸಾ–ಬಂಡೂರಿ ನಾಲೆಗಳ ತಿರುವು ಯೋಜನೆಯ ಕಾಮಗಾರಿ ವಿಳಂಬವಾಗಲು ಗೋವಾ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದೇ ಕಾರಣ. ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾದ ಕೂಡಲೇ ತಿರುವು ಯೋಜನೆ ಸಾಕಾರಗೊಳ್ಳಲಿದೆ ಎಂದು ಅವರು ತಿಳಿಸಿದರು.

ಹೊಸಪೇಟೆ ಬಳಿಯ ತುಂಗಭದ್ರಾ ಜಲಾಶಯದಲ್ಲಿ ಅಂದಾಜು 30 ಟಿಎಂಸಿ ಅಡಿ ಹೂಳು ತುಂಬಿಕೊಂಡಿದ್ದರಿಂದ ನವಿಲೆ ಬಳಿ ಅಷ್ಟೇ ಪ್ರಮಾಣದ ನೀರು ಸಂಗ್ರಹದ ಉದ್ದೇಶದಿಂದ ಸಮಾನಾಂತರ ಜಲಾಶಯ ನಿರ್ಮಿಸಲು ರಾಜ್ಯ ಸರ್ಕಾರ ಡಿಪಿಆರ್ ಸಿದ್ಧಪಡಿಸಿದೆ. ಕಣಿವೆ ವ್ಯಾಪ್ತಿಯ ಆಂಧ್ರ, ತೆಲಂಗಾಣ ಸರ್ಕಾರಗಳೊಂದಿಗೆ ಮಾತುಕತೆ ನಡೆಸಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದರು.ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಸಚಿವರಾದ ಜೆ.ಸಿ. ಮಾದುಸ್ವಾಮಿ, ಶಂಕರ ಪಾಟೀಲ ಮುನೇನಕೊಪ್ಪ, ಸಂಸದರಾದ ಶಿವಕುಮಾರ ಉದಾಸಿ, ಡಾ.ಉಮೇಶ ಜಾಧವ್, ಹಿರಿಯ ವಕೀಲ ಮೋಹನ್ ಕಾತರಕಿ, ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವದಗಿ ಹಾಗೂ ಹಿರಿಯ ಅಧಿಕಾರಿಗಳು ಹಾಜರಿದ್ದರು.

## ಬೆಂಗಳೂರಿನ ಜನತೆಗಾಗಿ ಮೇಕೆದಾಟು: ದೇವೇಗೌಡ

**ನವದೆಹಲಿ:** ಬೆಂಗಳೂರು ಜನತೆಗೆ ಕುಡಿಯುವ ನೀರು ಪೂರೈಸಲೆಂದೇ ಕರ್ನಾಟಕ ಕೈಗೆತ್ತಿಕೊಳ್ಳಲಿರುವ ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ಕೂಡಲೇ ಅನುಮತಿ ನೀಡಬೇಕು. ಜನರ ಅನುಕೂಲದ ದೃಷ್ಟಿಯಿಂದ ತಮಿಳುನಾಡು ಇದಕ್ಕೆ ವಿರೋಧ ವ್ಯಕ್ತಪಡಿಸಬಾರದು ಎಂದು ಜೆಡಿಎಸ್ ಸಂಸದ ಎಚ್‌.ಡಿ. ದೇವೇಗೌಡ ಮನವಿ ಮಾಡಿದರು.

ರಾಜ್ಯಸಭೆಯಲ್ಲಿ ಮಂಗಳವಾರ ಈ ವಿಷಯ ಪ್ರಸ್ತಾಪಿಸಿದ ಅವರು, ಕೇಂದ್ರ ಸರ್ಕಾರವು ಕೃಷ್ಣಾ–ಪೆನ್ನಾರ್ ಹಾಗೂ ಪೆನ್ನಾರ್–ಕಾವೇರಿ ನದಿಗಳ ಜೋಡಣೆ ಯೋಜನೆಗೆ ಮುಂದಾಗಿದೆ. ಆದರೆ, ರಾಜ್ಯದ ಕುಡಿಯುವ ನೀರಿನ ಸಮಸ್ಯೆ ನೀಗಿಸುವ ನಿಟ್ಟಿನಲ್ಲಿ ಮೇಕೆದಾಟು ಯೋಜನೆಗೆ ಅನುಮತಿ ನೀಡಲು ವಿಳಂಬ ನೀತಿ ಅನುಸರಿಸುತ್ತಿದೆ ಎಂದು ದೂರಿದರು.

ಕಾವೇರಿ ಜಲವಿವಾದ ನ್ಯಾಯಮಂಡಳಿಯು 2007ರಲ್ಲೇ ನೀರಿನ ಹಂಚಿಕೆ ಮಾಡಿ ಐತೀರ್ಪು ಹೊರಡಿಸಿದೆ. ನಂತರ ಸುಪ್ರೀಂ ಕೋರ್ಟ್ ಬೆಂಗಳೂರಿನ ಜನತೆಗೆ ಕುಡಿಯಲು ಕೇವಲ 4.50 ಟಿಎಂಸಿ ಅಡಿ ನೀರನ್ನು ಹಂಚಿಕೆ ಮಾಡಿದೆ. 2011ರಲ್ಲಿ 85 ಲಕ್ಷದಷ್ಟಿದ್ದ ಬೆಂಗಳೂರಿನ ಜನಸಂಖ್ಯೆ ಇದೀಗ 1.30 ಕೋಟಿಗೆ ಹೆಚ್ಚಳವಾಗಿದ್ದು, ಯೋಜನೆಗೆ ಅನುಮತಿ ನೀಡಬೇಕು ಎಂದು ಅವರು ಕೋರಿದರು.

## ‘ನೀಟ್’ ವಿನಾಯ್ತಿ ಮಸೂದೆಗೆ ಮತ್ತೆ ಅನುಮೋದನೆ

**ಚೆನ್ನೈ:** ತಮಿಳುನಾಡಿನ ವಿದ್ಯಾರ್ಥಿಗಳಿಗೆ ‘ನೀಟ್’ ಪರೀಕ್ಷೆಯಿಂದ ವಿನಾಯ್ತಿ ನೀಡುವ ಮಸೂದೆಗೆ ಅಲ್ಲಿನ ವಿಧಾನಸಭೆಯಲ್ಲಿ ಮಂಗಳವಾರ ಮತ್ತೊಮ್ಮೆ ಅನುಮೋದನೆ ಪಡೆಯಲಾಗಿದೆ. ಮಸೂದೆ ಮಂಡನೆಗಾಗಿ ವಿಶೇಷ ಅಧಿವೇಶನ ಕರೆಯಲಾಗಿತ್ತು.

‘ನೀಟ್’ ವಿನಾಯ್ತಿ ಮಸೂದೆಗೆ ತಮಿಳುನಾಡು ವಿಧಾನಸಭೆಯಲ್ಲಿ ಅನುಮೋದನೆ ನೀಡಿರುವುದು ಇದು ಎರಡನೇ ಬಾರಿ. 2021ರ ಸೆಪ್ಟೆಂಬರ್ 13ರಂದು ಈ ಹಿಂದೆ ಮಸೂದೆಗೆ ಅನುಮೋದನೆ ಪಡೆಯಲಾಗಿತ್ತು. ಬಳಿಕ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗಿತ್ತು. ಆದರೆ, ಮಸೂದೆಯಮನ್ನು ರಾಷ್ಟ್ರಪತಿಗೆ ಕಳುಹಿಸಿಕೊಡದ ಅವರು, ಮಸೂದೆಯನ್ನು ವಾಪಸ್ ಕಳುಹಿಸಿದ್ದರು.

ಮಸೂದೆಯು ಗ್ರಾಮೀಣ ತಮಿಳುನಾಡಿನ ವಿದ್ಯಾರ್ಥಿಗಳಿಗೆ ವಿರುದ್ಧವಾಗಿದೆ ಎಂದು ರಾಜ್ಯಪಾಲರು ಹೇಳಿದ್ದರು. ಇದಕ್ಕೆ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹಾಗೂ ಅವರ ಸಂಪುಟ ಸಹೋದ್ಯೋಗಿಗಳಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು.

ವಿಶೇಷ ಅಧಿವೇಶನ ಕರೆದು ಮಸೂದೆಯನ್ನು ಮತ್ತೊಮ್ಮೆ ಮಂಡಿಸಿ ಅನುಮೋದನೆ ಪಡೆಯುವ ಪ್ರಸ್ತಾವಕ್ಕೆ ವಿಧಾನಸಭೆಯಲ್ಲಿ ಪ್ರಾತಿನಿಧ್ಯ ಹೊಂದಿರುವ ಪಕ್ಷಗಳ ಸಭೆಯು ಶನಿವಾರ ಸಮ್ಮತಿ ಸೂಚಿಸಿತ್ತು. ಪ್ರಮುಖ ಪ್ರತಿಪಕ್ಷ ಎಐಎಡಿಎಂಕೆಯು ಈ ಸಭೆಯಲ್ಲಿ ಭಾಗವಹಿಸದಿದ್ದರೂ ರಾಜ್ಯದಲ್ಲಿ ‘ನೀಟ್’ ರದ್ದುಗೊಳಿಸುವ ಸರ್ಕಾರದ ನಿರ್ಣಯಕ್ಕೆ ತನ್ನ ಬೆಂಬಲವನ್ನು ನೀಡಿತ್ತು. ಬಿಜೆಪಿಯು ಸಭೆಗೆ ಗೈರಾಗಿತ್ತು.

# ‘ಮಹಾಭಾರತ’ದ ಭೀಮ ಪ್ರವೀಣ್ ಕುಮಾರ್ ನಿಧನ

### ಒಲಿಂಪಿಯನ್ ಅಥ್ಲೀಟ್; ಏಷ್ಯನ್ ಗೇಮ್ಸ್ ಪದಕ ವಿಜೇತ

**ನವದೆಹಲಿ:** ಟಿವಿ ಸರಣಿ ಮಹಾಭಾರತದಲ್ಲಿ ಭೀಮನ ಪಾತ್ರದ ಮೂಲಕ ಮನೆಮಾತಾಗಿದ್ದ ನಟ ಮತ್ತು ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ಕ್ರೀಡಾಪಟು ಪ್ರವೀಣ್ ಕುಮಾರ್ ಸೋಬ್ತಿ ಸೋಮವಾರ ಸಂಜೆ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 74 ವರ್ಷ ವಯಸ್ಸಾಗಿತ್ತು.

ಇಲ್ಲಿನ ಅಶೋಕ ವಿಹಾರದ ನಿವಾಸದಲ್ಲಿ ನಟ ಕೊನೆಯುಸಿರೆಳೆದಿದ್ದಾರೆ.

‘ಅವರಿಗೆ ದೀರ್ಘಕಾಲದ ಎದೆಯ ಸೋಂಕಿನ ಸಮಸ್ಯೆ ಇತ್ತು. ರಾತ್ರಿ, ಅವರು ಅಸ್ವಸ್ಥರಾಗಿದ್ದರಿಂದ ನಾವು ವೈದ್ಯರನ್ನು ಮನೆಗೆ ಕರೆಸಿದ್ದೆವು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಹೃದಯ ಸ್ತಂಭನದಿಂದ ರಾತ್ರಿ 10 ರಿಂದ 10.30 ರ ನಡುವೆ ನಿಧನರಾದರು’ಎಂದು ಪ್ರವೀಣ್ ಅವರ ಸಂಬಂಧಿಯೊಬ್ಬರು ಪಿಟಿಐಗೆ ತಿಳಿಸಿದರು.

ಪ್ರವೀಣ್ ಅವರು ಹ್ಯಾಮರ್ ಮತ್ತು ಡಿಸ್ಕಸ್ ಥ್ರೋನಲ್ಲಿ ಹಲವು ಕ್ರೀಡಾಕೂಟಗಳಲ್ಲಿ ದೇಶವನ್ನು ಪ್ರತಿನಿಧಿಸಿದರು. 1966 ಮತ್ತು 1970 ರಲ್ಲಿ ಎರಡು ಚಿನ್ನದ ಪದಕಗಳನ್ನು ಒಳಗೊಂಡಂತೆ ಏಷ್ಯನ್ ಗೇಮ್ಸ್‌ನಲ್ಲಿ ನಾಲ್ಕು ಪದಕಗಳನ್ನು ಅವರು ಗೆದ್ದಿದ್ದಾರೆ.

ಅವರು 1966 ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಹ್ಯಾಮರ್ ಥ್ರೋನಲ್ಲಿ ಬೆಳ್ಳಿ ಪದಕವನ್ನು ಗೆದ್ದರು.

1988 ರಲ್ಲಿ ಬಿ.ಆರ್. ಚೋಪ್ರಾ ಅವರ ಮಹಾಭಾರತ ಟಿವಿ ಸರಣಿಯಲ್ಲಿ ಭೀಮನ ಪಾತ್ರದಲ್ಲಿ ಕಾಣಿಸಿಕೊಳ್ಳುವ ಮೂಲಕ ನಟನಾ ವೃತ್ತಿ ಆರಂಭಿಸಿದರು.. ಈ ಪಾತ್ರವು ಅವರಿಗೆ ಅಭೂತಪೂರ್ವ ಜನಪ್ರಿಯತೆಯನ್ನು ತಂದುಕೊಟ್ಟಿತು.

ಅವರಿಗೆ ಪತ್ನಿ, ಪುತ್ರಿ, ಇಬ್ಬರು ತಮ್ಮಂದಿರು ಹಾಗೂ ಸಹೋದರಿ ಇದ್ದಾರೆ.


ಪ್ರವೀಣ್ ಕುಮಾರ್

### ಜೆಎನ್‌ಯು ನೂತನ ಕುಲಪತಿ ನೇಮಕ ವಿಚಾರ

# ಸಾಧಾರಣ ಪ್ರತಿಭೆಯವರ ನೇಮಕದಿಂದ ಯುವಕರ ಭವಿಷ್ಯ ಹಾಳು: ವರುಣ್ ಗಾಂಧಿ

**ನವದೆಹಲಿ (ಪಿಟಿಐ):** ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ನೂತನ ಕುಲಪತಿಯಾಗಿ ಶಾಂತಿಶ್ರೀ ಧೂಲಿಪುಡಿ ಪಂಡಿತ್ ಅವರನ್ನು ನೇಮಕ ಮಾಡಿರುವುದನ್ನು ಬಿಜೆಪಿ ಸಂಸದ ವರುಣ್ ಗಾಂಧಿ ಟೀಕಿಸಿದ್ದಾರೆ.

‘ಸಾಧಾರಣ ಯೋಗ್ಯತೆ ಉಳ್ಳವರನ್ನು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನೇಮಕ ಮಾಡುವುದರಿಂದ ನಮ್ಮ ಮಾನವ ಸಂಪನ್ಮೂಲ ಹಾಗೂ ಯುವಕರ ಭವಿಷ್ಯ ಹಾಳಾಗುತ್ತದೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ.

ತಮ್ಮನ್ನು ಜೆಎನ್‌ಯು ಕುಲಪತಿಯನ್ನಾಗಿ ನೇಮಕ ಮಾಡಿದ ನಂತರ ಶಾಂತಿಶ್ರೀ ಅವರು ಬಿಡುಗಡೆ ಮಾಡಿರುವ ಪತ್ರಿಕಾ ಪ್ರಕಟಣೆಯನ್ನು ತಮ್ಮ ಟ್ವೀಟ್‌ನಲ್ಲಿ ಹಂಚಿಕೊಂಡಿರುವ ವರುಣ್ ಗಾಂಧಿ, ಆ ಪ್ರಕಟಣೆಯಲ್ಲಿನ ವ್ಯಾಕರಣಕ್ಕೆ ಸಂಬಂಧಿಸಿದ ದೋಷಗಳನ್ನು ಉಲ್ಲೇಖಿಸಿದ್ದಾರೆ.

ಜಾಗತಿಕ ಗುಣಮಟ್ಟ ಹೊಂದಿರುವ ದೇಶದ ಕೆಲವೇ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸೂಕ್ತರಾದವರನ್ನು ನೇಮಕ ಮಾಡಬೇಕು. ಅವರು ಈ ಸಂಸ್ಥೆಗಳನ್ನು ಸಮರ್ಥವಾಗಿ ಮುನ್ನಡೆಸುವವರಾಗಿರಬೇಕು. ದೂರದೃಷ್ಟಿ ಇಲ್ಲದವರು, ಕಡಿಮೆ ಸಂವಹನ ಸಾಮರ್ಥ್ಯ ಅಥವಾ ಅರ್ಹತೆವುಳ್ಳವರ ನೇಮಕ ಶೈಕ್ಷಣಿಕ ಕ್ಷೇತ್ರದ ಮೇಲೆ ದೂರಗಾಮಿ ಪರಿಣಾಮ ಬೀರುತ್ತದೆ ಎಂದೂ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಜೆಎನ್‌ಯು ಕುಲಪತಿಯಾಗಿ ನೇಮಕಗೊಂಡಿರುವ 59 ವರ್ಷದ ಶಾಂತಿಶ್ರೀ ಪಂಡಿತ್ ಅವರು, ಇದೇ ವಿ.ವಿ. ಮಾಜಿ ವಿದ್ಯಾರ್ಥಿಯೂ ಆಗಿದ್ದಾರೆ. ಅವರು ‘ಅಂತರರಾಷ್ಟ್ರೀಯ ಸಂಬಂಧಗಳು’ ವಿಷಯದ ಮೇಲೆ ಎಂ.ಫಿಲ್ ಹಾಗೂ ಪಿಎಚ್.ಡಿ ಪದವಿ ಪಡೆದಿದ್ದಾರೆ.


ವರುಣ್ ಗಾಂಧಿ

## ಸ್ಫೋಟ: 49 ಮಂದಿ ತಪ್ಪಿತಸ್ಥರು

**ಅಹಮದಾಬಾದ್:** ಸುಮಾರು 200 ಮಂದಿ ಗಾಯಗೊಂಡು 56 ಮಂದಿ ಮೃತಪಟ್ಟ 2008ರ ಅಹಮದಾಬಾದ್ ಸರಣಿ ಬಾಂಬ್ ಸ್ಫೋಟ ಪ್ರಕರಣದಲ್ಲಿ 28 ಮಂದಿಯನ್ನು ಖುಲಾಸೆಗೊಳಿಸಿದ ವಿಶೇಷ ನಿಯೋಜಿತ ನ್ಯಾಯಾಲಯ 49 ಮಂದಿಯನ್ನು ತಪ್ಪಿತಸ್ಥರೆಂದು ಮಂಗಳವಾರ ತೀರ್ಪು ನೀಡಿದೆ.

ಶಿಕ್ಷೆ ಪ್ರಕಟಿಸುವ ಮುನ್ನ ನ್ಯಾಯಾಲಯವು ತಪ್ಪಿತಸ್ಥರ ಮನವಿ ಆಲಿಸಲಿದೆ.

ವರ್ಚುವಲ್ ಮೂಲಕ ವಿಚಾರಣೆ ನಡೆಸಿದ ವಿಶೇಷ ನಿಯೋಜಿತ ನ್ಯಾಯಾಧೀಶ ಅಂಬಾಲಾಲ್ ಆರ್. ಪಟೇಲ್ ತೀರ್ಪು ನೀಡಿದ್ದಾರೆ. 302 (ಕೊಲೆ), 307 (ಕೊಲೆಗೆ ಯತ್ನ), ದೇಶದ್ರೋಹ, (124-A), ಧಾರ್ಮಿಕ ಆಧಾರದ ಮೇಲೆ ವಿವಿಧ ಗುಂಪುಗಳ ನಡುವೆ ದ್ವೇಷವನ್ನು ಉತ್ತೇಜಿಸುವುದು (153-A) ಮತ್ತು ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯಿದೆಯ ವಿವಿಧ ಸೆಕ್ಷನ್‌ಗಳಡಿಯಲ್ಲಿ 49 ಮಂದಿಯನ್ನು ತಪ್ಪಿತಸ್ಥರೆಂದು ಉಲ್ಲೇಖಿಸಿದ್ದಾರೆ. ಸಾಕ್ಷ್ಯಾಧಾರಗಳ ಕೊರತೆಯಿಂದ ಉಳಿದ 28 ಮಂದಿಯನ್ನುಖುಲಾಸೆಗೊಳಿಸಲಾಗಿದೆ.

2008ರ ಜುಲೈ 26 ರಂದು ಅಹಮದಾಬಾದ್‌ನಲ್ಲಿ ಏಕಕಾಲದಲ್ಲಿ ನಡೆದ ಬಾಂಬ್ ಸ್ಫೋಟಗಳಲ್ಲಿ 56 ಜನರು ಸಾವನ್ನಪ್ಪಿದರು. 200 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ಘಟನೆ ಸಂಬಂಧ ಪೊಲೀಸರು ಅಹಮದಾಬಾದ್‌ನಲ್ಲಿ 20 ಎಫ್‌ಐಆರ್ ದಾಖಲಿಸಿದ್ದರು. ಸೂರತ್‌ನ ವಿವಿಧ ಸ್ಥಳಗಳಲ್ಲಿ ಬಾಂಬ್ ಪತ್ತೆಯಾಗಿದ್ದವು. ಈ ಸಂಬಂಧ 15 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಎರಡು ಪ್ರಕರಣಗಳನ್ನು ತನಿಖೆ ನಡೆಸಿದ್ದ ಪೊಲೀಸರು ಇದು ಇಂಡಿಯನ್ ಮುಜಾಹಿದ್ದೀನ್ ಭಯೋತ್ಪಾದಕ ಸಂಘಟನೆ ಕೃತ್ಯ ಎಂದು ಆರೋಪಿಸಿದ್ದರು

## ನೌಕರ ತಪ್ಪಿತಸ್ಥ ಎಂದು ಘೋಷಿಸುವ ಅಧಿಕಾರ ಸರ್ಕಾರದ್ದು

**ತಿರುವನಂತಪುರ (ಪಿಟಿಐ):** ಕೇರಳ ಸರ್ಕಾರ ಹೊರಡಿಸಿರುವ ‘ಕೇರಳ ಲೋಕಾಯುಕ್ತ ತಿದ್ದುಪಡಿ ಸುಗ್ರೀವಾಜ್ಞೆ–2022’ರ ಪ್ರಕಾರ, ಸರ್ಕಾರಿ ನೌಕರರನ್ನು ತಪ್ಪಿತಸ್ಥ ಎಂಬುದಾಗಿ ಭ್ರಷ್ಟಾಚಾರ ನಿಗ್ರಹ ಸಂಸ್ಥೆ ಘೋಷಿಸಿದರೂ, ರಾಜ್ಯ ಸರ್ಕಾರ ಅದನ್ನು ಒಪ್ಪಬಹುದು ಅಥವಾ ತಿರಸ್ಕರಿಸಬಹುದಾಗಿದೆ.

ರಾಜ್ಯಪಾಲ ಆರೀಫ್ ಮೊಹಮ್ಮದ್ ಖಾನ್ ಅವರು ಈ ಸುಗ್ರೀವಾಜ್ಞೆಗೆ ಅಂಕಿತ ಹಾಕಿದ್ದಾರೆ. ಈ ಬಗ್ಗೆ ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನೂ ಪ್ರಕಟಿಸಲಾಗಿದೆ. ನೌಕರನೊಬ್ಬನನ್ನು ತಪ್ಪಿತಸ್ಥ ಎಂಬುದಾಗಿ ಘೋಷಣೆ ಮಾಡಿದ ನಂತರ, ಅಹವಾಲು ಸಲ್ಲಿಸಲು ಆತನಿಗೆ ಅವಕಾಶ ನೀಡಬೇಕು.

## ಪೆಗಾಸಸ್: ತಾಂತ್ರಿಕ ಸಮಿತಿಗೆ ಮೊಬೈಲ್ ಒಪ್ಪಿಸಲು ಅನುಮತಿ

**ಮುಂಬೈ (ಪಿಟಿಐ):** ಎಲ್ಗಾರ್ ಪರಿಷದ್–ಮಾವೊವಾದಿಗಳ ಸಂಪರ್ಕ ಪ್ರಕರಣದ ಏಳು ಜನ ಆರೋಪಿಗಳ ಮೊಬೈಲ್ ಫೋನ್‌ಗಳನ್ನು ಪೆಗಾಸಸ್ ಕುತಂತ್ರಾಂಶ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೇಮಕ ಮಾಡಿರುವ ತಾಂತ್ರಿಕ ಸಮಿತಿಗೆ ಒಪ್ಪಿಸಲು ರಾಷ್ಟ್ರೀಯ ತನಿಖಾ ಸಂಸ್ಥೆಗೆ ( ಎನ್‌ಐಎ) ವಿಶೇಷ ಎನ್‌ಐಎ ಕೋರ್ಟ್ ಮಂಗಳವಾರ ಅನುಮತಿಯನ್ನು ನೀಡಿತು.

‘ಈ ಮೊಬೈಲ್‌ಗಳನ್ನು ತನಗೆ ಒಪ್ಪಿಸುವಂತೆ ಸುಪ್ರೀಂಕೋರ್ಟ್ ನೇಮಿಸಿರುವ ತಾಂತ್ರಿಕ ಸಮಿತಿಯು ಎನ್‌ಐಎಗೆ ಸೂಚಿಸಿತ್ತು. ಈ ಮೊಬೈಲ್ ಫೋನ್‌ಗಳು ವಿಶೇಷ ಎನ್‌ಐಎ ಕೋರ್ಟ್ ವಶದಲ್ಲಿದ್ದ ಕಾರಣ, ಎನ್‌ಐಎ ಅಧಿಕಾರಿಗಳು ಅನುಮತಿ ಕೋರಿ ಕೋರ್ಟ್‌ಗೆ ಮನವಿ ಸಲ್ಲಿಸಿದ್ದರು’ ಎಂದು ಎಲ್ಗಾರ್ ಪರಿಷದ್ ಪ್ರಕರಣದ ಆರೋಪಿಯೊಬ್ಬರ ಪರ ವಕೀಲರು ತಿಳಿಸಿದ್ದಾರೆ.

ಎನ್‌ಐಎ ಸಲ್ಲಿಸಿದ್ದ ಮನವಿಯನ್ನು ಪುರಸ್ಕರಿಸಿದ ಎನ್‌ಐಎ ಕೋರ್ಟ್ ನ್ಯಾಯಾಧೀಶರಾದ ಡಿ.ಇ.ಕೋಥಳೀಕರ್ ಅವರು, ಮೊಬೈಲ್‌ಗಳನ್ನು ಸಮಿತಿಗೆ ಒಪ್ಪಿಸಲು ಅನುಮತಿ ನೀಡಿದರು.

ತಮ್ಮ ಮೊಬೈಲ್ ಫೋನ್‌ಗಳೂ ಪೆಗಾಸಸ್ ಗೂಢಚಾರಿಕೆ ತಂತ್ರಾಂಶದಿಂದ ಬಾಧಿತವಾಗಿವೆ ಎಂದು ಆರೋಪಿಸಿರುವ ಈ ಏಳು ಜನ ಆರೋಪಿಗಳು, ಸುಪ್ರೀಂಕೋರ್ಟ್ ನೇಮಕ ಮಾಡಿರುವ ಸಮಿತಿಗೆ ಇತ್ತೀಚೆಗೆ ಮನವಿ ಸಲ್ಲಿಸಿದ್ದರು.

## ಹಿಮಪಾತ: ಸೈನಿಕರ ಮೃತದೇಹ ಪತ್ತೆ

**ನವದೆಹಲಿ (ಪಿಟಿಐ):** ಅರುಣಾಚಲ ಪ್ರದೇಶದ ಕಮೆಂಗ್ ಜಿಲ್ಲೆಯಲ್ಲಿ ಭಾನುವಾರ ಸಂಭವಿಸಿದ್ದ ಹಿಮಪಾತದಲ್ಲಿ ಸಿಲುಕಿದ್ದ ಭಾರತೀಯ ಸೇನೆಯ ಏಳು ಸೈನಿಕರ ಮೃತ ದೇಹಗಳು ಪತ್ತೆಯಾಗಿವೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸೈನಿಕರ ಪಾರ್ಥಿವ ಶರೀರವನ್ನು ಸಮೀಪದ ಸೇನಾ ವೈದ್ಯಕೀಯ ಶಿಬಿರಕ್ಕೆ ತರಲಾಗಿದೆ ಎಂದು ಅವರು ಹೇಳಿದ್ದಾರೆ. ಸೇನೆಯು ಭಾನುವಾರದಿಂದಲೇ ರಕ್ಷಣಾ ಕಾರ್ಯ ಕೈಗೊಂಡಿತ್ತು.

## ಐಸಿಸ್ ಉಗ್ರನ ಮಾಹಿತಿಗೆ ಕೋಟಿ ಡಾಲರ್ ಬಹುಮಾನ

**ವಾಷಿಂಗ್ಟನ್ (ಪಿಟಿಐ):** ಸುಮಾರು 185 ಜನರ ಸಾವಿಗೆ ಕಾರಣವಾದ ಅಫ್ಗಾನಿಸ್ತಾನದ ಕಾಬೂಲ್ ವಿಮಾನ ನಿಲ್ದಾಣದ ಮೇಲಿನ ದಾಳಿಯ ರೂವಾರಿ ಐಸಿಸ್ ಖೊರಾಸನ್ ನಾಯಕ ಸನಾವುಲ್ಲಾ ಘಫಾರಿ ಕುರಿತು ಮಾಹಿತಿ ನೀಡಿದವರಿಗೆ 1 ಕೋಟಿ ಡಾಲರ್ ಬಹುಮಾನ ನೀಡುವುದಾಗಿ ಅಮೆರಿಕ ಘೋಷಿಸಿದೆ.

ಆಫ್ಗನ್ ಸರ್ಕಾರವನ್ನು ಅಸ್ಥಿರಗೊಳಿಸಿದ ತಾಲಿಬಾನ್ ಕಳೆದ ವರ್ಷ ಆಗಸ್ಟ್ 14 ರಂದು ದೇಶವನ್ನು ವಶಪಡಿಸಿಕೊಂಡಿತ್ತು. ಆ ಬಳಿಕ ಲಕ್ಷಾಂತರ ಆಫ್ಗನ್ನರು ಮತ್ತು ವಿದೇಶಿಯರು ದೇಶ ತೊರೆಯಲು ಕಾಬೂಲ್ ಅಂತಾರಾಷ್ಟ್ರೀಯ ವಿಮಾನದಲ್ಲಿ ಜಮಾಯಿಸಿದ್ದರು. ಆಗಸ್ಟ್ 26ರಂದು ಅಲ್ಲಿ ನಡೆದ ಆತ್ಮಾಹುತಿ ಬಾಂಬ್ ದಾಳಿಯಿಂದ ಅಮೆರಿಕದ 13 ಸೈನಿಕರು ಸೇರಿ 185 ಮಂದಿ ಮೃತಪಟ್ಟಿದ್ದರು. ಅಮೆರಿಕದ 18 ಸೈನಿಕರ ಸಹಿತ 150 ಜನರು ಗಾಯಗೊಂಡಿದ್ದರು.

### ಏಕದಿನ ಕ್ರಿಕೆಟ್ ಸರಣಿ: ಅಹಮದಾಬಾದ್‌ನಲ್ಲಿ ಭಾರತ–ವೆಸ್ಟ್ ಇಂಡೀಸ್ ಎರಡನೇ ಹಣಾಹಣಿ ಇಂದು

# ಸರಣಿ ಕೈವಶದತ್ತ ರೋಹಿತ್ ಬಳಗದ ಚಿತ್ತ

**ಅಹಮದಾಬಾದ್ (ಪಿಟಿಐ):** ವೆಸ್ಟ್ ಇಂಡೀಸ್ ಎದುರಿನ ಏಕದಿನ ಕ್ರಿಕೆಟ್ ಸರಣಿ ಕೈವಶದ ಮೇಲೆ ಕಣ್ಣಿಟ್ಟಿರುವ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಬುಧವಾರ ಕೆ.ಎಲ್.ರಾಹುಲ್ ಜೊತೆಗೆ ಇನಿಂಗ್ಸ್ ಆರಂಭಿಸುವರೇ?

ದಕ್ಷಿಣ ಆಫ್ರಿಕಾ ಪ್ರವಾಸದಿಂದ ಮರಳಿದ ನಂತರ ವಿಶ್ರಾಂತಿ ಪಡೆದಿದ್ದ ರಾಹುಲ್ ಮೊದಲ ಪಂದ್ಯದಲ್ಲಿ ಆಡಿರಲಿಲ್ಲ. ಆ ಪಂದ್ಯದಲ್ಲಿ ರೋಹಿತ್ ಅವರು ಇಶಾನ್ ಕಿಶನ್ ಜೊತೆಗೂಡಿ ಇನಿಂಗ್ಸ್ ಆರಂಭಿಸಿದ್ದರು.

ಸಾಧಾರಣ ಮೊತ್ತ ಗುರಿಯನ್ನು ಬೆನ್ನತ್ತಲು ಉತ್ತಮ ಆರಂಭ ನೀಡಿದ್ದರು. ಆದ್ದರಿಂದ ಇಶಾನ್ ಸ್ಥಾನ ಉಳಿಸಿಕೊಳ್ಳಬಹುದು. ಆದರೆ ಅವರ ಬ್ಯಾಟಿಂಗ್ ಕ್ರಮಾಂಕ ಬದಲಾಗಬಹುದು.

ಮೊದಲ ಪಂದ್ಯದಲ್ಲಿ ಆಡಿದ್ದ ಸೂರ್ಯಕುಮಾರ್ ಯಾದವ್ ಅಥವಾ ದೀಪಕ್ ಹೂಡಾ ಅವರಲ್ಲಿ ಒಬ್ಬರಿಗೆ ವಿಶ್ರಾಂತಿ ನೀಡಬಹುದು.

ಕಳೆದ ಎರಡು ವರ್ಷದಿಂದ ಶತಕ ದಾಖಲಿಸುವಲ್ಲಿ ವಿಫಲರಾಗಿರುವ ವಿರಾಟ್ ಕೊಹ್ಲಿ ಈ ಪಂದ್ಯದಲ್ಲಾದರೂ ಮೂರಂಕಿ ಮೊತ್ತ ದಾಖಲಿಸುವರೇ ಎಂಬ ಕುತೂಹಲ ಅಭಿಮಾನಿಗಳಲ್ಲಿದೆ. ಕಳೆದ ಪಂದ್ಯದಲ್ಲಿ ಅವರು ಎಂಟು ರನ್ ಗಳಿಸಿದ್ದರು.

ಆದರೆ ಬೌಲಿಂಗ್ ವಿಭಾಗದಲ್ಲಿ ಯಾವುದೇ ಬದಲಾವಣೆ ಆಗುವ ಸಾಧ್ಯತೆ ಇಲ್ಲ. ಸ್ಪಿನ್ ಜೋಡಿ ಯಜುವೇಂದ್ರ ಚಾಹಲ್ ಮತ್ತು ವಾಷಿಂಗ್ಟನ್ ಸುಂದರ್ ಮೊದಲ ಪಂದ್ಯದಲ್ಲಿ ಎದುರಾಳಿ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದ್ದರು.

ಕನ್ನಡಿಗ ಪ್ರಸಿದ್ಧ ಕೃಷ್ಣ ಕೂಡ ಮಹತ್ವದ ಸಮಯದಲ್ಲಿ ಜೊತೆಯಾಟ ಮುರಿದು ವಿಂಡೀಸ್ ಬಳಗಕ್ಕೆ ಆಘಾತ ನೀಡುವಲ್ಲಿ ಸಫಲರಾಗಿದ್ದರು. ತನ್ನ ತವರಿನಲ್ಲಿ ಇಂಗ್ಲೆಂಡ್ ಎದುರು ಮಿಂಚಿ ಬಂದಿದ್ದ ವಿಂಡೀಸ್ ಇಲ್ಲಿ ಮಂಕಾಯಿತು. ಸ್ಪಿನ್ ದಾಳಿಯನ್ನು ಎದುರಿಸುವಲ್ಲಿ ವೈಫಲ್ಯ ಅನುಭ ವಿಸಿತು.

ಆಲ್‌ರೌಂಡರ್ ಜೇಸನ್ ಹೋಲ್ಡರ್ ಮಾತ್ರ ಅರ್ಧಶತಕ ಗಳಿಸುವಲ್ಲಿ ಸಫಲರಾದರು. ಬೌಲಿಂಗ್ ವಿಭಾಗದಲ್ಲಿ ಅಲ್ಜರಿ ಜೋಸೆಫ್ ಅವರನ್ನು ಬಿಟ್ಟರೆ ಉಳಿದವರು ಯಾರೂ ಪರಿಣಾಮಕಾರಿಯಾಗಲಿಲ್ಲ. ಮೂರು ಪಂದ್ಯಗಳ ಸರಣಿಯಲ್ಲಿ ಜಯ ಖಚಿತಪಡಿಸಿಕೊಳ್ಳಲು ಈ ಪಂದ್ಯ ದಲ್ಲಿ ಜಯಸಾಧಿಸುವತ್ತ ಆತಿಥೇಯರು ಚಿತ್ತ ನೆಟ್ಟಿದ್ದಾರೆ. ಆದರೆ ಎರಡನೇ ಪಂದ್ಯದಲ್ಲಿ ಗೆದ್ದು ತನ್ನ ಅವಕಾಶವನ್ನು ಉಳಿಸಿಕೊಳ್ಳಲು ವಿಂಡೀಸ್ ಕಠಿಣ ಪೈಪೋಟಿಯೊಡ್ಡುವ ಛಲದಲ್ಲಿದೆ.


ಅಭ್ಯಾಸದ ನಡುವೆ ರೋಹಿತ್ ಶರ್ಮಾ ಬಳಗ –ಎಎಫ್‌ಪಿ ಚಿತ್ರಗಳು


ವೆಸ್ಟ್ ಇಂಡೀಸ್‌ನ ಡರೆನ್ ಬ್ರಾವೊ (ಎಡ) ಮತ್ತು ಕೀರನ್ ಪೊಲಾರ್ಡ್

**ತಂಡಗಳು: ಭಾರತ:** ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್ (ಉಪನಾಯಕ), ಮಯಂಕ್ ಅಗರವಾಲ್, ಋತುರಾಜ್ ಗಾಯಕವಾಡ, ಶಿಖರ್ ಧವನ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ಇಶಾನ್ ಕಿಶನ್, ರಿಷಭ್ ಪಂತ್ (ವಿಕೆಟ್‌ಕೀಪರ್), ದೀಪಕ್ ಚಾಹರ್, ಶಾರ್ದೂಲ್ ಠಾಕೂರ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯಿ, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ಆವೇಶ್ ಖಾನ್, ಶಾರೂಕ್ ಖಾನ್.

ವೆಸ್ಟ್ ಇಂಡೀಸ್: ಕೀರನ್ ಪೊಲಾರ್ಡ್ (ನಾಯಕ), ಫ್ಯಾಬಿಯನ್ ಅಲೆನ್, ಎನ್‌ಕ್ರುಮಾ ಬಾನೆರ್, ಡೆರೆನ್ ಬ್ರಾವೊ, ಶಾಮ್ರಾ ಬ್ರೂಕ್ಸ್, ಜೇಸನ್ ಹೋಲ್ಡರ್, ಶಾಯ್ ಹೋಪ್, ಅಕೀಲ್ ಹುಸೇನ್, ಅಲ್ಜರಿ ಜೋಸೆಫ್, ಬ್ರೆಂಡನ್ ಕಿಂಗ್, ನಿಕೋಲಸ್ ಪೂರನ್, ಕೆಮರ್ ರೋಚ್, ರೊಮೆರಿಯೊ ಶೆಫರ್ಡ್, ಒಡಿಯನ್ ಸ್ಮಿತ್, ಹೇಡನ್ ವಾಲ್ಶ್ ಜೂನಿಯರ್.

**ಪಂದ್ಯ ಆರಂಭ: ಮಧ್ಯಾಹ್ನ 1.30; ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್**

## ಬಹುಮುಖ ಪ್ರತಿಭೆಗೆ ಚಿನ್ನ

### ಚಳಿಗಾಲದ ಒಲಿಂಪಿಕ್ಸ್ ಸ್ನೋಬೋರ್ಡ್

**ಜಾಂಗ್‌ಜಿಯಾಕೊ:** ಎರಡು ಬಾರಿ ಚಿನ್ನದ ಪದಕ ಗಳಿಸಿರುವ ಎಸ್ಟರ್ ಲಟೆಸ್ಕ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಮಂಗಳವಾರ ಮೂರನೇ ಚಿನ್ನ ಗೆದ್ದು ಸಂಭ್ರಮಿಸಿದರು. ಸ್ನೋಬೋರ್ಡ್‌ನ ಪ್ಯಾರಲಲ್ ಜೈಂಟ್ ಸ್ಲಲೋಮ್ ವಿಭಾಗದಲ್ಲಿ ಅಮೋಘ ಸಾಧನೆ ಮಾಡಿದ ಅವರು ಚಳಿಗಾಲದ ಒಲಿಂಪಿಕ್ಸ್‌ನ ವಿಭಿನ್ನ ಕ್ರೀಡೆಗಳಲ್ಲಿ ಚಿನ್ನ ಗೆದ್ದ ಮೊದಲ ಮಹಿಳೆ ಎನಿಸಿಕೊಂಡರು.

ಜೆಕ್ ಗಣರಾಜ್ಯದವರಾದ 26 ವರ್ಷದ ಎಸ್ಟರ್ ನಾಲ್ಕು ವರ್ಷಗಳ ಹಿಂದೆ ಪಿಯಾಂಗ್‌ಚಾಂಗ್‌ನಲ್ಲಿ ಸ್ನೋಬೋರ್ಡ್ ಸ್ಪರ್ಧೆಯಲ್ಲಿ ಚಿನ್ನ ಗಳಿಸಿದ್ದರು. ಆ ವರ್ಷ ಸ್ಕೀಯಿಂಗ್‌ನಲ್ಲೂ ಚಿನ್ನದ ಪದಕ ಅವರ ಕೊರಳನ್ನೇರಿತ್ತು. ಈ ಬಾರಿ ಚಾಂಪಿಯನ್ ಪಟ್ಟವನ್ನು ಉಳಿಸಿಕೊಂಡರು.

ಮಂಗಳವಾರ ನಡೆದ ಸ್ಪರ್ಧೆಯಲ್ಲಿ ಆಸ್ಟ್ರಿಯಾದ ಡ್ಯಾನಿಯೆಲಾ ಉಲ್‌ಬಿಂಗ್ ಬೆಳ್ಳಿ ಗಳಿಸಿದರು. ಸ್ಲೊವೇನಿಯಾದ ಗ್ಲೋರಿಯಾ ಕೊಟ್ನಿಕ್ ಕಂಚು ಗೆದ್ದರು.


ಎಸ್ಟರ್ ಲಟೆಸ್ಕ ಸಂಭ್ರಮ–ಎಎಫ್‌ಪಿ ಚಿತ್ರ

**ಬೆಂಜಮಿನ್‌ಗೆ ಚಿನ್ನದ ಪದಕ:** ಪುರುಷರ ವಿಭಾಗದಲ್ಲಿ ಆಸ್ಟ್ರಿಯಾದ ಬೆಂಜಮಿನ್ ಕರ್ಲ್ ಚಿನ್ನದ ಪದಕ ಗೆದ್ದುಕೊಂಡರು. ಫೈನಲ್‌ನಲ್ಲಿ ಅವರು ಸ್ಲೊವೇನಿಯಾದ ಟಿಮ್ ಮಸ್ಟನಕ್ ಎದುರು ಜಯ ಸಾಧಿಸಿದರು.

ಮಹಿಳೆಯರ ಕ್ರಾಸ್ ಕಂಟ್ರಿ ಫ್ರೀಸ್ಟೈಲ್ ಸ್ಪ್ರಿಂಟ್‌ನಲ್ಲಿ ಸ್ವೀಡನ್‌ನ ಜೊನಾ ಸುಂಡ್ಲಿಂಗ್ ಚಿನ್ನ ಗಳಿಸಿದರು.

## ಟೆಸ್ಟ್: ಕೇನ್ ಅಲಭ್ಯ

**ವೆಲಿಂಗ್ಟನ್ (ಎಎಫ್‌ಪಿ):** ದಕ್ಷಿಣ ಆಫ್ರಿಕಾ ಎದುರು ನಡೆಯಲಿರುವ ಟೆಸ್ಟ್ ಸರಣಿಗೆ ನ್ಯೂಜಿಲೆಂಡ್ ತಂಡಕ್ಕೆ ಕೇನ್ ವಿಲಿಯಮ್ಸನ್ ಅಲಭ್ಯರಾಗಲಿದ್ದಾರೆ. ಕೇನ್ ಮೊಣಕೈ ಗಾಯದಿಂದ ಬಳಲುತ್ತಿದ್ದು ವಿಶ್ರಾಂತಿ ಪಡೆಯುತ್ತಿದ್ದಾರೆ ಎಂದು ಕೋಚ್ ಗ್ಯಾರಿ ಸ್ಟಡ್ ತಿಳಿಸಿದ್ದಾರೆ.

15 ಮಂದಿಯ ತಂಡವನ್ನು ಮಂಗಳವಾರ ಪ್ರಕಟಿಸಲಾಗಿದ್ದು ಬ್ಯಾಟರ್ ಟಾಮ್ ಲಥಾಮ್ ಅವರು ಪ್ರಭಾರ ನಾಯಕರಾಗಿರುವರು.



## ಹಾಕಿ ಲೀಗ್: ಭಾರತ ಶುಭಾರಂಭ

**ಪೊಚೆಫ್‌ಸ್ಟ್ರೂಮ್, ದಕ್ಷಿಣ ಆಫ್ರಿಕಾ (ಪಿಟಿಐ):** ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿರುವ ಭಾರತ, ಎಫ್‌ಐಎಚ್ ಪ್ರೊ ಲೀಗ್ ಹಾಕಿಯಲ್ಲಿ ಶುಭಾರಂಭ ಮಾಡಿದೆ. ಮಂಗಳವಾರ ನಡೆದ ಪಂದ್ಯದಲ್ಲಿ ತಂಡ 5–0ಯಿಂದ ಫ್ರಾನ್ಸ್ ವಿರುದ್ಧ ಜಯ ಗಳಿಸಿತು.

ಎರಡನೇ ಕ್ವಾರ್ಟರ್‌ನಲ್ಲಿ ಭಾರತ ಮೂರು ಗೋಲು ಗಳಿಸಿತು. ಮೂರನೇ ಕ್ವಾರ್ಟರ್‌ನಲ್ಲಿ ಎರಡು ಬಾರಿ ಚೆಂಡನ್ನು ಗುರಿ ಸೇರಿಸಿತು. ತಂಡಕ್ಕೆ ನಾಲ್ಕು ಪೆನಾಲ್ಟಿ ಕಾರ್ನರ್ ಅವಕಾಶಗಳು ಲಭಿಸಿದ್ದವು. ಈ ಪೈಕಿ ಎರಡರಲ್ಲಿ ಗೋಲು ಗಳಿಸಿತು. ಫ್ರಾನ್ಸ್ ಲಭಿಸಿದ ಮೂರು ಅವಕಾಶಗಳಲ್ಲೂ ವೈಫಲ್ಯ ಕಂಡಿತು.

21 ಮತ್ತು 24ನೇ ನಿಮಿಷಗಳಲ್ಲಿ ಕ್ರಮವಾಗಿ ಹರ್ಮನ್‌ಪ್ರೀತ್ ಸಿಂಗ್ ಮತ್ತು ವರುಣ್ ಕುಮಾರ್ ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ಗೋಲು ಗಳಿಸಿದರು. 28ನೇ ನಿಮಿಷದಲ್ಲಿ ಶಮ್ಶೇರ್ ಸಿಂಗ್ ಗೋಲು ಹೊಡೆದರು. 32ನೇ ನಿಮಿಷದಲ್ಲಿ ಮನದೀಪ್ ಸಿಂಗ್ ಮತ್ತು 41ನೇ ನಿಮಿಷದಲ್ಲಿ ಆಕಾಶ್ ದೀಪ್ ಸಿಂಗ್ ಚೆಂಡನ್ನು ಗುರಿ ಮುಟ್ಟಿಸಿದರು.

## ಐಎಸ್‌ಎಲ್: ಎಟಿಕೆಎಂಬಿಗೆ ಜಯ

**ಬಾಂಬೊಲಿಮ್ (ಪಿಟಿಐ):** ಹೈದರಾಬಾದ್ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಮಂಗಳವಾರ ಎಟಿಕೆ ಮೋಹನ್ ಬಾಗನ್ ತಂಡಕ್ಕೆ ಮಣಿಯಿತು.

ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಟಿಕೆ ಎಂಬಿ 2–1ರಲ್ಲಿ ಜಯ ಗಳಿಸಿತು. ಲಿಸ್ಟನ್ ಕೊಲ್ಯಾಕೊ (56ನೇ ನಿಮಿಷ) ಮತ್ತು ಮನ್ವೀರ್ (59ನೇ ನಿ) ಎಟಿಕೆಎಂಬಿಗಾಗಿ ಗೋಲು ಗಳಿಸಿದರು. ಹೈದರಾಬಾದ್ ಪರ ಚಿಯಾನಿಸ್ (67ನೇ ನಿ) ಗೋಲು ಗಳಿಸಿದರು.

**ಚೆನ್ನೈಯಿನ್–ಗೋವಾ ಮುಖಾಮುಖಿ:** ವಾಸ್ಕೊದಲ್ಲಿ ಬುಧವಾರ ನಡೆಯಲಿರುವ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ ಮತ್ತು ಎಫ್‌ಸಿ ಗೋವಾ ಮುಖಾಮುಖಿಯಾಗಲಿವೆ.

## ಬಿಬಿಸಿ ಕ್ರೀಡಾಪಟು: ಸಿಂಧು, ಮೀರಾಬಾಯಿ ನಾಮನಿರ್ದೇಶನ

**ನವದೆಹಲಿ (ಪಿಟಿಐ):** ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಮತ್ತು ವೇಟ್ ಲಿಫ್ಟಿಂಗ್ ಕ್ರೀಡಾಪಟು ಮೀರಾಬಾಯಿ ಚಾನು ಅವರನ್ನು ಬಿಸಿಸಿ ಭಾರತೀಯ ಮಹಿಳಾ ಕ್ರೀಡಾಪಟು ಪ್ರಶಸ್ತಿಗಾಗಿ ನಾಮನಿರ್ದೇಶನ ಮಾಡಲಾಗಿದೆ.

ಮಂಗಳವಾರ ಬಿಬಿಸಿ ಪ್ರಕಟಿಸಿರುವ ಪಟ್ಟಿಯಲ್ಲಿ ಭಾರತದ ಐವರು ಮಹಿಳಾ ಕ್ರೀಡಾಪಟುಗಳಿದ್ದಾರೆ. ಬೆಂಗಳೂರಿನ ಗಾಲ್ಫ್ ಪಟು ಅದಿತಿ ಅಶೋಕ್, ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡು ಪದಕ ಜಯಿಸಿದ ಶೂಟರ್ ಅವನಿ ಲೇಖರಾ, ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪದಕವಿಜೇತ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

ಫೆಬ್ರುವರಿ 28ರವರೆಗೂ ಆನ್‌ಲೈನ್ ಮತದಾನ ನಡೆಯಲಿದೆ. ಅದರಲ್ಲಿ ಹೆಚ್ಚು ಮತಗಳನ್ನು ಪಡೆದವರು ಪ್ರಶಸ್ತಿಗೆ ಅರ್ಹರಾಗುವರು. ಮಾರ್ಚ್ 28ರಂದು ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

## ಆಟೊ ಚಾಲನೆ ಮಾಡೆಂದಿದ್ದ ಜನ: ಸಿರಾಜ್

**ನವದೆಹಲಿ (ಪಿಟಿಐ):** ‘ಮೂರು ವರ್ಷಗಳ ಹಿಂದೆ ಐಪಿಎಲ್‌ನಲ್ಲಿ ವೈಫಲ್ಯ ಅನುಭವಿಸಿದಾಗ, ಕ್ರಿಕೆಟ್ ಬಿಡು ನಿನ್ನ ಅಪ್ಪನೊಂದಿಗೆ ಆಟೋರಿಕ್ಷಾ ಓಡಿಸಲು ಹೋಗೆಂದು ಜನರು ವ್ಯಂಗ್ಯವಾಡಿದ್ದರು. ಬಹಳ ನೊಂದಿದ್ದೆ. ಆದರೆ, ಮಹೇಂದ್ರಸಿಂಗ್ ಧೋನಿ ಹೇಳಿದ ಮಾತುಗಳು ಹೊಸ ಹುಮ್ಮಸ್ಸು ತುಂಬಿದವು. ಯಶಸ್ಸು ಒಲಿಯಿತು’–

ಭಾರತ ಕ್ರಿಕೆಟ್ ತಂಡದ ಮಧ್ಯಮವೇಗದ ಬೌಲರ್ ಮೊಹಮ್ಮದ್ ಸಿರಾಜ್ ಮಾತುಗಳು ಇವು. ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ಪಾಡ್‌ಕಾಸ್ಟ್‌ನಲ್ಲಿ ಮಾತನಾಡಿರುವ ಅವರು ಹಿಂದಿನ ಘಟನೆಯನ್ನು ನೆನಪಿಸಿಕೊಂಡಿದ್ದಾರೆ.

2019ರ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಸಿರಾಜ್ ಆಡಿದ್ದರು. ಅದರಲ್ಲಿ ಅವರು ಒಂಬತ್ತು ಪಂದ್ಯಗಳಲ್ಲಿ ಏಳು ವಿಕೆಟ್ ಮಾತ್ರ ಗಳಿಸಿದ್ದರು. ದುಬಾರಿಯೂ ಆಗಿದ್ದರು. ಆ ಋತುವಿನಲ್ಲಿ ಬೆಂಗಳೂರು ತಂಡವು ಆರು ತಂಡಗಳಲ್ಲಿ ಸೋಲಿನ ಕಹಿ ಅನುಭವಿಸಿತ್ತು. ಅದರಲ್ಲೂ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಎದುರು ಸಿರಾಜ್ ಬೌಲಿಂಗ್‌ನಲ್ಲಿ ಬ್ಯಾಟರ್‌ಗಳು ಐದು ಸಿಕ್ಸರ್ ಸಿಡಿಸಿದ್ದರು. ಕೇವಲ 2.2 ಓವರ್‌ಗಳಲ್ಲಿ 36 ರನ್‌ಗಳನ್ನು ಸಿರಾಜ್ ಕೊಟ್ಟಿದ್ದರು. ಎರಡು ಬೀಮರ್ ಕೂಡ ಎಸೆದಿದ್ದರು. ಅದರಿಂದಾಗಿ ನಾಯಕ ವಿರಾಟ್ ಕೊಹ್ಲಿಗೆ ಸಿರಾಜ್ ಬೌಲಿಂಗ್ ನಿಲ್ಲಿಸುವುದು ಅನಿವಾರ್ಯವಾಯಿತು.

‘ಆ ದಿನ ನಾನು ಎರಡು ಬೀಮರ್ ಹಾಕಿದಾಗ, ಜನರು ವ್ಯಂಗ್ಯವಾಡಿದ್ದರು. ಆಟೊ ಓಡಿಸಲು ಹೋಗಿಬಿಡು ಅಂದಿದ್ದರು. ಇನ್ನೂ ಬಹಳಷ್ಟು ನಿಂದಿಸಿದ್ದರು. ಆದರೆ ಈ ಹಂತದವರೆಗೂ ಬೆಳೆಯಲು ನಾನು ಪಟ್ಟ ಶ್ರಮವನ್ನು ಕಡೆಗಣಿಸಿದರೆಂಬ ಬೇಸರವಾಗಿತ್ತು. ಆದರೆ, ನಾನು ಆಯ್ಕೆಯಾದಾಗ ಮಹಿ ಭಾಯ್ (ಧೋನಿ) ಹೇಳಿದ್ದ ಮಾತನ್ನು ನೆನಪಿಸಿಕೊಂಡೆ. ಇವತ್ತು ನೀನು ಚೆನ್ನಾಗಿ ಆಡು ಜನರು ಹೊಗಳುತ್ತಾರೆ. ಅದೇ ಜನ ಕೆಟ್ಟದಾಗಿ ಆಡಿದಾಗ ಬೈಯ್ಯುತ್ತಾರೆ. ಅದೆಲ್ಲವನ್ನೂ ಗಂಭೀರವಾಗಿ ತೆಗೆದುಕೊಳ್ಳದೇ ಆಟದ ಮೇಲಷ್ಟೇ ಗಮನ ನೀಡು ಎಂದಿದ್ದರು. ಅವರ ಮಾತು ನಿಜ. ಯಾವ ಜನ ನಿಂದಿಸಿದ್ದರೋ ಅದೇ ಮಂದಿ ನಾನು ಚೆನ್ನಾಗಿ ಆಡಿದ್ದಾಗ ಹಾಡಿ ಹೊಗಳಿದ್ದರು’ ಎಂದು ಸಿರಾಜ್ ಹೇಳಿದರು.


ಮೊಹಮ್ಮದ್ ಸಿರಾಜ್–ಎಎಫ್‌ಪಿ ಚಿತ್ರ